ಪುಸ್ತಕ ಪ್ರಪಂಚ

ಮೇ ೧೯೯೯



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೯ ಸಂಚಿಕೆ ೮

ಮೇ ೧೯೯೯

ಪರಿವಿಡಿ

ರಕ್ಷಾಪುಟ : ತಕಳಿ ಶಿವಶಂಕರಪಿಳ್ಳೆ

ಕೃಪೆ : ಎಂ.ಎಸ್. ಲಕ್ಷ್ಮಣಾಚಾರ್

PUSTAKA PRAPANCHA : Monthly

Published and printed by Karnataka State Adult Education Council, Mysore-6. Price: Rupees Ten

ಬಿಡಿಪ್ರತಿ : ರೂ. ೧೦

ವಾರ್ಷಿಕ ಚಂದಾ : ರೂ. ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

ಏಕೀಕರಣ ಚಿರಾಯುವಾಗಲಿ

ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್

ಕನ್ನಡವೆನಿಪ್ಪಾನಾಡು ಚೆಲ್ವಾಯ್ತು

ಅಖಂಡ ಕರ್ನಾಟಕ :
ಅಲ್ತೊ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ !

ಒಂಭತ್ತನೆಯ ಶತಮಾನದ ನೃಪತುಂಗನಿಂದ ಹಿಡಿದು ಇಪ್ಪತ್ತನೆಯ ಶತಮಾನದ ಕುವೆಂಪು ಅವರ ತನಕ, ಒಬ್ಬಿಬ್ಬರು ವಿನಾ ಎಲ್ಲ ಸಾಹಿತಿಗಳು ಏಕೈಕ ಅಖಂಡ ಕರ್ನಾಟಕದ ಕನಸು ಕಟ್ಟಿಕೊಂಡಿದ್ದರೆಂಬುದು ಅವರ ಅಭಿಮಾನಪೂರ್ವಕವಾದ ವರ್ಣನೆ ಘೋಷಣೆಗಳಿಂದ ವ್ಯಕ್ತವಾಗುತ್ತದೆ. ಬೇರೆ ಬೇರೆ ರಾಜ್ಯಗಳ ಪ್ರಜೆಗಳಾಗಿದ್ದರೂ ತಾವು ಅಖಂಡ ಕರ್ನಾಟಕದ ಪ್ರಜೆಗಳೆಂದೇ ಅವರು ತನ್ಮಯರಾಗಿ ಭಾವವಶರಾಗಿ ಬದುಕು ನಡೆಸುತ್ತಾರೆ. ಭಾರತೀಯ ಸ್ವಾತಂತ್ರ್ಯದೊಡನೆ ಭಾಷಾವಾರು ಪ್ರಾಂತ್ಯಗಳು ರಚನೆಗೊಳ್ಳುತ್ತವೆ, ಕರ್ನಾಟಕ ಏಕೀಕರಣ ಸುಲಭವಾಗುತ್ತದೆಂದು ಆಶಾಗೋಪುರವನ್ನು ಕಟ್ಟಿಕೊಂಡಿದ್ದವರಿಗೆ ವಿವೇಕಶೂನ್ಯ ರಾಜಕಾರಣಿಗಳ ವರ್ತನೆಯಿಂದ ನಿರಾಶೆಯಾಗುತ್ತದೆ. ಭಾಷೆಯೊಂದೇ ಪ್ರಾಂತ್ಯ ವಿಂಗಡಣೆಯ ಅಥವಾ ಗಡಿನಿರ್ಣಯದ ನಿಸರ್ಗ ಸಹಜ ಭೂನೈಜ ಸೂತ್ರ ಅಥವಾ ತತ್ತ್ವವೆಂಬುದನ್ನವರು ಮರೆಯುತ್ತಾರೆ. ಪೊಟ್ಟಿಶ್ರೀರಾಮುಲುವಿನ ಆತ್ಮಾರ್ಪಣೆಯಿಂದಾಗಿ ಆಂಧ್ರಪ್ರದೇಶ ಉದಯವಾದಾಗ ಭಾಷಾವಾರು ಪ್ರಾಂತರಚನಾಂದೋಲನ ಕಾವೇರುತ್ತದೆ.

ಭಾಷಾವಾರು ಪ್ರಾಂತ ರಚನೆಗೆ, ಅಂತೆಯೇ ಕರ್ನಾಟಕ ಏಕೀಕರಣಕ್ಕೆ ಕೇಂದ್ರ ಸರ್ಕಾರ ಎಷ್ಟರಮಟ್ಟಿಗೆ ವಿರೋಧ ಕಾರಣವಾಗಿತ್ತೊ, ಸ್ಥಳೀಯ ನಾಯಕರೂ ಅಷ್ಟರಮಟ್ಟಿಗೆ ಪ್ರತಿಕಾರಣರಾಗಿದ್ದುದು ನಿಜ. ಕರ್ನಾಟಕದ ನಿದರ್ಶನವನ್ನೆ ಗಮನಿಸಬಹುದು. ಇಲ್ಲಿ ಆಗ ಎರಡು ಪಕ್ಷಗಳಿದ್ದುವು. ಏಕೀಕರಣವಾದಿಗಳಿದ್ದಂತೆ ದ್ವಿಕರ್ಣಾಟಕವಾದಿಗಳೂ ಇದ್ದರು. ಏಕೀಕರಣವಾದರೆ, ತುಂಬ ಹಿಂದುಳಿದಿರುವ ತಮ್ಮ ಕಡೆಯ ಪ್ರದೇಶ ಮುಂದುವರಿದಿರುವ ಮೈಸೂರಿನೊಡನೆ ಸೇರಿಕೊಂಡು ತಮ್ಮದೂ ಮುಂದುವರಿಯಬಹುದು ; ಜತೆಗೆ ತಾವೇ ಬಹುಸಂಖ್ಯಾತರಾಗಿರಲಾಗಿ ರಾಜಕೀಯಾಧಿಕಾರ ತಮಗೆ ದೊರೆಯುತ್ತದೆಂದು ಏಕೀಕರಣವಾದಿಗಳು ಕನಸುತ್ತಾರೆ. ಅಂಥ ಸಂದರ್ಭದಲ್ಲಿ ತಮ್ಮ ಪ್ರದೇಶದ ಆದಾಯದಲ್ಲಿ ಬಹುಭಾಗ ಹಿಂದುಳಿದ ಪ್ರದೇಶಗಳಿಗೆ ವಿನಿಯೋಗವಾಗಿ, ತಮ್ಮ ಪ್ರದೇಶದ ಪ್ರಗತಿ ಕುಂಠಿತಗೊಳ್ಳುತ್ತದೆ, ರಾಜಕೀಯಾಧಿಕಾರ ಬಹು

ಸಂಖ್ಯಾತ ಕೋಮಿನ ಆಸ್ತಿಯಾಗುತ್ತದೆ, ರಾಜ್ಯಗಳು ಸಣ್ಣವಾಗಿದ್ದರೆ ಆಡಳಿತ ಸುಗಮವಾಗುತ್ತದೆ, ಎರಡೂ ಪ್ರದೇಶಗಳ ಅಭಿವೃದ್ಧಿ ಶೀಘ್ರಗೊಳ್ಳುತ್ತದೆ, ಹಿಂದಿ ವಲಯದಲ್ಲಿ ಮೂರ್ನಾಲ್ಕು ರಾಜ್ಯಗಳಿರುವುದಾದರೆ ಕನ್ನಡ ವಲಯದಲ್ಲಿ ಎರಡಿರ ಬಾರದೆ ಎಂಬುದು ದ್ವಿಕರ್ನಾಟಕವಾದಿಗಳ ವಾದ. ಎರಡೂ ಕಡೆಯೂ ಸ್ವಾರ್ಥಾ ಪೇಕ್ಷೆಯಿತ್ತೆಂಬುದು ನಿಜ. ಈ ನಿಟ್ಟುಗಳಲ್ಲಿ ಎರಡು ಪ್ರಬಲ ಕೋಮುಗಳು ಪರಸ್ಪರ ವಿರೋಧಿಗಳಾಗಿದ್ದರೆ, ಇತರ ಕೋಮುಗಳು ತಟಸ್ಥವಾಗಿ ತಮಾಷೆ ನೋಡುತ್ತಿದ್ದುವು.

ಕೋಮುಗಳು ವಿರೋಧಿಗಳಾಗಿದ್ದುವೆಂದರೆ ತಪ್ಪಾಗುತ್ತದೆ; ಕೆಲವರು ವಿದ್ಯಾವಂತರು ಮಾತ್ರ. ವಿದ್ಯಾವಂತರ ಸೇಡು ಕೋಪ ದ್ವೇಷಗಳು ಕ್ರೂರ, ಹಾನಿಕಾರಕ ಹಾಗೂ ದೀರ್ಘಕಾಲಿಕ; ಅವಿದ್ಯಾವಂತರ ಸೇಡು ಅಲ್ಪಕಾಲಿಕ. ವಿದ್ಯಾವಂತರಲ್ಲಿಯೂ ಹಲವರು ಸಜ್ಜನರಿದ್ದಾರೆ; ಕೆಲವು ಕ್ರೂರಕರ್ಮಿಗಳು ಮಾತ್ರ ದ್ವೇಷ ಸಾಧನೆಯಲ್ಲಿ ಸದಾ ನಿರತರಾಗುತ್ತಾರೆ. ಆದರೆ ಏಕೀಕರಣ ಪರ–ವಿರೋಧಿ ಚಳುವಳಿಗಳು ರಾಜಕಾರಣಿಗಳಿಗೆ ಮಾತ್ರ ಸೀಮಿತವಾಗಿದ್ದುವು. ಸಾಮಾನ್ಯವಾಗಿ ಸಾಹಿತಿಗಳೆಲ್ಲರು ಸಾಂಸ್ಕೃತಿಕ ದೃಷ್ಟಿಯಿಂದ ಏಕೀಕರಣ ಪರವಾಗಿದ್ದರು. ವಿರೋಧಿ ಚಳುವಳಿ ಅಷ್ಟೇನೂ ಪ್ರಖರವಾಗಿರಲಿಲ್ಲ. ಲಿಂಗ ಜಾತಿ ಭೇದವಿಲ್ಲದೆ ಕೇಂದ್ರ ನಾಯಕರು ವಿರೋಧಿಗಳನ್ನೆತ್ತಿ ಕಟ್ಟುತ್ತಿದ್ದುದೂ ಉಂಟು. ಆಗ ಮೈಸೂರಿನ ಮುಖ್ಯಮಂತ್ರಿಯಾಗಿದ್ದ ಕೆ. ಹನುಮಂತಯ್ಯನವರು ಮೊದ ಮೊದಲು ತಟಸ್ಥರಾಗಿದ್ದರೆಂದೇ ಹೇಳಬೇಕು.ಅವರು ಯಾವ ರಾಷ್ಟ್ರಕ್ಕಾದರೂ ಕೀರ್ತಿ ತರಬಲ್ಲ ಧೀರ ಧೀಮಂತ ಮುತ್ಸದ್ದಿ ರಾಜಕಾರಣಿ. ರಾಜಕೀಯ ನಾಡಿ ಪರೀಕ್ಷೆಯಲ್ಲಿ ನಿಸ್ಸೀಮರು. ರಾಷ್ಟ್ರಹಿತ ದೃಷ್ಟಿಯಿಂದ ಏಕೀಕರಣ ಅನಿವಾರ್ಯವೆಂಬುದನ್ನವರು ಬಲ್ಲರು. ತಾವು ಹೋದೆಡೆ ಬಂದೆಡೆ, ತಮ್ಮ ಬಳಿಗೆ ಬಂದ ಜನರೊಡನೆ ಆ ವಿಷಯ ಪ್ರಸ್ತಾಪಿಸುತ್ತಾರೆ; ಏಕೀಕರಣದ ಪರವಾಗಿ ಅವರನ್ನೊಲಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಕೊನೆಗೆ ಯಾವ ಭೂಭಾಗವಾದರೂ ಮೈಸೂರಿನಲ್ಲಿ ವಿಲೀನಗೊಳ್ಳಲು ಬಯಸಿದ್ದಾದರೆ, ಅದನ್ನು ಸ್ವಾಗತಿಸುತ್ತೇವೆ ಎಂದು ಘೋಷಿಸುತ್ತಾರೆ. ಬಳ್ಳಾರಿ ದಕ್ಷಿಣ ಕನ್ನಡ ಜಿಲ್ಲೆಗಳನ್ನು ಸೇರಿಸಿಕೊಂಡು ಏಕೀಕರಣಕ್ಕೆ ನಾಂದಿ ಹಾಡುತ್ತಾರೆ, ತಳಹದಿ ನಿರ್ಮಿಸುತ್ತಾರೆ, ಮೈಸೂರಿನ ಜನರ ಮನಸ್ಸನ್ನು ಹದಗೊಳಿಸುತ್ತಾರೆ. ಅವರೇನಾದರೂ ವಿರೋಧಿ ಗುಂಪಿಗೆ ಸೇರಿಕೊಂಡಿದ್ದರೆ, ಪರಿಸ್ಥಿತಿ ಸಂಪೂರ್ಣವಾಗಿ ಬದಲಾಗುತ್ತಿತ್ತು.

ಭಾಷಾವಾರು ಪ್ರಾಂತ ನಿರ್ಮಾಣಕ್ಕಾಗಿ, ಕರ್ನಾಟಕ ಏಕೀಕರಣಕ್ಕಾಗಿ ಹಲವರು ಅವಿಶ್ರಾಂತವಾಗಿ ದುಡಿದಿದ್ದಾರೆ; ದುಡಿದವರಲ್ಲಿ ಕೆ. ಎಂ. ರುದ್ರಪ್ಪ, ಆರ್. ಅನಂತರಾಮನ್ ಮುಂತಾದ ಅನೇಕರು ಮೂಲೆಗುಂಪಾಗಿದ್ದಾರೆ, ಕೆಲವರು ಮಾತ್ರ ತಮ್ಮ ದುಡಿಮೆಗೆ ಮೀರಿದ ಸವಲತ್ತುಗಳನ್ನು ಗಿಟ್ಟಿಸಿಕೊಂಡಿದ್ದಾರೆ. ಆದರೆ

ಈ ದುಡಿಮೆಗಾರರ ಪೈಕಿ ಎಸ್. ನಿಜಲಿಂಗಪ್ಪನವರು ಪ್ರತ್ಯೇಕವಾಗಿ ನಿಲ್ಲುತ್ತಾರೆ. ಅವರು ಸಂಕಲ್ಪಬದ್ಧರಾಗಿ, ದೃಢ ಹಟದಿಂದ, ತ್ಯಾಗಶೀಲರಾಗಿ ಹೋರಾಟ ನಡೆಸದಿದ್ದರೆ ಏಕೀಕರಣ ವಾಸ್ತವ ಸತ್ಯವಾಗಿ ಪರಿಣಮಿಸುತ್ತಿರಲಿಲ್ಲ. ಭಾಷಾವಾರು ಪ್ರಾಂತ ವಿಂಗಡಣೆಯೂ ಅಷ್ಟೇ. ಅವರೊಬ್ಬರು ಪ್ರಯತ್ನವನ್ನು ಶಿಥಿಲಗೊಳಿಸಿದ್ದರೆ, ಅವರಿಗೆ ಜವಹರ್ ನೆಹ್ರೂ ಯಾವ ಪದವಿಯನ್ನಾದರೂ ಕೊಡಲು ಸಿದ್ಧರಾಗಿದ್ದರು. ಶಿಥಿಲಗೊಳಿಸುವಂತೆ ನೆಹ್ರೂ ಎಸ್ಸೆನ್ ಅವರನ್ನು ಕರೆಸಿ ಒತ್ತಾಯಪಡಿಸಿದ್ದೂ ಉಂಟು. ರಾಷ್ಟ್ರಪತಿ ಸ್ಥಾನ ಮೊದಲುಗೊಂಡು, ರಾಷ್ಟ್ರದಲ್ಲಿ ಲಭ್ಯವಾಗಬಹುದಾದ ಯಾವ ಹುದ್ದೆಗಾದರೂ ಸರ್ವಾರ್ಹವಾಗಿದ್ದ ಗಣ್ಯರವರು. ಏಕೀಕರಣ ಅವರಿಗೊಂದು ವ್ರತವಾಗಲಾಗಿ, ತಮಗೆ ಸಿಗಬೇಕಾಗಿದ್ದ ಸವಲತ್ತುಗಳಿಂದ ಅವರು ವಂಚಿತರಾಗುತ್ತಾರೆ. ಏಕೀಕರಣ ಅವರ ದೃಷ್ಟಿಯಲ್ಲೊಂದು ರಾಜಕೀಯ ತತ್ತ್ವವಾಗಿದ್ದು, ಸಾಂಸ್ಕೃತಿಕ ಸಿದ್ಧಾಂತವಾಗಿತ್ತೇ ಹೊರತು, ಸ್ವಾರ್ಥಮೂಲ ಆಸಕ್ತಿ ಆಶೆ ಆಮಿಷಗಳ ಸಾಧನಾ ಮಾರ್ಗವಾಗಿರಲಿಲ್ಲ. ಏಕೀಕರಣ ಘಟಿಸಿದ ನಾಲ್ಕು ದಶಕಗಳ ನಂತರ ಅಂದಿನ ಏಕೀಕರಣವಾದಿಗಳೆ ಪ್ರತ್ಯೇಕತಾವಾದವನ್ನೆಬ್ಬಿಸಿರುವಾಗ ಆಗಿನ ಅವರ ನಿಷ್ಠೆ ಪ್ರಾಮಾಣಿಕತೆಗಳ ಬಗ್ಗೆ ಸಂದೇಹ ಸಹಜವಾಗಿಯೇ ಮೂಡುತ್ತದೆ.

ಆಯಾ ರಾಜ್ಯದ ರಾಜಧಾನಿ ಅಲ್ಲಿಯ ಕೇಂದ್ರ ಸ್ಥಾನದಲ್ಲಿರಬೇಕು, ಬೆಂಗಳೂರೊಂದು ಮೂಲೆಯಾಯಿತು, ಅಲ್ಲಿ ಅನ್ಯಭಾಷೆಗಳ ಜನರ ಪ್ರಾಬಲ್ಯ ಹೆಚ್ಚಾಗಿದೆ, ಅಲ್ಲಿಯ ಕಚೇರಿ, ಕಂಪೆನಿ, ಕಾರ್ಖಾನೆಗಳನ್ನು ಉತ್ತರ ಕರ್ನಾಟಕಕ್ಕೆ ವರ್ಗಾಯಿಸಬೇಕೆನ್ನುವುದು ಕೆಲವರ ಹಟ, ವೈಯಕ್ತಿಕ ರೋಷ. ಜಗತ್ತಿನ ಅನೇಕ ರಾಷ್ಟ್ರಗಳ ರಾಜಧಾನಿಗಳು ಆ ದೇಶಗಳ ಮೂಲೆಯಲ್ಲಿವೆಯೆಂಬುದು, ವಾಷಿಂಗ್‌ಟನ್ ಲಂಡನ್ ಹೊಸ ದೆಹಲಿಗಳು ಅಂಥವೆಂಬುದು ಆರೋಪವೆತ್ತಿರುವ ಮಿತ್ರರಿಗೆ ತಿಳಿಯದ ವಿಷಯವೇನಲ್ಲ. ದೆಹಲಿಯಿಂದ ದೌಲತಾಬಾದಿಗೆ, ಮತ್ತೆ ದೆಹಲಿಗೆ ಇಂಡಿಯಾದ ರಾಜಧಾನಿಯನ್ನು ಬದಲಾಯಿಸಿದ ಸುಲ್ತಾನನ ಐಲಿಗೆ ಮತ್ತೊಂದು ಹೆಸರು ತೊಗಲಕತನವಲ್ಲವೆ? ಜಗತ್ತಿನಲ್ಲಿ ಅಂಥ ಪ್ರಯೋಗ ಅದೊಂದೇ ಅಲ್ಲವೆ? ಸದ್ಯ ಕರ್ನಾಟಕದ ರಾಜಧಾನಿ ಬದಲಾವಣೆಯಾಗಬೇಕೆಂದು ಯಾರೂ ಕೇಳಿಲ್ಲ. ಹಿಂದಿನಿಂದ ಬಂದ ಹಲವಾರು ಐತಿಹಾಸಿಕ ಕಾರಣಗಳಿಗಾಗಿ ಲಂಡನ್ ದೆಹಲಿ ಬೆಂಗಳೂರಂಥ ನಗರಗಳು ರಾಜಧಾನಿಗಳಾಗಿವೆ. ಅವುಗಳ ಬದಲಾವಣೆ ಸಾಧ್ಯವೇ ಇಲ್ಲ. ರಾಜಧಾನಿ ಎಂದಮೇಲೆ ಕಚೇರಿಗಳು ಕಂಪೆನಿಗಳು ಕಾರುಬಾರಿ ಸಂಸ್ಥೆಗಳು ಅಲ್ಲಿ ನೆಲೆಗೊಳ್ಳಬೇಕೆಂಬುದು ಸಹಜ, ಸೂಕ್ತ. ದೇಶ ವಿದೇಶೀಯ ವಾಣಿಜ್ಯೋದ್ಯಮಿಗಳಿಗೆ, ಬಂಡವಾಳ ಹೂಡಿಕೆಗೆ ಬೆಂಗಳೂರೇ ಬೇಕು; ಅಲ್ಲಿ ಅವಕಾಶವಿಲ್ಲವಾದರೆ, ಪುಣೆಗೊ ಹೈದರಾಬಾದಿಗೊ ಜಾರುತ್ತಾರೆ. ಸಾಮಾನ್ಯ ತಿಳಿವಳಿಕೆ ಇದ್ದವರಿಗೂ ಈ ಸಂಗತಿ ಅರ್ಥವಾಗಬೇಕು.

ಬೆಂಗಳೂರು ಈಗ ಯಾವೊಂದು ರಾಜ್ಯಕ್ಕೂ ಪ್ರತ್ಯೇಕವಾಗಿ ಸೇರಿದ್ದಲ್ಲ. ಅದು ಇಂಡಿಯಾ ದೇಶದ ನಗರ ರಾಣಿಯೆಂದು, ಜಗತ್ತಿನ ಉಪರಾಜಧಾನಿಯೆಂದು ಪ್ರಖ್ಯಾತವಾಗಿದೆ. ಶೇಖ್ ಅಬ್ದುಲ್ಲಾ ಮೊದಲುಗೊಂಡು ನಾಡಿನ ಬಹುಮಂದಿ ನಾಯಕರು ಬೆಂಗಳೂರಲ್ಲಿ ನಿವೇಶನ ಪಡೆಯಲು ಪ್ರಯತ್ನಿಸುವುದುಂಟು. ಕರ್ನಾಟಕದ ಎಲ್ಲ ಕಡೆಯ ಜನ ಅಲ್ಲಿ ನೆಲಸಿದ್ದಾರೆ. ಅದು ಮಿನಿ ಕರ್ನಾಟಕ ಮಾತ್ರವಲ್ಲ, ಮಿನಿ ಇಂಡಿಯಾ ಆಗಿದೆ. ಅದು ಸರ್ವ ಸಮದರ್ಶಿಗಳ, ವಿಶ್ವಬಂಧುಗಳ, ಲಿಂಗ ಜಾತಿ ವರ್ಣ ವರ್ಗ ಮತ ವೃತ್ತಿ ಭೇದಗಳನ್ನು ಮೀರಿದ ಜಗತ್ತಿನ ಸಕಲ ಪ್ರಜೆಗಳ ಸ್ವರ್ಗಧಾಮವಾಗಿದೆ; ರಾಜಕಾರಣಿಗಳಿಗೆ, ವ್ಯಾಪಾರಿಗಳಿಗೆ, ಕೈಗಾರಿಕೋದ್ಯಮಿಗಳಿಗೆ, ಧಾರ್ಮಿಕ ಗುರುಗಳಿಗೆ, ವಿದ್ವಾಂಸರಿಗೆ, ಸಾಹಿತಿಗಳಿಗೆ, ಸಿನಿಮಾ ನಿರ್ಮಾಪಕರಿಗೆ, ಪ್ರವಾಸಿಗಳಿಗೆ, ಪತ್ರಿಕಾ ಸಾರ್ವಭೌಮರಿಗೆ, ಸಾಹಸಿಗರಿಗೆ, ಹಳ್ಳಿಗಳಲ್ಲಿ ಕೆಟ್ಟು ಬಂದವರಿಗೆ, ಕೊಳೆಗೇರಿಗಳಿಗೆ—ಎಲ್ಲರಿಗೂ ಅದು ಆಸರೆಯಾಗಿದೆ, ಮೋಹಕ ಮಂಗಳಕರ ರಮ್ಯಾಗಾರವಾಗಿದೆ, ಭಾವಾತ್ಮಕ ಸಂಪತ್ತಾಗಿದೆ. ಒಂದಲ್ಲ ಒಂದು ನೆಪದಿಂದ ಅದು ಸಮಸ್ತ ಭಾರತೀಯರಿಗೆ, ಅಂತೆಯೇ ಅನೇಕ ವಿದೇಶೀಯರಿಗೆ ಲಾಭದಾಯಕ ನಿಧಿಯಾಗಿದೆ. ಬೆಂಗಳೂರು ನಿವಾಸಿಗಳಿಗೆ ಪದವಿ ಪ್ರಶಸ್ತಿಗಳು ದೊರೆಕೊಂಡದ್ದಾದರೆ ಅವು ಎಲ್ಲ ಕನ್ನಡಿಗರಿಗೆ ಸಂದ ಗೌರವಗಳೆಂದು ಸಜ್ಜನರು ಭಾವಿಸಬೇಕಾಗಿದೆ. ಕೆಲವು ಮಾತ್ಸರ್ಯ ದ್ವೇಷ ಸಂಕುಚಿತ ದೃಷ್ಟಿಯಿಂದ ಪ್ರೇರಿತರಾಗಿ ಗುಲ್ಲೆಬ್ಬಿಸುವುದು ಭಾವೈಕ್ಯದ ದೃಷ್ಟಿಯಿಂದ ಸಾಧುವಲ್ಲ.

ಈಗಿರುವ ಮೀಸಲಾತಿಗಳ ಜತೆಗೆ ಭೌಗೋಳಿಕ ಮೀಸಲಾತಿಗಾಗಿ ಬೊಬ್ಬೆ ಹಾಕುತ್ತಿರುವುದು ದೇಶದ ಆರೋಗ್ಯದ ದೃಷ್ಟಿಯಿಂದ ಪಥ್ಯವಲ್ಲ. ಲೋಕಸೇವಾ ಆಯೋಗದಲ್ಲಿ ಎಲ್ಲ ಕಡೆಯ ಸದಸ್ಯ ಪ್ರತಿನಿಧಿಗಳಿರಬೇಕಾದ್ದು ಸರಿ. ಯಾವ ಕಡೆಯವರಿಗೂ ತಾರತಮ್ಯವಾಗದಂತೆ, ಅನ್ಯಾಯವಾಗದಂತೆ ಎಚ್ಚರಿಕೆ ವಹಿಸಬೇಕಾದ್ದು ಆಯೋಗದ ಕರ್ತವ್ಯ. ಆದರೆ ಭೌಗೋಳಿಕ ಆಧಾರದ ಮೇಲೆ ಉನ್ನತ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕೆಂಬುದು ಬೌದ್ಧಿಕ ದಿವಾಳಿತನದ ಕುರುಹೆಂದೇ ಹೇಳಬಹುದಾಗಿದೆ. ಪ್ರಜಾಪ್ರಭುತ್ವ ಯುಗದಲ್ಲಿ ಪ್ರಗತಿಪರ ದೇಶದ ಆಡಳಿತ ಸಮರ್ಥವಾಗಿರಲು, ಬುದ್ಧಿವಂತ ಅಧಿಕಾರಿಗಳ ನೆರವು ಬೇಕೆಂಬುದನ್ನು ದೇಶಹಿತಾಸಕ್ತರು ಮರೆಯಬಾರದು. ಕೇಂದ್ರ ನಡಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭೌಗೋಳಿಕ ಮೀಸಲಾತಿಯಿಲ್ಲ. ಮೀಸಲಾತಿಯ ಭೂತಸಂಪುಟವನ್ನು ತೆರೆದದ್ದಾದರೆ, ತಾಲ್ಲೂಕು ಹೋಬಳಿ ಮಟ್ಟದವರೆಗೂ ಸಾಂಕ್ರಾಮಿಕ ರೋಗ ಪಸರಿಸೀತೆಂದು ಹೇಳಬೇಕಾಗಿದೆ.

ಏಕೀಕರಣದ ನಂತರ ಉತ್ತರ ಕರ್ನಾಟಕ ಅಭಿವೃದ್ಧಿಯಾಗಲಿಲ್ಲವೆಂಬುದು ಮತ್ತೊಂದು ಕೂಗು. ಅದಕ್ಕೂ ಸತ್ಯವನ್ನು ಮರೆಮಾಚಿ, ಬೆಂಗಳೂರನ್ನು ಹಳೆಯ ಮೈಸೂರನ್ನು, ಪರೋಕ್ಷವಾಗಿ ಮತ್ತೊಂದನ್ನು ಕೋಮನ್ನು ದೂರುತ್ತಿರುವುದು,

ಏಕೀಕರಣ ಚಳುವಳಿಯ ಕಾಲದಲ್ಲಿಯೂ ಇಲ್ಲದ ಹಿಂಸಾಚಾರವನ್ನು ಪ್ರಚೋದಿಸು ವುದು ಮನಸ್ಸುಗಳನ್ನೊಡೆಯುವುದು ಜಾಣತನದ ಲಕ್ಷಣವಲ್ಲ. ಉತ್ತರ ಕರ್ನಾಟಕದ ಮುಖಂಡರೇ ಬಹುಕಾಲ ಮುಖ್ಯಮಂತ್ರಿಗಳಾಗಿರುವಾಗ, ಆಯಾಯ ಪ್ರದೇಶದ ಪ್ರಗತಿಯ ಹೊಣೆ ಅಲ್ಲಲ್ಲಿಯ ಶಾಸಕರಿಗೆ, ಸಂಸದರಿಗೆ ಸೇರಿರುವಾಗ, ನಿಷ್ಕಾರಣವಾಗಿ ಸಂಬಂಧಪಡದವರನ್ನು ನಿಂದಿಸುವುದು ಅಸಹಾಯಕತೆಯ, ಅವಿವೇಕದ, ಮನೋ ರೋಗದ ಲಕ್ಷಣವೆಂದು ಹೇಳಬೇಕಾಗಿದೆ. ಕರ್ನಾಟಕದ ಎಲ್ಲ ಭಾಗಗಳು ಸಮಾನ ವಾಗಿ ಮುಂದುವರಿಯಬೇಕಾದ್ದು, ಯಾವ ಭಾಗಕ್ಕೂ ಅನ್ಯಾಯವಾಗಬಾರ ದೆಂಬುದು, ನಿಸರ್ಗ ಸಹಜವಾಗಿ ಐತಿಹಾಸಿಕ ಕಾರಣಗಳಿಂದಾಗಿ ಮುಂದುವರಿದಿರುವ ಪ್ರದೇಶದ ಬಗ್ಗೆ ನಿರ್ಮಾತ್ಸರ್ಯದಿಂದ ವರ್ತಿಸಬೇಕಾದ್ದು ಸರಿಯಾದ ಮಾರ್ಗ. ಎಮ್ಮೆಗೆ ಕಾಯಿಲೆ ಬಂದಾಗ ದನಕ್ಕೆ ಬರೆ ಎಳೆದರೆ ಪ್ರಯೋಜನವಾಗುವುದೆ? ಸೊಸೆಯ ಮೇಲಣ ಕೋಪವನ್ನು ಕೊತ್ತಿಯ ಮೇಲೆ ತೀರಿಸಿಕೊಳ್ಳುವುದು ನ್ಯಾಯವೆ? ವೈಯಕ್ತಿಕ ದ್ವೇಷ ಮಾತ್ಸರ್ಯಗಳನ್ನು ಗುಂಪೀಕರಣ ಮಾಡುವುದು ತರವೆ? ಹಾವು ಕಚ್ಚಿದರೆ ಒಬ್ಬ ಸಾಯುತ್ತಾನೆ; ಆಯುಧದಲ್ಲಿರಿದರೆ ಸಾಯುವವನೊಬ್ಬ; ಆದರೆ ರಾಜಕಾರಣಿಯ ಕುತಂತ್ರ ದೇಶವನ್ನೇ ಮುಕ್ಕುತ್ತದೆ. ಆದಾಗಬಾರದು.

ನಿಜಲಿಂಗಪ್ಪ ಆಲೂರು ವೆಂಕಟರಾವ್ ಅಂದಾನಪ್ಪ ದೊಡ್ಡಮೇಟಿ ಮುಂತಾದ ಸನ್ಮಾನ್ಯರು ಸಾಧಿಸಿದ ಏಕೀಕರಣವನ್ನು, ಕುವೆಂಪು ಪೈ ಅನಕೃರಂಥ ಮಹಾ ಸಾಹಿತಿಗಳು ಕಂಡ ಅಖಂಡ ಕರ್ನಾಟಕದ ಕನಸನ್ನು ಒಡೆಯುವ ಯತ್ನ ಕುಕಾರ್ಯ ವೆಂದು, ದ್ರೋಹಾತ್ಮಕವೆಂದು ಸಂಕಟದಿಂದ ಕ್ಷಮಾಯಾಚನಪೂರ್ವಕವಾಗಿ ಹೇಳ ಬೇಕಾಗಿದೆ.

ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯ ಶಿವ
ಸತ್ತಂತಿಹರನು ಬಡಿದೆಚ್ಚರಿಸು
ಹೊಟ್ಟೆಯಕಿಚ್ಚಿಗೆ ಕಣ್ಣೀರ್ ಸುರಿಸು
ಕಚ್ಚಾಡುವರನು ಕೂಡಿಸಿ ಒಲಿಸು
ಒಟ್ಟಿಗೆ ಬಾಳುವ ತೆರದಲಿ ಹರಸು!

ದೇಜಗೌ

ಅಗಲಿದ ಅಪ್ರತಿಮ ಕಥೆಗಾರ-ತಕಳಿ ಶಿವಶಂಕರ ಪಿಳ್ಳೈ

ಸಿ. ನಾಗಣ್ಣ
ಇಂಗ್ಲಿಷ್ ಪ್ರಾಧ್ಯಾಪಕರು
ಮಹಾರಾಜ ಕಾಲೇಜು
ಮೈಸೂರು

ಎಂಭತ್ತಾರು ವರ್ಷಗಳ ತುಂಬು ಜೀವನ ನಡೆಸಿ ದಿನಾಂಕ : ೧೦-೪-೧೯೯೯ ರಂದು ತಕಳಿ ಶಿವಶಂಕರಪಿಳ್ಳೈ ಅವರು ನಿಧನರಾದರು. ಅವರು ಜನಿಸಿದ್ದು ೧೭ ನೇ ಏಪ್ರಿಲ್ ೧೯೧೪ ರಲ್ಲಿ. ಸಮೀಪದ ಕರ್ನಾಟಕದಲ್ಲಿ ಪಿಳ್ಳೈ ಅವರ ನಿಧನವಾರ್ತೆ ಕಾಳ್ಗಿಚ್ಚಿನಂತೆ ಹಬ್ಬಲಿಲ್ಲ ; ಜನರು ಕಂಬನಿ ಮಿಡಿಯಲಿಲ್ಲ. ಅಪ್ರತಿಮ ಕಥೆಗಾರನೊಬ್ಬನು ಕಾಲವಾದ ಘಟನೆ ಒಂದು ಸಾಮಾನ್ಯ ಸಂಗತಿಯಂತೆ ಜನಮಾನಸದಲ್ಲಿ ಎರಡು ಕ್ಷಣ ಸುಳಿದು ಮಾಯವಾಯ್ತು. ಕುವೆಂಪು, ಕಾರಂತರು ನಿಧನರಾದಾಗ ಕೇರಳದಲ್ಲಿ ಯಾವ ಬಗೆಯೊದ ಪ್ರತಿಕ್ರಿಯೆ ಕಂಡಿತೊ ತಿಳಿದುಬರಲಿಲ್ಲ. ನಮ್ಮ ಹಲವು ಬರಹಗಾರರು ಅಲ್ಲಿ ಜನಪ್ರಿಯರಾಗಿರುವುದಂತೂ ನಿಜ. ತನ್ನ ಹೊಸ ಶೈಲಿ ಹಾಗೂ ನಿರೂಪಣಾ ಕೌಶಲ್ಯದಿಂದ ಕೃಷ್ಣ ಆಲನಹಳ್ಳಿ ಕೇರಳದಲ್ಲಿ ಮನೆಮಾತಾಗಿದ್ದರು. ಕುವೆಂಪು ಅವರ ಬಗ್ಗೆ ಅಪರಿಮಿತವಾದ ಭಕ್ತಿಯಿದೆ ಆ ಜನರಿಗೆ ಎಂಬುದನ್ನು ಕೇಳಿದ್ದೇನೆ. ಕಾರಂತರ ಹಲವು ಕೃತಿಗಳು ಮಲೆಯಾಳಕ್ಕೆ ತರ್ಜುಮೆಯಾಗಿವೆ. ಆದಾಗ್ಯೂ ಅತಿ ಸಮೀಪದ ಭಾಷೆಗಳೆರಡರ ನಡುವಿನ ಬಾಂಧವ್ಯ ಸಾಲದೆಂದು ಮನಸ್ಸು ಮುದುಡುತ್ತದೆ. ಹಾಗಾಗಿ ತಕಳಿಯವರ ನಿಧನಾನಂತರ ಈ ತಾಕಿನಲ್ಲಿ ಯಾವ ಶ್ರದ್ಧಾಂಜಲಿ ಸಭೆ ಏರ್ಪಾಟಾದದ್ದು ಕಂಡು ಬರಲಿಲ್ಲ.

ಕಣ್ಮರೆಯಾಗುತ್ತಿದ್ದ ತಲೆಮಾರೊಂದರ ಪ್ರತೀಕದಂತಿದ್ದ ತಕಳಿಯವರು ನಿರ್ಗಮಿಸಲು ಸಿದ್ಧವಾಗುತ್ತಿದ್ದ ಕಾಲಕ್ಕೆ ಕೇರಳದ ನೆಲದ ಅರುಂಧತಿ ರಾಯ್ ಇಂಗ್ಲಿಷ್‌ನಲ್ಲಿ ಬರೆದ "ಎ ಗಾಡ್ ಆಫ್ ಸ್ಮಾಲ್ ಥಿಂಗ್ಸ್" ಎಂಬ ಕಾದಂಬರಿ ಜಗತ್ತಿನಾದ್ಯಂತ ಬಹಳ ಬಿರುಸಿನಿಂದ ಬಿಕರಿಯಾಗುತ್ತಿತ್ತು. ಈಗಷ್ಟೇ ತಾರುಣ್ಯದಿಂದ ಮುಂದಿನ ಘಟ್ಟಕ್ಕೆ ಹೆಜ್ಜೆ ಇಟ್ಟ ಅರುಂಧತಿ ರಾಯ್‌ಗೆ ತಕಳಿಯಂಥ ಕಥೆಗಾರರು ಹೇಳದೇ ಬಿಟ್ಟಿರುವುದನ್ನು ಹೇಳಲು ಸಾಧ್ಯವಾಯಿತೆ ? ಆ ಕಾರಣದಿಂದ ಈ ಕೃತಿ ಇಷ್ಟು ಜನಾದರಣೆ ಪಡೆದುಕೊಂಡಿತೆ ? ರಷ್ಯಾ ಭಾಷೆಯ ಕೃತಿಕಾರರನ್ನು ಕುರಿತು ಒಂದು ಮಾತು ಪ್ರಚಲಿತವಿದೆ. ರಷ್ಯಾದ ಲೇಖಕರೆಲ್ಲರೂ ಗೊಗೋಲ್‌ನ "ಓವರ್‌ಕೋಟ್"ನ ಜೇಬಿನಿಂದ ಇಳಿದು ಬಂದವರು ಎಂಬುದು

ಆ ಮಾತು. "ಓವರ್ ಕೋಟ್" ಗೊಗೋಲ್‌ನ ಸುಪ್ರಸಿದ್ಧ ನೀಳ್ಗತೆ.

ಮಲೆಯಾಳಂ ಭಾಷೆಯಲ್ಲಿ ಇಂದು ಕ್ರಿಯಾಶಾಲಿಗಳಾಗಿ ಬರೆಯುತ್ತಿರುವ ಕಥೆಗಾರರ ಒಂದು ಸಣ್ಣ ಪಟ್ಟಿಯನ್ನು ಕೊಡಬೇಕೆನಿಸುತ್ತಿದೆ. ಸಿ. ವಿ. ಶ್ರೀರಾಮನ್, ವೈಶಾಖನ್, ಜಯನಾರಾಯಣನ್, ಅಕ್ಬರ್ ಕಕ್ಕತ್ತಿಲ್, ಯು. ಕೆ. ಕುಮಾರನ್ ಶತ್ರುಘ್ನನ್, ಅಶೋಕನ್ ಚರುವಿಲ್, ಅಷ್ಟಮೂರ್ತಿ, ಮಾನಸಿ, ಪಿ. ಎ. ದಿವಾಕರನ್, ಎಂ. ಸುಧಾಕರನ್, ಕೆ. ರಘುನಾಥನ್, ಎಸ್. ಟಿ. ಬಾಲಚಂದ್ರನ್ ಇತ್ಯಾದಿ. ನವ್ಯೋತ್ತರ ಪರಂಪರೆಯಲ್ಲಿ ಬರೆಯುತ್ತಿರುವ ಇಂದಿನ ಈ ಬರಹಗಾರರು ವೈಕಂ ಮುಹಮ್ಮದ್ ಬಷೀರ್ ಹಾಗೂ ತಕಳಿ ಶಿವಶಂಕರ ಪಿಳ್ಳೈಯವರಿಂದ ಕಲಿತು ಮುಂದುವರಿದಿರುವುದಾಗಿ ತಿಳಿಸುತ್ತಾರೆ. ವಸ್ತುನಿಷ್ಠ ನಿರೂಪಣೆ, ಕಥಾರೂಪಕ್ಕೆ ಬದ್ಧರಾಗದಿರುವ ಸ್ವಾತಂತ್ರ್ಯ, ಭಾಷೆಯ ಮೇಲಿನ ಪ್ರಯೋಗ—ಇವೆಲ್ಲವುಗಳನ್ನು ಪ್ರಕಟಿಸುತ್ತವೆ. ಈ ನವೀನ ಬರಹಗಾರರು ಹಳೆಯ ತಲೆಮಾರಿನವರಿಂದ ಕಲಿತದ್ದು ಬಹಳವಿದೆ. ಆ ಕಾರಣದಿಂದಲೇ ಒಂದು ಸಾಹಿತ್ಯ ಪರಂಪರೆಯು ಸೃಷ್ಟಿ ಸಾಧ್ಯವಾಗುತ್ತದೆ.

ಹೊಸ ಹುರುಪಿನ ಬರಹಗಾರರೆಂದು ಖ್ಯಾತಿ ಗಳಿಸಿದ್ದ ಕೃಷ್ಣ ಆಲನಹಳ್ಳಿ ವೈಕಂ ಬಷೀರರ "ನನ್ನ ಅಜ್ಜನಿಗೊಂದು ಆನೆಯಿತ್ತು" ಕಾದಂಬರಿಯನ್ನು ಓದಿದ ಬಳಿಕ ಇದರ ಕೃತಿಕಾರನನ್ನು ಹುಡುಕಿಕೊಂಡು ಹೊರಟ ಪ್ರಸಂಗವನ್ನು ಕೃಷ್ಣ ಚೆನ್ನಾಗಿ ನಿರೂಪಿಸಿದ್ದಾರೆ. ವೈಕಂ ಮತ್ತು ಶಿವಶಂಕರ ಪಿಳ್ಳೈ ತಮ್ಮ ಕೃತಿಗಳ ಮೂಲಕ ಕೇರಳದ ಗಡಿಯಾಚೆ ಹೃದಯಗಳನ್ನು ಮುಟ್ಟಿದ ಬಗೆ ಕೌತುಕಮಯವಾದದ್ದು. 'ಕರಾವಳಿ ಬೆಸ್ತರ ಸಾಂಪ್ರದಾಯಿಕ ಮತ್ತು ಸಮುದಾಯ ಜೀವನವನ್ನು ಸುಂದರವಾಗಿ ಚಿತ್ರಿಸುವ' ಪಿಳ್ಳೈಯವರ "ಚೆಮ್ಮೀನ್" ಪ್ರಕಟವಾದದ್ದು ೧೯೫೬ರಲ್ಲಿ. ತರುವಾಯ ಚಲನಚಿತ್ರವಾಗಿ ಅದು ರಾಷ್ಟ್ರದಾದ್ಯಂತ ಪ್ರದರ್ಶನವಾಗಿ ಕೇರಳದ ಜನಜೀವನವನ್ನು ಎಲ್ಲರಿಗೆ ಪರಿಚಯಿಸಿತು. ಅರುಂಧತಿ ರಾಯ್ ತಮ್ಮ "ಎ ಗಾಡ್ ಆಫ್ ಸ್ಮಾಲ್ ಥಿಂಗ್ಸ್" ಕಾದಂಬರಿಯಲ್ಲಿ ಸಿರಿಯನ್ ಕ್ರಿಶ್ಚಿಯನ್ ಸಮುದಾಯದ ಸಮಸ್ಯೆಗಳನ್ನು ಕುರಿತು ವಿಸ್ಮಯವುಂಟು ಮಾಡಿರುವುದು ಇತ್ತೀಚಿನ ವೃತ್ತಾಂತ. ತಕಳಿಯವರು ಕ್ರಿಶ್ಚಿಯನ್ ಸಮುದಾಯದ ಸಮಸ್ಯೆಯನ್ನು ಚರ್ಚಿಸುವ 'ಇಸೊಪ್ಪಿಂಡೆ ಮಕ್ಕಳ್' (ಇಸೋಪನ ಮಕ್ಕಳು) ಎಂಬ ಕಾದಂಬರಿಯನ್ನು ಎರಡು ದಶಕಗಳ ಹಿಂದೆ ಬರೆದರು. ಕೇರಳದ ಕಥೆಯನ್ನೇ ಕಾದಂಬರಿ ರೂಪದಲ್ಲಿ ಭಟ್ಟಿ ಇಳಿಸಲು ಸುಮಾರು ಹದಿನೈದು ವರ್ಷಗಳ ಕಾಲ ಧ್ಯಾನಿಸಿ ಬರೆದ ಅವರ ಮಹೋನ್ನತ ಕೃತಿ "ಕಯರ್" (೧೯೭೮).

ಕಡಲ ತಡಿಯ ಮೀನುಗಾರರ ಬದುಕು, ಕೃಷಿ ಕಾರ್ಮಿಕರ ಬವಣೆ, ಕ್ರಿಶ್ಚಿಯನ್ ಸಮುದಾಯದ ಸಮಸ್ಯೆ, ಅಸ್ಪೃಶ್ಯರ ಕರುಣಾಜನಕ ಜೀವನ—ಇವುಗಳನ್ನು ಚಿತ್ರಿಸಿರುವ ತಕಳಿ ಶಿವಶಂಕರಪಿಳ್ಳೈ, ಇಂದಿನ ಬರಹಗಾರರ ನೆಲೆಗಿಂತ ಭಿನ್ನವಾದ ನೆಲೆಯಲ್ಲಿ ಬರೆದಿರುವುದು ಸಹಜ. ಏಕೆಂದರೆ

ಇಂದಿನವರ ಸಮಸ್ಯೆಗಳು ಹಲವಾರು: ಭಾರತದ ಆಂತರಿಕ ತಿಕ್ಕಾಟಗಳು, ಪ್ರಾಂತೀಯತೆ. ಜಾತಿ-ಕೋಮು-ಧಾರ್ಮಿಕ ಸಂಘರ್ಷ ಹಾಗೂ ಗಲಭೆಗಳು, ಭಯೋತ್ಪಾದನೆ, ಕೇಂದ್ರೀಕೃತ ರಾಜಕೀಯ ವ್ಯವಸ್ಥೆಯೊಂದರ ವಿಘಟನೆ, ಹಿಂಸಾತತ್ವವಾದ ರಾಜಕೀಯ ವಿಪ್ಲವ, ರಾಜಕೀಯ ಪಕ್ಷಗಳ ನಡುವಿನ ವೈಷಮ್ಯ ಹಾಗೂ ಪೈಪೋಟಿ, ಮಹಿಳೆಯರ ವಿರುದ್ಧದ ಅಪರಾಧಗಳು, ನಿರುದ್ಯೋಗ ಹಾಗೂ ಉದ್ಯೋಗಕ್ಕಾಗಿ ಹುಟ್ಟೂರಿನಿಂದ ದೂರ ಹೋದವರ ತೊಳಲಾಟ, ನಗರಗಳಲ್ಲಿ ಜನಸಂಖ್ಯಾ ಹೆಚ್ಚಳ, ಅದರಿಂದ ಉದ್ಭವವಾಗುವ ಸಮಸ್ಯೆಗಳು, ಸರ್ಕಾರ ಹಾಗೂ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ—ಇದೆಲ್ಲದರಿಂದ ಘಾಸಿಯಾಗುವ ಮತ್ತು ಅಮಾನವೀಕರಣಕ್ಕೆ ಒಳಗಾಗುವ ಜನಸಾಮಾನ್ಯ.

ಸಮಕಾಲೀನ ಲೇಖಕ ಅನೇಕ ಗಲಿಬಿಲಿಗಳ ಮಧ್ಯೆ ತೊಳಲಾಡುತ್ತಿದ್ದಾನೆ. ಸಮಕಾಲೀನ ಬದುಕಿನ ಅಸಂಖ್ಯಾತ ಸಂಕೀರ್ಣತೆಗಳ ಎದುರಿನಲ್ಲಿ ಹೇಗೆ ಪ್ರತಿಕ್ರಿಯೆ ವ್ಯಕ್ತಪಡಿಸಬೇಕೆಂಬುದು ತಿಳಿಯದೆ ಲೇಖಕ ಕಂಗಾಲಾಗುವುದುಂಟು. ಅತಿಯಾದ ಭೋಗವಾದ, ಗ್ರಾಹಕ ಸಂಸ್ಕೃತಿಯ ಬಿಗಿಮುಷ್ಟಿ ಮತ್ತು ಪ್ರಕೃತಿಯೊಂದಿಗಿನ ಸಾವಯವ ಸಂಬಂಧವನ್ನು ಕಳೆದುಕೊಂಡಿರುವುದರ ಹೃದಯವಿದ್ರಾವಕ ಪರಿಸ್ಥಿತಿ—ಇವೆಲ್ಲ ಇಂದಿನ ಲೇಖಕನ ಸಾಮಗ್ರಿಗಳು. ಇದಕ್ಕಿಂತ ಭಿನ್ನ ಸಾಮಗ್ರಿಯನ್ನು ತಮ್ಮ ಕಥೆಗಳಲ್ಲಿ ಅಳವಡಿಸಿದ ವೈಕಂ ಮತ್ತು ಶಿವಶಂಕರ ಪಿಳ್ಳೈ ಅವರ ಕೃತಿಗಳು ಇಂದು ಇದ್ದು ನಾಳೆ ಹೋಗುವಂಥವಲ್ಲ. "ಮನುಕುಲದ ನಿರಂತರ ದುಃಖ ಸಂಗೀತ"ವನ್ನು ಕುರಿತು ಅವರು ಬರೆದಿರುವ ಕಾರಣ ಅವು ಚಿರನೂತನವಾಗಿ ನಮ್ಮ ಹೃದಯವನ್ನು ತಟ್ಟುತ್ತದೆ. ಇದು ಶಿವಶಂಕರ ಪಿಳ್ಳೈ, ಅವರನ್ನು ಕುರಿತಾದ ಲೇಖನವಾದರೂ ಅವರ ಸಮಕಾಲೀನರಾಗಿ, ಮಲೆಯಾಳಂ ಕಥಾಕ್ಷಿತಿಜವನ್ನು ವಿಸ್ತರಿಸಿದವರಾಗಿ ವೈಕಂ ಗೋಚರಿಸುವುದರಿಂದ ಬಷೀರರ ಕೃತಿಗಳನ್ನು ವಿಶ್ಲೇಷಿಸಿರುವ ಜಿ. ಕುಮಾರ ಪಿಳ್ಳೈ ಅವರ ಮಾತುಗಳು ನೆನಪಾಗುತ್ತವೆ. ಅವರೆನ್ನುತ್ತಾರೆ: "ನಾನು ಮತ್ತೆ ಮತ್ತೆ ಓದಲು ಇಷ್ಟಪಡುವ ಲೇಖಕರೊಬ್ಬರು ವೈಕಂ ಮುಹಮ್ಮದ್ ಬಷೀರ್. ಅವರನ್ನು ಪ್ರತಿಸಲವೂ ನಾನು ಅತ್ಯಾನಂದದಿಂದ ಓದುತ್ತೇನೆ; ಏಕೆಂದರೆ, ಅವರ ಕಥೆಗಳು ಎಂದಿಗೂ ತಮ್ಮ ಪರಿಣಾಮ ನೂತನತೆಯನ್ನು ಕಳೆದುಕೊಳ್ಳುವುದಿಲ್ಲ. ಇದು, ಕಥನವಾಚಕರಾದ ಸಾವಿರಗಟ್ಟಲೆ ಮಲೆಯಾಳಂ ಭಾಷಿಕರೊಡನೆ ನಾನು ಹಂಚಿಕೊಳ್ಳುವ ಅನುಭವ ಎಂಬುದು ನನಗೆ ಖಚಿತವಾಗಿದೆ. ಶಬ್ದದ ಸಂಪೂರ್ಣಾರ್ಥದಲ್ಲಿ ಸಾಹಿತ್ಯ ಕಲಾವಿದರಾದ ಬಷೀರ್ ತಮ್ಮ ಜೀವನ ದರ್ಶನದ ವ್ಯಾಪ್ತಿ ಮತ್ತು ಗಾಢತೆಯಿಂದ ಹಾಗೂ ಈ ದರ್ಶನವನ್ನು ಸಂವಹನಗೊಳಿಸುವ ಅನನುಕರಣೀಯ ಶೈಲಿಯ ಶಕ್ತಿ, ಸೌಂದರ್ಯಗಳಿಂದ ನಮ್ಮನ್ನು ತಟ್ಟುತ್ತಾರೆ." (ಅನುವಾದ: ಸಿ.ಪಿ.ಕೆ.—'ಪುಸ್ತಕ ಪ್ರಪಂಚ', ಜುಲೈ ೧೯೮೭).

೧೯೩೪ರಲ್ಲಿ ಪ್ರಕಟವಾದ "ಪುಟ್ಟು ಮಲಾರ್", ತದನಂತರ "ಪ್ರತಿಫಲಂ", "ಪತಿತ ಪಂಕಜಂ" ಮೊದಲಾದ ಕೃತಿಗಳಿಂದ

ಹಿಡಿದು, "ಚೆಮ್ಮೀನ್", "ಕಯರ್", "ಏಣಿಪ್ಪಡಿಗಳ್" ಕಾದಂಬರಿಗಳ ಜೊತೆಗೆ ೫೦೦ಕ್ಕೂ ಮಿಕ್ಕ ಸಣ್ಣಕಥೆಗಳು, ಕೆಲವು ನಾಟಕಗಳು, ಪ್ರಬಂಧಗಳು ಹಾಗೂ ಲೇಖನಗಳನ್ನು ರಚಿಸಿ ಮಲೆಯಾಳಂ ಸಾಹಿತ್ಯದ ಸಮೃದ್ಧಿಗೆ ಗಣನೀಯ ಕೊಡುಗೆ ನೀಡಿರುವ ತಕಳಿ ಶಿವಶಂಕರ ಪಿಳ್ಳೆ ಬಷೀರರಂತೆ ಮತ್ತೆ ಮತ್ತೆ ಓದುಗರನ್ನು ಆಕರ್ಷಿಸುವ ಲೇಖಕರಾಗಿದ್ದಾರೆ.

ನಮ್ಮ ನೆಲದ ಇಂಥ ಅಪ್ಪಟ ಬರಹಗಾರರನ್ನು ನೆನೆಯುವಾಗ ಇಂಗ್ಲಿಷ್‌ನಲ್ಲಿ ಬರೆಯುತ್ತಿರುವ ಇತ್ತೀಚೆಗೆ ಸಾಲ್ಮನ್‌ರಶ್ದಿ ನೀಡಿದ ಹೇಳಿಕೆ ಹಾಸ್ಯಾಸ್ಪದವಾಗಿ ಕಾಣುತ್ತದೆ. "ಕಳೆದ ೫೦ ವರ್ಷಗಳಲ್ಲಿ ರಚಿತವಾಗಿರುವ ಭಾರತೀಯ ಸಾಹಿತ್ಯವನ್ನು ಗಮನಿಸುವಾಗ ಇಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬಂದಿರುವ ಕೃತಿಗಳೇ ಅತ್ಯಂತ ಘನವಾದವು, ದೇಶೀಯ ಭಾಷೆಗಳಲ್ಲಿ ರಚಿತವಾದ ಕೃತಿಗಳು ಗಹನವಾದದ್ದನ್ನು ನೀಡಿಲ್ಲ" ಎಂಬುದು ರಶ್ದಿಯ ಅಜ್ಞಾನ ತುಂಬಿದ ನುಡಿಗಳು. ಆದರೆ ಸುದೈವದಿಂದ ರಶ್ದಿಯಷ್ಟೇ ಹೆಸರು ಮಾಡುತ್ತಿರುವ ವಿಕ್ರಂ ಸೇಠ್ ರಶ್ದಿಯ ಈ ಅಭಿಪ್ರಾಯವನ್ನು ಒಪ್ಪದೆ ಪ್ರಾಂತೀಯ ಭಾಷೆಗಳ ಸಾಹಿತ್ಯ ಸಮೃದ್ಧವಾಗಿರುವುದಲ್ಲದೆ ಭಾರತೀಯ 'ಬನಿ'ಯನ್ನು ಅದರಲ್ಲಿ ಕಾಣಬಹುದೆಂದು ಹೇಳಿದ್ದಾನೆ. ತಮ್ಮ ಕೃತಿಗಳಿಗೆ ಎಣಿಸಲಾರದಷ್ಟು ಹಣ ಪಡೆದುಕೊಳ್ಳುತ್ತಿರುವ ಅರುಂಧತಿ ರಾಯ್, ಸಾಲ್ಮನ್ ರಶ್ದಿ ಹಾಗೂ ವಿಕ್ರಂ ಸೇಠ್ ತಮ್ಮ ಸೃಜನಾತ್ಮಕ ಹಾದಿಯನ್ನು ಸುಗಮಗೊಳಿಸಿರುವ ಶಿವಶಂಕರ ಪಿಳ್ಳೆ ಅಂಥವರನ್ನು ಪ್ರಾರ್ಥನಾಪೂರ್ವಕವಾಗಿ ನೆನೆಯಬೇಕಾಗಿದೆ. ಯಾವ ಒಬ್ಬ ಕವಿಯೂ, ಕಾದಂಬರಿಕಾರನೂ ಶೂನ್ಯದಿಂದ ಸಿಡಿದು ಬಂದವನಾಗಿರಲಾರ. ಪೂರ್ವಸೂರಿಗಳ ಬೆಂಬಲವಿಲ್ಲದೇ ಅವನು ನಿಲ್ಲಲಾರ. ಶಿವಶಂಕರ ಪಿಳ್ಳೆ ಭಯೋತ್ಪಾದನೆಯ ಬಗ್ಗೆ, ಸುಪ್ತಪ್ರಜ್ಞೆಯ ಸಂಕೀರ್ಣತೆಯ ಬಗ್ಗೆ ಕಥೆ ಬರೆಯದಿರಬಹುದು; ಆದರೆ ಕೃಷಿ ಕೂಲಿಕಾರನ ಬದುಕು, ಮೀನುಗಾರರ ಜೀವನ ಅವರ ಕುಂಚದಿಂದ ಚಿತ್ರಿತವಾಗಿದೆಯಲ್ಲ, ಅಷ್ಟು ಸಾಕು. ವ್ಯಾಪ್ತಿ, ವಿಸ್ತಾರಗಳಲ್ಲಿ ನಮ್ಮ ಕುವೆಂಪು-ಕಾರಂತರನ್ನು ನೆನಪಿಸುವಂಥ ಕಥಾಪ್ರಪಂಚವನ್ನು ಸೃಷ್ಟಿ ಮಾಡಿರುವುದರಿಂದ ನಮ್ಮ ಇತ್ತೀಚಿನ ಲೇಖಕರಿಗೆ ಇವರು ಆದ್ಯರಾಗಿರುವಂತೆಯೇ ಮಲೆಯಾಳಂ ಲೇಖಕರಿಗೆ ಪಿಳ್ಳೆ ಮೊದಲ ಸಾಲಿನ ಲೇಖಕರಾಗಿದ್ದಾರೆ.

ಪ್ರಾಪಂಚೀಕರಣ ಹಾಗೂ ವಿಶ್ವಗ್ರಾಮವೆಂಬ ನೂತನ ಬೆಳವಣಿಗೆಯಿಂದ ಮನುಷ್ಯ ವರ್ತನೆಯಲ್ಲಿ ಊಹಿಸಲಾರದಷ್ಟು ವ್ಯತ್ಯಾಸವಾಗಿರುವ ವರ್ತಮಾನದಲ್ಲಿ ೧೯೧೭ರ ರಷ್ಯನ್ ಕ್ರಾಂತಿಯಿಂದ 'ಆಚಾರ, ವಿಚಾರ, ಸಮೂಹ ಜೀವನ ಮಾಯವಾಯಿತು. ಮನುಷ್ಯತ್ವಕ್ಕೆ ಬೆಲೆಯಿಲ್ಲದಾಯಿತು ಎಂದು ನೊಂದು ನುಡಿದಿದ್ದ ತಕಳಿಯವರ ಮಾತುಗಳು ಮನಸ್ಸಿನಲ್ಲಿ ಅನುರಣನೆಯಾಗುತ್ತವೆ. ವಿಪರೀತ ಯಾಂತ್ರೀಕರಣದಲ್ಲಿ ಮನುಷ್ಯತ್ವಕ್ಕೆ ಬೆಲೆಯಿರುವುದಿಲ್ಲವೆಂದು ಪಿಳ್ಳೆಯವರು ಖಚಿತವಾಗಿ ನಂಬಿದ್ದರು. ಕಂಪ್ಯೂಟರ್ ಯುಗದ ರಕ್ಕಸ ಹೆಜ್ಜೆಗಳನ್ನು ಅವರು ಯಾವರೀತಿ ವ್ಯಾಖ್ಯಾನಿಸುತ್ತಿದ್ದರೊ ತಿಳಿಯದು.

ಮಲೆಯಾಳಂ ಭಾಷೆಗೆ ಅವರು ನೀಡಿದ ಕೊಡುಗೆಯನ್ನು ಪರಿಗಣಿಸಿ ಅವರಿಗೆ ೧೯೮೮ರ ಜ್ಞಾನಪೀಠ ಪ್ರಶಸ್ತಿಯನ್ನು ನೀಡಲಾಯಿತು. "ನನಗೆ ದೊರೆತ ಪ್ರಶಸ್ತಿ ಮೊಲೆಹಾಲಿನ ಮೂಲಕ ದೊರೆತ ಮಲೆಯಾಳ ಭಾಷೆಗೆ" ಎಂದು ಅವರು ಅಂದು ಹೇಳಿದ್ದ ಮಾತುಗಳು "ಸರ್ವಂ ಕಂಪ್ಯೂಟರ್‌ಮಯಂ ಆಗಿರುವ ಇಂದಿನ ಸನ್ನಿವೇಶದಲ್ಲಿ ವಿಚಿತ್ರವಾದ ಅರ್ಥ ಗಹನತೆಯಿಂದ ಕೂಡಿದಂತೆ ಕಾಣುತ್ತವೆ. ದೂರದ ಲಂಡನ್‌ನಲ್ಲಿ ಸಾಲ್ಮನ್ ರಶ್ದಿ ಹಾಗೂ ವಿಕ್ರಂ ಸೇಠರ ಹೊಸ ಪುಸ್ತಕಗಳನ್ನು ಅತ್ಯಂತ ವಿನೂತನವಾಗಿ ಬಿಡುಗಡೆ ಮಾಡಲು ಎರಡು ಪ್ರಕಾಶನ ಸಂಸ್ಥೆಗಳು ಪೈಪೋಟಿ ನಡೆಸುತ್ತಿರುವ ಇಂದಿನ ತಾಜಾ ಸುದ್ದಿಯನ್ನು ಓದುವಾಗ ಮನಸ್ಸು ವೈಕಂ ಹಾಗೂ ತಕಳಿಯಂಥವರಕಡೆ ವಾಲುತ್ತದೆ. ಹೊಸದನ್ನು ಸ್ವಾಗತಿಸಲಾಗದ ಅಂಜುಬುರುಕುತನದ ಪಲಾಯನವಲ್ಲ ಇದು; ಬದಲಾಗಿ ನನ್ನ ನೆಲದ ವಾಸನೆಯನ್ನು ಹೊರ ಜಗತ್ತಿಗೆ ಬಿತ್ತರಿಸುವ ಅಪ್ಪಟ ದೇಶಿ ಚೇತನಗಳನ್ನು ಜೋಪಾನವಾಗಿ ಕಾಪಾಡಿಕೊಳ್ಳುವ ದಿಗಿಲು, "ಎಲ್ಲ ದಿಕ್ಕಿನ ಗಾಳಿ ಬೀಸಿ ಬರಲಿ, ಆದರೆ ನಾ ನಿಂತ ನೆಲದಿಂದ ಅದು ನನ್ನನ್ನು ಕೀಳದಂತಿರಲಿ" ಎಂದರ್ಥ ಬರುವಂಥ ಮಾತುಗಳನ್ನು ಗಾಂಧೀಜಿ ಆಡಿದರು. ಆದರೆ ಅಮೆರಿಕನ್ ಡಾಲರ್‌ನಿಂದ ನಮ್ಮ ಭಾಷೆ, ಸಂಸ್ಕೃತಿ, ಆಚಾರ–ವಿಚಾರಗಳ ಮೇಲೆ ಆಗುತ್ತಿರುವ ಘಾತವನ್ನು ನೆನೆದಾಗ ನವ ವಸಾಹತುಶಾಹಿಯೆಂಬ ಈ ಬಿರುಗಾಳಿ ನಿಜವಾಗಿ ನಾವು ನಮ್ಮ ನೆಲದ ಮೇಲೆ ಭದ್ರವಾಗಿ ನಿಲ್ಲುವುದಕ್ಕೆ ಬಿಡುತ್ತದೆಯೇ ಎಂದು ಕೇಳುವಂತಾಗುತ್ತದೆ.

ಇಪ್ಪತ್ತನೆಯ ಶತಮಾನದ ಅಂಚಿನಲ್ಲಿ ನಿಂತವರು ಈ ಬಗೆಯ ಪ್ರಶ್ನೆಗಳನ್ನು ಕೇಳಿದರೆ ತಾಳಿಕೊಳ್ಳಬಹುದೇನೊ. ಆದರೆ ಹೊಸ ಶತಮಾನದ ಉದಯವಾದ ಬಳಿಕ ಪ್ರಾಯಶಃ ನೆಲದ ವಾಸನೆ ಕುರಿತಾದ ಇಂಥ ಪ್ರಶ್ನೆಗಳು, ದಿಗಿಲುಗಳು 'ಲೆಜಿಮೇಟ್' ಎನ್ನಿಸಲಾರವೊ ಏನೊ? ಆವರಣಗಳನ್ನೆಲ್ಲಾ ಆಪೋಶಣ ತೆಗೆದುಕೊಂಡು, ಎಲ್ಲೆ ಸರಹದ್ದುಗಳನ್ನು ಇಲ್ಲಗೈದು ಸೆಟೆದುನಿಲ್ಲುವ 'ವಿಶ್ವಗ್ರಾಮ' ವರವೊ ಶಾಪವೊ ಎಂದು ಬಲ್ಲವರು ಹೇಳಬೇಕು.

ಕಲ್ಲು ಬಂಡೆಗಳಿಂದ ಕಟ್ಟಲಾದ ಗುಡಿಗಳಿಗಿಂತಲೂ ನರಗಳಿಂದಲೂ ಮಾಂಸದಿಂದಲೂ ಕಟ್ಟಲಾಗಿರುವ ಮಾನವ ಶರೀರಗಳೇ ನಿಜವಾದ ದೇವಾಲಯಗಳು.

ಮಹಾತ್ಮ ಗಾಂಧಿ

ಪುನರ್ಮಿಲನ

ಟಿ. ಎಸ್. ಲಲಿತ

೭೦೩, ಮೊದಲ ಮಹಡಿ, ೧೭ ನೇ ಮೇನ್
ಸರಸ್ವತಿಪುರ, ಮೈಸೂರು–೫೭೦೦೦೯

ರಕ್ಷಣೆ ಇಲ್ಲದೆ, ಚಿಂದಿಯುಟ್ಟ ಮಕ್ಕಳ ಗುಂಪೊಂದು ಬರ್ಗನ್–ಬೆಲ್ಸನ್ ವಿಚಾರಣಾ ಶಿಬಿರಗಳಲ್ಲಿ ಚಳಿಯಿಂದ ನಡುಗುತ್ತ ನಿಂತಿತ್ತು. ೧೯೪೪ ರ ಡಿಸೆಂಬರ್ ತಿಂಗಳ ಮೊದಲವಾರ, ಹಾಲೆಂಡ್‌ನ ಈ ಯಹೂದಿ ನಿರಾಶ್ರಿತರು ಯುದ್ಧದ ನಾಲ್ಕುವರೆ ವರ್ಷಗಳ ಜೇಲುವಾಸದ ಅವಧಿ ಕಳೆದು, ತೀರಾ ಏಕಾಕಿಗಳೆನಿಸಿದ್ದರು.

ತಮ್ಮ ತಂದೆ, ಅಣ್ಣಂದಿರನ್ನು, ಟ್ರಕ್ಕೊಂದು ಹೊತ್ತೊಯ್ಯುವಾಗ, ಇವರು ಮೂಕರಂತೆ ನೋಡುತ್ತ ನಿಂತರು. ಎಲ್ಲಿಗೆ ಹೋಗುತ್ತಿದ್ದಾರೆಂದು ಯಾರೂ ಹೇಳುತ್ತಿಲ್ಲ. ಆದರೆ ಪಿಸುಗುಡುವಿಕೆಯಲ್ಲಿ ಕೇಳಿಬಂದ ಆ ಮೃತ್ಯು ಶಿಬಿರಗಳ ಹೆಸರು 'ಆಸ್ಚವಿಟ್ಜ್', 'ಟ್ರೆಬ್ಲಿಂಕ್' ಹಾಗೂ 'ಚೆಲ್ಮನೋ'.

ಪುರುಷರ ಅನಂತರ, ತಾಯಂದಿರು ಹಾಗೂ ಸೋದರಿಯರಿಗಾಗಿ ಬಂದ ಟ್ರಕ್ಕೊಂದು, ಅವರನ್ನು ಕರೆದೊಯ್ದ ಅನಂತರ, ಮಕ್ಕಳನ್ನು ಮಹಿಳೆಯರ ಕಾಂಪೌಂಡಿಗೆ ತಂದಿಳಿಸಿತು. ಟ್ರಕ್ ಹೋದನಂತರ, ೧೧ ವರ್ಷದ ಗೆರಾರ್ ಲಾಕ್ಮೆಕರ್‌ಗೆ, ಹಳದಿ ಚಾದರದಲ್ಲಿ ಸುತ್ತಿದ್ದ ತನ್ನ ಅಳಿದುಳಿದ ವಸ್ತುಗಳೂ ಮಾಯವಾಗಿರುವುದು ತಿಳಿದುಬಂತು.

ಕತ್ತಲೆಯಲ್ಲಿ ಒಬ್ಬರಿಗೊಬ್ಬರು ಆತು ನಿಂತು, ದೊಡ್ಡ ಮಕ್ಕಳು ಅಳುತ್ತಿದ್ದ ಸಣ್ಣ ಮಕ್ಕಳನ್ನು ಸುಧಾರಿಸುತ್ತಿದ್ದರು. ಹತ್ತಿರದ ಕತ್ತಲೆಯ ಬ್ಯಾರಕ್ ಒಂದರಲ್ಲಿ ಲುಬಾ ಗೆರ್ಸ್ನಾಕ್ ಎಂಬ ಹೆಂಗಸು, ತನ್ನ ಪಕ್ಕದವರನ್ನು ಎಬ್ಬಿಸಿ "ಆ ಮಗು ಅಳುತ್ತಿರುವುದು ಕೇಳುತ್ತಿದೆಯೆ ?" ಎಂದಳು.

"ಇಲ್ಲಿ, ನೀನು ಮತ್ತೆ, ನಿನ್ನ ಕೆಟ್ಟ ಕನಸುಗಳನ್ನು ನೆನಪು ಮಾಡಿಕೊಳ್ಳುತ್ತಿದ್ದೀಯಾ" ಎಂದರು. ಇತರರು ಭಯಾನಕ ನೆನಪುಗಳನ್ನೋಡಿಸುವಂತೆ ಲುಬಾ ಕಣ್ಣುಗಳನ್ನು ಮುಚ್ಚಿಕೊಂಡಳು. ಯಹೂದಿ ಧರ್ಮದಲ್ಲವಳು, ಪೋಲೆಂಡ್‌ನಲ್ಲಿ ಬೆಳೆದಿದ್ದಳು. ತಾರುಣ್ಯದಲ್ಲೇ, ಮರದ ಬೀರುಗಳನ್ನು ತಯಾರಿಸುವ ಹೆರ್ಷ್ ಗೆರ್ಸ್ನಾಕ್‌ನನ್ನು ಮದುವೆಯಾದಳು. ಮಗ ಐಸಾಕ್

ಮೂಲ : ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಲಾರೆನ್ಸ್ ಎಲಿಯಟ್ ಅವರ ಲೇಖನ.

ನೊಂದಿಗೆ, ಮತ್ತಷ್ಟು ಮಕ್ಕಳನ್ನು ಪಡೆದು, ಸುಖಜೀವನದ ಕಲ್ಪನೆಯಲ್ಲಿರುವಾಗಲೇ ಶುರುವಾದ ಯುದ್ಧ, ಅವರನ್ನು ತನ್ನ ಸುಳಿಗೆಳೆದುಕೊಂಡಿತು. ಯಹೂದಿಗಳೆಂದು ಕಂಡವರೆನ್ನೆಲ್ಲಾ, ಕುದುರೆಯ ವ್ಯಾಗನ್‌ಗಳಲ್ಲಿ ಜರ್ಮನಿಯ ಆಸ್ಕವಿಟ್ಸ್-ಬಿರ್ಕೆನೋದ ಭಯಾನಕ ಮೃತ್ಯು ಶಿಬಿರಗಳಿಗೆ ಕರೆದೊಯ್ಯುತ್ತಿದ್ದರು ನಾಜಿಗಳು.

ಲುಬಾ, ಬಾಗಿಲೊಳಗೆ ಪ್ರವೇಶಿಸುವಾಗಲೇ, ಮಗ ಇಸಾಕ್‌ನನ್ನು ಗಟ್ಟಿಯಾಗಿ ತನ್ನ ತೋಳುಗಳಲ್ಲಿ ಹಿಡಿದಿದ್ದಳು. ಆದರೆ, ನಿಮಿಷಗಳಲ್ಲೇ ಕಾವಲುಗಾರರು ಮೂರು ವರ್ಷದ ಮಗುವನ್ನವಳಿಂದ ಸೆಳೆದೊಯ್ದರು. 'ಅಮ್ಮ ಅಮ್ಮ' ಎನ್ನುವ ಮಗುವಿನ ಕೂಗು ಅವಳ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿರುವಂತೆ, ಅವರು ಆ ಮಗುವನ್ನು ಟ್ರಕ್ಕಿನಲ್ಲಿದ್ದ ಇತರ ಹಿರಿ-ಕಿರಿಯರ ನಡುವೆ ಎಸೆದರು, ಟ್ರಕ್ಕು (ಗ್ಯಾಸ್ ಛೇಂಬರ್) ಅನಿಲದ ಕೋಣೆಯೊಳಗುರುಳಿತು. ಕತ್ತಲೆಯ ದಿನಗಳು ಹಿಂಬಾಲಿಸಿದವು. ಗತಿಸಿದ ತನ್ನ ಗಂಡನ ಶವವನ್ನು ಟ್ರಕ್ಕೊಂದು ಹೊತ್ತು ತಂದ ಕ್ಷಣವೂ ಬಂತು, ಜೀವನ ಬೇಡವೆನಿಸಿತವಳಿಗೆ.

ಆದರೆ ಅವಳ ಅಂತರಂಗದ ದೃಢ ಶಕ್ತಿ ಸೋಲೊಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ತೋಳಿನ ಮೇಲೆ ೩೨.೯೬೭೦ರ ಅಂಕೆಯ ಹಚ್ಚೆ ಹಾಕಿಸಿ, ರೋಗಿಗಳನ್ನು ನರಳಿ, ನರಳಿ ಸಾಯಲು ಬಿಡುತ್ತಿದ್ದ ಆಸ್ಪತ್ರೆಯೊಂದರಲ್ಲಿ ಕೆಲಸಮಾಡಲು ಅವಳನ್ನು ಕಳಿಸಲಾಯ್ತು.

ಸವೆಯದ ಹಗಲುರಾತ್ರಿಗಳು ಮುಗಿದವು. ಲೂಬಾ ಜರ್ಮನ್ ಕಲಿತಳು. ಒಂದು ದಿನ ಜರ್ಮನಿಯ ಕ್ಯಾಂಪ್ ಒಂದಕ್ಕೆ ನರ್ಸ್‌ಗಳನ್ನು ಕಳಿಸುತ್ತಾರೆಂಬ ಸುದ್ದಿ ಬಂತು. ೧೯೪೪ರ ಡಿಸೆಂಬರ್‌ನಲ್ಲಿ ಅವಳು ಬರ್ಗೆಸ್ ಬೆಲ್ಸನ್‌ಗೆ ಕಳಿಸಲ್ಪಟ್ಟಳು ಅಲ್ಲಿನ ಶಿಬಿರದಲ್ಲಿ ಅನಿಲದ ಕೋಣೆಗಳಿರಲಿಲ್ಲ. ಆದರೆ ಹಸಿವು ರೋಗಗಳಿಂದ ಕೂಡಿದ ಹತ್ಯಾಕೇಂದ್ರವೆನಿಸಿತು ಅದು.

ಮಿತ್ರರಾಷ್ಟ್ರಗಳು ಹತ್ತಿರಬಂದು, ಕಾಯ್ದೆ ಕಾನೂನುಗಳು ಭಂಗವಾಗಿ, ಆಗಲೇ ಇದ್ದ ದುಸ್ಥಿತಿ ಮತ್ತಷ್ಟು ಕೆಳಮಟ್ಟಕ್ಕಿಳಿದಿದ್ದು. ವಾಹನಗಳ ನಿರಂತರ ಓಡಾಟ ಮತ್ತಷ್ಟು ಹಸಿದ ಜೀವಗಳನ್ನು ಕ್ರಿಮಿ, ಕೀಟ ತುಂಬಿದ ಬ್ಯಾರಕ್‌ಗಳಲ್ಲಿ ಕಿಕ್ಕಿರಿಯುವಂತೆ ಮಾಡುತ್ತಿತ್ತು.

ವ್ಯಗ್ರತೆಯಿಂದ ಶತಪಥ ಹಾಕುತ್ತಿದ್ದ ಲೂಬಾಳಿಗೆ, ಪುನಃ ಮಗುವಿನ ಅಳುವ ಧ್ವನಿ ಕೇಳಿತು. ಬಾಗಿಲವರೆಗೂ ನಡೆದು ನಿಂತಳು. ನಡುಗುತ್ತ ಭೀತಿ ತುಂಬಿದ ಮಕ್ಕಳ ಗುಂಪನ್ನು ಕಂಡ ಲೂಬಾ ಮೂಕಿಯಂತಾದಳು. ಹತ್ತಿರಕ್ಕೆ ಬರುವಂತೆ ಮಕ್ಕಳನ್ನು ಮೆಲ್ಲಗೆ ಕರೆದಾಗ, ಕೆಲವು ಎಚ್ಚರಿಕೆಯಿಂದ ಅವಳ ಬಳಿ ಬಂದವು.

"ಏನಾಯ್ತು ? ನಿಮ್ಮನ್ನಿಲ್ಲಿ ಬಿಟ್ಟವರು ಯಾರು?" ಮೆಲ್ಲನೆ ಪಿಸುಗುಟ್ಟಿದಳು ಲೂಬಾ.

ಅರೆ ಬರೆ ಜರ್ಮನ್‌ನಲ್ಲಿ ಸ್ವಲ್ಪ ದೊಡ್ಡ ಹುಡುಗನಾದ ಜಾಕ್ ರೋಡ್ರಿ, ತಾವೆಲ್ಲಿ ಹೋಗುತ್ತಿದ್ದೇವೆಂದು ತಿಳಿಸದೆ ಕರೆತಂದ ಗಾರ್ಡ್‌ಗಳು ನಮ್ಮನ್ನಿಲ್ಲಿ ಬಿಟ್ಟು ಹೋದರು ಎಂದು ವಿವರಿಸಿದ. ೫೪ ಮಕ್ಕಳಲ್ಲಿ ಹಿರಿಯವಳಾದ ಹೆಟ್ರ ಪೆರ್ಕೆಂಹವರ್ ಹದಿನಾಲ್ಕರವಳು. ಅವಳ

ಕೈಹಿಡಿದ ಸ್ಟೆಲ್ಲಾ ಡೆಗೆನ್ ಎರಡುವರೆ ವರ್ಷದವಳು. ಇತರರು ಇನ್ನೂ ಚಿಕ್ಕವರು. ಜಾಕ್‌ನ ಕೈ ಹಿಡಿದು, ತನ್ನನ್ನನುಸರಿಸು ವಂತೆ ಇತರ ಮಕ್ಕಳಿಗೆ ತಿಳಿಸಿದಳು ಲೂಬಾ. ಆದರೆ ಆ ಮಕ್ಕಳನ್ನು ಲೂಬಾ ಬ್ಯಾರಕ್ ನೊಳಗೆ ಕರೆತರುವುದನ್ನು ಇತರ ಹೆಂಗಸರು ತಡೆಗಟ್ಟಲು ಯತ್ನಿಸಿದರು. ಸೈನಿಕರನ್ನು ರೊಚ್ಚಿಗೆಬ್ಬಿಸಿ. ತಲೆಯ ಹಿಂಬಾಗಕ್ಕೊಂದು ಗುಂಡು ಹೊಡೆಸಿಕೊಳ್ಳುವ ಸಣ್ಣದೊಂದು ಕ್ರಿಯೆಯೂ ಸಿಕಿತ್ತೆನ್ನುವುದನ್ನವರು ಅರಿತಿದ್ದರು.

ಆದರೆ ಲೂಬಾ ಅದಕ್ಕೆ ಸಿದ್ದಳಾಗಿದ್ದಳು. "ಇವು ನಿಮ್ಮ ಮಕ್ಕಳೇ ಆಗಿದ್ದರೆ ಹೀಗೆ ಕಳಿಸಿಬಿಡುವಂತೆ ಹೇಳುತ್ತಿದ್ದಿರಾ? ನನ್ನ ಮಾತುಕೇಳಿ, ಅವು ಬೇರಾರರೋ ಮಕ್ಕಳು" ಎನ್ನುತ್ತ ಆ ಮಕ್ಕಳನ್ನು ಒಳಗೊಯ್ದಳು.

ಬೆಳಗ್ಗೆ ಜಾಕ್ ರೋಡ್ರಿ ಲೂಬಾಳಿಗೆ ತಮ್ಮ ಕಥೆ ಹೇಳಿದ. ನಾಜಿಗಳ ಕ್ರೂರ ಹಿಂಸೆಯಿಂದ ತಮ್ಮನ್ನುಳಿಸಿದ್ದು, ತಮ್ಮ ಪಾಲಕರು ಅಮ್‌ಸ್ಟರ್‌ಡ್ಯಾಮ್‌ನ ವಜ್ರ ಕೈಗಾರಿಕೆಯ ಬೆನ್ನುಮೂಳೆಯಂತಿದ್ದು, ಜರ್ಮನರಿಗೆ ವಜ್ರ ಕತ್ತರಿಸಲು, ಅವರ ಕುಶಲತೆಯ ಅಗತ್ಯವಿದ್ದಿತು. ಆದರೆ ನಾಜಿ ಗಳ ಜನಾಂಗೀಯ ವೈಷಮ್ಯವೇ ಕಡೆಗೂ ಮೇಲುಗೈ ಪಡೆಯಿತು. ವಜ್ರ ಕತ್ತರಿಸು ವವರು ಹಾಗೂ ಅವರ ಸಂಸಾರವನ್ನು ಬರ್ಗೆನ್–ಬೆಲ್ಸನ್‌ಗೆ ಕಳಿಸಲಾಯ್ತು. ಅಲ್ಲಿ ತಂದೆ ತಾಯಿಗಳಿಂದ ಬೇರ್ಪಡಿಸಲ್ಪಟ್ಟ ಆ ಮಕ್ಕಳನ್ನು ಲೂಬಾ ಕಂಡಿದ್ದ ಜಾಗದಲ್ಲಿ ಪರಿತ್ಯಜಿಸಲಾಗಿತ್ತು.

ಮಕ್ಕಳನ್ನು ತನ್ನ ಬಳಿ ಕರೆತಂದುದಕ್ಕಾಗಿ ಲೂಬಾಳ ಹೃದಯ ದೇವರಿಗೆ ಕೃತಜ್ಞತೆ ಯನ್ನರ್ಪಿಸಿತು. ದೈವ, ಮತ್ತವಳ ಜೀವನ ಕ್ಕೊಂದು ಅರ್ಥ ತಂದಿತ್ತು. ಅವಳ ಮಗ ಕೊಲ್ಲಲ್ಪಟ್ಟಿದ್ದ. ಆದರೆ ಆ ವಿಧಿಯಿಂದ ಈ ಮಕ್ಕಳನ್ನವಳು ಉಳಿಸಬೇಕಿತ್ತು.

ಡಜನ್‌ಗಟ್ಟಲೆ ಮಕ್ಕಳನ್ನು ಮುಚ್ಚಿಟ್ಟು ಕೊಳ್ಳುವುದು ಸಾಧ್ಯವಿಲ್ಲವೆಂದು ತಿಳಿದ ಲೂಬಾ ನಡೆದದ್ದನ್ನು ಶಿಬಿರದ ಅಧಿಕಾರಿ ಯೊಬ್ಬನಿಗೆ ತಿಳಿಸಿದಳು. ಅಧಿಕಾರಿಯ ತೋಳಿನ ಮೇಲೆ ಕೈಯಿಡುತ್ತ "ಆ ಮಕ್ಕಳನ್ನು ನಾನು ರಕ್ಷಿಸುತ್ತೇನೆ. ಆ ಮಕ್ಕಳಿಂದ ಯಾವುದೇ ಸಮಸ್ಯೆ ಉದ್ಭವಿಸು ವುದಿಲ್ಲವೆಂದು ನಾನು ಭರವಸೆ ಕೊಡು ತ್ತೇನೆ" ಎಂದಳು.

"ನೀನೊಬ್ಬಳು ನರ್ಸ್. ಕೆಲಸಕ್ಕೆ ಬಾರದ ಈ ಯಹೂದಿಗಳಿಂದ ನಿನಗೇನು ಪ್ರಯೋಜನ?" ಎಂದುತ್ತರಿಸಿದ ಅಧಿಕಾರಿ.

"ನಾನೂ ಒಬ್ಬಳು ತಾಯಿ. ನನ್ನ ಮಗುವನ್ನೂ ಆಸ್ವಿಟ್ಸನಲ್ಲಿ ಕಳೆದು ಕೊಂಡಿದ್ದೇನೆ."

ಇದನ್ನು ಕೇಳುತ್ತಲೇ ಲೂಬಾಳ ಕೈ ಇನ್ನು ತನ್ನ ತೋಳಮೇಲಿರುವುದನ್ನು ಅರಿತ ಆ ಅಧಿಕಾರಿ. ಖೈದಿಗಳು ಜರ್ಮನರನ್ನು ಮುಟ್ಟುತ್ತಿರಲಿಲ್ಲ. ತನ್ನ ಕೈ ಮುಷ್ಟಿಯಿಂದ ಬಲವಾಗಿ ಅವಳ ಮುಖಕ್ಕೆ ಹೊಡೆದ ರಭಸಕ್ಕೆ ಲೂಬಾ ನೆಲಕ್ಕೆ ಬಿದ್ದಳು.

ತುಟಿಯಿಂದ ರಕ್ತ ಸುರಿಯುತ್ತಿದ್ದು ಲೂಬಾ ಎದ್ದುನಿಂತಳು. ಆದರೆ ಹಿಮ್ಮೆಟ್ಟ ಲಿಲ್ಲ. "ತಾತನಾಗುವಷ್ಟು ನಿನಗೆ ವಯಸ್ಸಾ ಗಿದೆ. ಈ ಹುಡುಗರು, ಈ ಮುಗ್ಧ ಮಕ್ಕಳಿ ಗೇಕೆ ತೊಂದರೆ ಕೊಡ ಬಯಸುತ್ತಿ? ನೋಡಿಕೊಳ್ಳುವವರು ಯಾರೂ ಇಲ್ಲದೆ ಈ ಮಕ್ಕಳೆಲ್ಲಾ ಸಾಯುತ್ತಾರೆ."

ಅಧಿಕಾರಿಗೆ ಮನಕರಗಿರಬಹುದು ಅಥವಾ ಈ ಎಲ್ಲ ಮಕ್ಕಳನ್ನು ಏನುಮಾಡುವುದೆಂದು ನಿರ್ಧರಿಸಲಾಗದೆಯೂ ಇರಬಹುದು." ಹಾಳಾಗಿ ಹೋಗಲಿ, ಅವುಗಳನ್ನು ಇರಿಸಿಕೋ" ಎಂದಾತ ಗೊಣಗುಟ್ಟಿದ.

ಲೂಬಾ ಅಲ್ಲಿಗೇ ಸುಮ್ಮನಾಗಲಿಲ್ಲ. ಅವರಿಗೆ ತಿನ್ನಲು ಏನಾದರೂಬೇಕು, ಸ್ವಲ್ಪ ಬ್ರೆಡ್ ಇದ್ದರಾಗುತ್ತಿತ್ತು ಎಂದಾಗ ಅವಳಿಗೆ ಎರಡು ಬ್ರೆಡ್ ಪ್ರತಿನಿತ್ಯ ಕೊಡುವಂತೆ ಚೀಟಿ ಬರೆದುಕೊಟ್ಟ. ಅವಳು ಉಗ್ರಾಣಕ್ಕೆ ಹೋದಾಗ ಹಿಂಬಾಲಿಸಿದ ಮೂವರು ಮಕ್ಕಳು ಕೆಲವು ತುಣುಕುಗಳನ್ನು ಅಲ್ಲಿಂದ ಕದ್ದವು. ತನ್ನ ಪಾಲಿನ ಬ್ರೆಡ್ ಹಿಡಿದು ಲೂಬಾ ಆರ್ಡರ್ಲಿಯನ್ನು ನೋಡಿ ಮುಗುಳುನಗೆ ಬೀರಿದಳು.

ನಿಗದಿತವಾದ ಆಹಾರ ತುಂಡು ಕರಿಯ ಬ್ರೆಡ್ ಹಾಗೂ ಅರ್ಧ ಬಟ್ಟಲು ತೆಳುವಾದ ಸಾರು, ಹಸಿವನ್ನು ಹಿಂಗಿಸುತ್ತಿರಲಿಲ್ಲ. ಆದ್ದರಿಂದ ಲೂಬಾ ಪ್ರತಿದಿನ ಬೆಳಗ್ಗೆ ಸಂಚಾರಕ್ಕೆ ಹೊರಡುವಳು ಉಗ್ರಾಣ, ಅಡುಗೆಮನೆ, ಬೇಕರಿ ಎಲ್ಲವನ್ನು ಸುತ್ತಿ, ಆಹಾರ ಬೇಡುವಳು. ಒಮ್ಮೊಮ್ಮೆ ಕದಿಯಬೇಕಾಗುತ್ತಿತ್ತು. "ಆಕೆ ಬರುತ್ತಿದ್ದಾಳೆ, ನಮಗಾಗಿ ಆಹಾರ ತರುತ್ತಿದ್ದಾಳೆನ್ನುವಂತೆ ದೂರದಲ್ಲಿವಳನ್ನು ಕಂಡದ್ದೇ ತಡ, ಮಕ್ಕಳು ಬಾಗಿಲಲ್ಲಿ ಗುಂಪುಗೂಡುತ್ತಿದ್ದರು.

ಅವರೆಲ್ಲ ಲೂಬಾಳನ್ನು ಅಕ್ಕನೆಂದು ಕರೆಯುವರು. ಅವರ ಬೇಕು-ಬೇಡಗಳನ್ನು ಗಮನಿಸಿ, ತಾಯಿಯನ್ನು ಕಳೆದುಕೊಂಡ ಮಕ್ಕಳು, ಕಾಯಿಲೆ ಮಲಗಿದಾಗ, ತಾಯಿಯಂತೆ ಶುಶ್ರೂಷೆ ಮಾಡುವಳು. ದೀರ್ಘವಾದ ಕತ್ತಲರಾತ್ರಿಯಲ್ಲವರಿಗೆ ಜೋಗುಳ ಹಾಡುವಳು. ಡಚ್ ಭಾಷೆಯಾಡುವ ಮಕ್ಕಳಿಗೆ, ಅವಳ ಮಾತು ಅರ್ಥವಾಗದಿದ್ದರೂ ಅವಳ ಪ್ರೀತಿ ಅರ್ಥವಾಗುತ್ತಿತ್ತು. ನಾಜಿಗಳ ಭಯಂಕರ ಕ್ರೂರ ಕೃತ್ಯಗಳ ನಡುವೆಯೂ, ಲೂಬಾ ತನ್ನ ಮಕ್ಕಳನ್ನು ಜೀವಂತವಾಗಿಟ್ಟುಕೊಂಡಿದ್ದಳು.

ವಾರಗಳು, ತಿಂಗಳುಗಳುರುಳಿದವು. ಮಿತ್ರರಾಷ್ಟ್ರಗಳು ಸಮೀಪಿಸುತ್ತಿವೆ ಎಂದು ಬರ್ಗೆನ್-ಬೆಲ್ಸನ್‌ನ ಶಿಬಿರಾರ್ಥಿಗಳಿಗೆ ತಿಳಿಯಿತು. ಭಯಾನಕತೆಯ ಚಳಿಗಾಲ ಮುಗಿದು ೧೯೪೫ರ ವಸಂತ ಕಾಲಿಡುತ್ತಿದ್ದಂತೆ, ಜರ್ಮನರು ಶಿಬಿರದಲ್ಲಿ ಚೆಲ್ಲಾಡಿದ್ದ ಹೆಣಗಳನ್ನು ತೆಗೆದುಹಾಕಲು ಪ್ರಯತ್ನಿಸಿದರು. ಆದರದು ವಿಫಲವಾದ ಹೋರಾಟ. ಆಮಶಂಕೆ ಹರಡಿದಾಗ, ಮಕ್ಕಳಲ್ಲಿ ನೀರ ಕೊರತೆಯುಂಟಾಗಿ, ಆಯಾಸ, ತಲೆನೋವು ಹಾಗೂ ವಿಷಮ ಜ್ವರಕ್ಕೆ ತುತ್ತಾದರು.

ಬಳಿಯ ಬ್ಯಾರಕ್‌ನಲ್ಲಿದ್ದ ಆಮ್‌ಸ್ಟರ್‌ಡ್ಯಾಮ್‌ನ ಮಗು, ಎನ್ ಫ್ರಾಂಕ್ ಜ್ವರಕ್ಕೆ ತುತ್ತಾಯ್ತು. ಲೂಬಾಳ ಅನೇಕ ಮಕ್ಕಳು ರೋಗಗ್ರಸ್ತವಾದವು. ಮಗುವಿನಿಂದ ಮಗುವಿನತ್ತ ಹೋಗುತ್ತಿದ್ದ ಲೂಬಾ ತಿನ್ನಲು ಸಾಧ್ಯವಿದ್ದ ಮಕ್ಕಳಿಗೆ ಆಹಾರ ಕೊಟ್ಟು ಜ್ವರವನ್ನರಿಯಲು, ಮಕ್ಕಳ ಹಣೆಯನ್ನು ತನ್ನ ತುಟಿಗಳಿಂದ ಸ್ಪರ್ಶಿಸಿ, ತೀರಾ ನರಳುವ ಮಗುವಿಗೆ ಅತ್ಯಂತ ದುರ್ಲಭ ಆಸ್ಪಿರಿನ್ ಕೊಡುವಳು. ಮಕ್ಕಳನ್ನುಳಿಸಲು ಏನಾದರೊಂದು ಪವಾಡವಾಗಲೆಂದು ಪ್ರಾರ್ಥಿಸುವಳು.

೧೯೪೫ರ ಏಪ್ರಿಲ್ ೧೫ರ ಭಾನುವಾರ ನಂದು ಬರ್ಗೆನ್–ಬೆಲ್ಸನ್‌ಗೆ ಬಂದ ಬ್ರಿಟಿಷ್ ಟ್ಯಾಂಕ್ ಒಂದು, "ನೀವು ಸ್ವತಂತ್ರರು, ನೀವು ಸ್ವತಂತ್ರರು, ಎಂದು ಅರ್ಧಡಜನ್ ಭಾಷೆಗಳಲ್ಲಿ ಧ್ವನಿವರ್ಧಕದ ಮೂಲಕ ಸಾರಿತು. ಮಿತ್ರರಾಷ್ಟ್ರಗಳು ಔಷಧಿಯೊಂದಿಗೆ ವೈದ್ಯರನ್ನು ಕರೆತಂದವು. ಆದರೆ ಸಮಯ ಮೀರಿತ್ತು. ಹೂಳದ ಸಾವಿರಾರು ಹೆಣಗಳು ಶಿಬಿರದಲ್ಲಿ ಬಿದ್ದಿದ್ದವು ಉಳಿದ ೬೦ ಸಾವಿರ ಮಂದಿಯಲ್ಲಿ ಕಾಲು ಭಾಗದಷ್ಟು ಜನ ಸ್ವತಂತ್ರರಾದ ಅನಂತರ ಸತ್ತರು.

೧೮ ವಾರಗಳ ಹಿಂದೆ ಲೂಬಾ ಕಂಡ ೫೨ ಮಕ್ಕಳಲ್ಲಿ ಇಬ್ಬರನ್ನುಳಿದು ಮಿಕ್ಕವರೆಲ್ಲಾ ಬದುಕಿದ್ದರು. ಪ್ರಯಾಣ ಮಾಡುವಷ್ಟು ಶಕ್ತಿ ಪಡೆದಾಗ, ಬ್ರಿಟಿಷ್ ಮಿಲಿಟರಿ ವಿಮಾನವೊಂದು ಅವರನ್ನು ಮನೆಗೊಯ್ಯಿತು. ದಾರಿಯುದ್ದಕ್ಕೂ ಲೂಬಾ ಆ ಮಕ್ಕಳ ಶುಶ್ರೂಷೆ ಮಾಡಿದಳು. ಅನಂತರ, ಡಚ್ ಅಧಿಕಾರಿಯೊಬ್ಬ ಲೂಬಾಳಿಂದಾಗಿ ಈ ಮಕ್ಕಳು ಉಳಿದವು. ನಾನೊಬ್ಬ ಡಚ್ ಆಗಿ, ಅವಳು ಮಾಡಿರುವ ಸಹಾಯಕ್ಕೆ ಕೃತಜ್ಞತೆಗಳನ್ನರ್ಪಿಸುತ್ತೇನೆಂದು ಬರೆದ.

ತಮ್ಮ ತಾಯಂದಿರೊಂದಿಗೆ ಸೇರಲು ತವಕಿಸುತ್ತಿದ್ದ ಮಕ್ಕಳಿಗೆ, ತಾತ್ಕಾಲಿಕ ವಸತಿ ಕಲ್ಪಿಸಲಾಯ್ತು. ಅಂತಾರಾಷ್ಟ್ರೀಯ ರೆಡ್‌ಕ್ರಾಸ್‌ನ ಕೋರಿಕೆಯ ಮೇರೆಗೆ, ಲೂಬಾ ಯುದ್ಧದಲ್ಲಿ ತಬ್ಬಲಿಗಳಾದ ೪೦ ಮಕ್ಕಳನ್ನು ಬೇರೆ ಬೇರೆ ಕ್ಯಾಂಪ್‌ಗಳಿಂದ ಸ್ವೀಡನ್‌ಗೆ ಕರೆತಂದಳು. ಅಲ್ಲಿಂದ ಮುಂದೆ ಆ ಮಕ್ಕಳು ಹೊಸ ಜೀವನ ಪ್ರಾರಂಭಿಸಬೇಕಿತ್ತು.

ಹೊಸ ಜೀವನ ಪ್ರಾರಂಭಿಸಿದ ಲೂಬಾ, ಸ್ವೀಡನ್‌ನಲ್ಲಿ ಶಿಬಿರದ ಸಂಕಷ್ಟಗಳಿಂದ ಉಳಿದುಕೊಂಡ, ಮತ್ತೊಬ್ಬ ವ್ಯಕ್ತಿ ಸೋಲ್ ಫ್ರೆಡರಿಕ್ ಅನ್ನು ವಿವಾಹವಾಗಿ ಅಮೆರಿಕೆ ಸಂಯುಕ್ತಸಂಸ್ಥಾನದಲ್ಲಿ ನೆಲಿಸಿ, ಇಬ್ಬರು ಮಕ್ಕಳನ್ನು ಪಡೆದಳು. ಆದರವಳು ಶಿಬಿರದ ಮಕ್ಕಳನ್ನು ಮರೆಯಲಿಲ್ಲ.

ತಾವು ನೆಲಸಿದಲ್ಲಿಂದ "ಲೂಬಾಳ ಮಕ್ಕಳು" ಪ್ರವರ್ಧಮಾನಕ್ಕೆ ಬಂದರು. ಲಾಸ್ ಎಂಜಲೀಸ್‌ನಲ್ಲಿ ನೆಲಿಸಿದ ಜಾಕಿ ರೋಡ್ರಿ ಯಶಸ್ವೀ ವ್ಯಾಪಾರಿ ಎನಿಸಿದ. ಹೆಬ್ಬಿ ವರ್ಕ್ಮಂಡವ್ ಯಶಸ್ವೀ ವಲಸೆಗಾರಳೆನಿಸಿದಳು. ಗೆರಾಲ್ಡ್ ಲಾಕ್ಮೆಕರ್ ಯಶಸ್ವೀ ತಯಾರಕನಾಗಿ ಉನ್ನತಿ ಪಡೆದು ಸ್ಟೆಲ್ಲಾ ಡೆನೆನ್ ಪರ್ಬಿಗ್‌ಳಿಗೆ, ಬರ್ಗನ್ ಬೆಲ್ಸೆನ್‌ನ ನೆನಪ್ಪಳಿದಿರಲಿಲ್ಲ. ಆದರೆ ಅವಳು ಬೆಳೆದಂತೆ, ಅವಳ ತಾಯಿ ಅವಳಿಗೆ "ಲೂಬಾ ಹೆಸರಿನ ಹೆಂಗಸಿಗೆ ತಾನೆಷ್ಟು ಋಣಿ" ಎಂದು ಹೇಳುತ್ತಿದ್ದಳು. ಸ್ಟೆಲ್ಲಾಳಿಗೆ ತನ್ನ ರಕ್ಷಕಿ ಎಲ್ಲಿರಬಹುದೆಂದು ಆಚ್ಚರಿಯಾಗುತ್ತಿತ್ತು.

ಉಳಿದವರು ಲೂಬಾಳನ್ನು ಹುಡುಕಲು ನಿರ್ಧರಿಸಿದರು. ಸ್ವಾತಂತ್ರ್ಯ ಸಿಕ್ಕಿದ ೫ ವರ್ಷಗಳ ಅನಂತರ ಜಾಕ್ ರೋಡ್ರಿಗೆ, ದೂರದರ್ಶನದಲ್ಲಿ ಲೂಬಾಳ ಕಥೆ ಹೇಳಲು ಸಾಧ್ಯವಾಯ್ತು." ಯಾರಿಗಾದರೂ ಅವಳೆಲ್ಲಿದ್ದಾಳೆಂದು ತಿಳಿದಿದ್ದರೆ, ದಯವಿಟ್ಟು ನನಗೆ ಫೋನ್‌ಮಾಡಿ ಎಂದು ವಿನಂತಿಸಿಕೊಂಡ.

"ನನಗೆ ಗೊತ್ತು, ಲೂಬಾ ಇಲ್ಲಿಯೇ ಪಟ್ಟಣದಲ್ಲಿ ವಾಸವಾಗಿದ್ದಾಳೆ" ಎಂದು ವಾಷಿಂಗ್ಟನ್ನಿನಿಂದ ವ್ಯಕ್ತಿಯೊಬ್ಬ ಫೋನ್

ಮಾಡಿದ. ತಕ್ಷಣವೇ ಜಾರ್ಕ್ ಲೂಬಾಳನ್ನು ಸಂಪರ್ಕಿಸಿದ. ವಾರದೊಳಗೆ ಅತ ಲೂಬಾಳ ಮನೆಸೇರಿ, ಅವಳನ್ನು ತನ್ನ ಮಮತೆಯ ತೋಳಿನಿಂದ ಬಂಧಿಸಿದ ಉದ್ವೇಗದಿಂದ ಇಬ್ಬರೂ ಕಣ್ಣೀರುಗರೆದರು.

ಲಂಡನ್ನಿನಲ್ಲಿದ್ದ ಗೆರಾರ್ಡ್ ಲಾಕ್ಮೆಕರ್ ಲೂಬಾಳಿಗಾಗಿ, ಗೌರವ ಕೂಟವೊಂದನ್ನು ಏರ್ಪಡಿಸಲು ಪ್ರಯತ್ನಿಸತೊಡಗಿದ. ಒಟ್ಟಾಗಿದ್ದ ಹಿಡಿಯಷ್ಟು ಮಂದಿ ಉಳಿದವರಿಗಾಗಿ ಹುಡುಕಾಟ ನಡೆಸತೊಡಗಿದರು. ೩೦ ವರ್ಷಗಳ ಸ್ವಾತಂತ್ರ್ಯನಂತರ, ೧೯೭೫ರ ಏಪ್ರಿಲ್‌ನ ಹೊಳೆ ಹೊಳೆವ ಮಧ್ಯಾಹ್ನದಂದು ಶಿಬಿರದಲ್ಲಿ ಮಕ್ಕಳಂತೆ ಒಬ್ಬರನ್ನೊಬ್ಬರು ಭೇಟಿಯಾಗಿದ್ದ ಸುಮಾರು ೩೦ ಮಂದಿ ಸ್ತ್ರೀ ಪುರುಷರು ಆಮ್‌ಸ್ಟರ್ ಡಾಮ್‌ನ ಸಿಟಿಹಾಲ್‌ನಲ್ಲಿ ಲೂಬಾಳನ್ನು ಗೌರವಿಸಲು ಸೇರಿದರು.

ಭಾವಪರವಶತೆಗೊಳಗಾದ ಸ್ವರದೊಂದಿಗೆ, ರಾಣಿ ಬೀಟ್ರಿಕ್ಸ್‌ಳ ಪರವಾಗಿ ಡೆಪ್ಯುಟಿಮೇಯರ್ ಮಾನವತೆಯ ಸೇವೆಗಾಗಿ, ಲೂಬಾಳಿಗೆ ನೆದರ್‌ಲೆಂಡ್‌ನ ಬೆಳ್ಳಿ ಫಲಕದ ಗೌರವ ಸಮರ್ಪಿಸಿದ ಲೂಬಾ ಭಾವೋದ್ರೇಕದಿಂದ ಕಂಪಿಸಿದಳು. ಅಷ್ಟೊಂದು ವೃತ್ತಪತ್ರಿಕೆ ಹಾಗೂ ದೂರದರ್ಶನದ ವರದಿಗಾರರು, ಈ ಮಿಲನದ ಸಂದರ್ಭದಲ್ಲಿ ಹಾಜರಿರಬಹುದೆಂದೂ, ಡೆಪ್ಯುಟಿಮೇಯರ್ ಭಾಷಣ ಮಾಡಬಹುದೆಂದೂ ಅವಳು ತಿಳಿದಿರಲಿಲ್ಲ.

ಕಾರ್ಯಕ್ರಮದ ಅನಂತರ, ಸ್ಟೆಲ್ಲಾ ಡೆಗೆನ್ ಫ್ಲೋರ್ಟಿನ್ ಲೂಬಾಳ ಬಳಿ ಬಂದು 'ನಾನು ನನ್ನ ಜೀವನದುದ್ದಕ್ಕೂ ನಿನ್ನನ್ನು ನೆನಸುತ್ತಿದೆ ಎಂದು ನಡುಗುತ್ತಿದ್ದ ತನ್ನ ಸ್ವರವನ್ನು ನಿಯಂತ್ರಿಸುತ್ತ ಹೇಳಿದಳು. ನಮ್ಮಮ್ಮ ನನಗೆ ಜನ್ಮಕೊಟ್ಟವಳು ಮಾತ್ರವೆಂದೂ, ಆದರೆ ನನ್ನ ಜೀವನಕ್ಕಾಗಿ ನಾನು ಲೂಬಾಳಿಗೆ ಋಣಿಯಾಗಿರಬೇಕೆಂದೂ, ಈ ವಿಷಯವನ್ನು ನಾನೆಂದೂ ಮರೆಯಬಾರದೆಂದು ಯಾವಾಗಲೂ ಹೇಳುತ್ತಿದ್ದಳು. ಸ್ಟೆಲ್ಲ ಆನಂದಭಾಷ್ಪವನ್ನು ಸುರಿಸುತ್ತ ಲೂಬಾಳನ್ನಪ್ಪಿ ಅವಳ ಕಿವಿಯಲ್ಲಿ, "ನಾನೆಂದೂ ಮರೆಯುವುದಿಲ್ಲ" ಎಂದು ಸುರಿದಳು.

ಲೂಬಾ ಅವಳನ್ನಪ್ಪಿ, ಕಂಬನಿದುಂಬಿದ ಕಣ್ಣಿಂದ ಇತರರತ್ತ ನೋಡಿದಳು. ಆ ಮಕ್ಕಳೊಂದಿಗಿನ ಪುನರ್ಮಿಲನ, ಅವರನ್ನು ಹಾಗೂ ತನ್ನನ್ನೂ ಸಾವಿನ ಶಿಬಿರದ ನೆರಳಿಂದುಳಿಸಿದ ಆವರ ಪ್ರೀತಿಯೇ ನಿಜಕ್ಕೂ ಅವಳಿಗೆ ಸಂದ ಬಹುಮಾನವಾಗಿತ್ತು!

ಸಂಗದಿಂದ ಸನ್ಯಾಸವೂ ಹೆಗ್ಗಳಿಕೆಯಿಂದ ಬುದ್ಧಿಯೂ ಗರ್ವದಿಂದ ಜ್ಞಾನವೂ ಅನಾದರದಿಂದ ಸ್ನೇಹವೂ ಮದ್ಯಪಾನದಿಂದ ವಿನಯವೂ ದುರ್ಬೋಧನೆಯಿಂದ ಅರಸರೂ ನಾಶ ಹೊಂದುತ್ತಾರೆ.

—ತುಳಸೀದಾಸರು

ಕಲಾವಿದ ಕಂಡಂತೆ 'ಚದುರಂಗ'

ಪಿ. ಆರ್. ತಿಪ್ಪೇಸ್ವಾಮಿ
೧೬೩, ರಮಾವಿಲಾಸ ರಸ್ತೆ
ಮೈಸೂರು–೨೪

ಮೈಸೂರಿನ ಆನಂದ ಭವನದ ನೆರೆಯ ಪುಸ್ತಕದಂಗಡಿಯ ಬಳಿ ಹಿಂದೊಮ್ಮೆ (೧೯೫೦) ಕಲೆಗೆ ಸಂಬಂಧಪಟ್ಟ ಹೊತ್ತಗೆಯೊಂದನ್ನು ನೋಡುತ್ತಿದ್ದೆ. ಸಾಹಿತಿ 'ಚದುರಂಗ'ರು ಹಿಂದಿನಿಂದ ಬೆನ್ನು ತಟ್ಟಿದರು. ಅವರೊಡನೆ ಕಲೆಯ ವಿಷಯದಲ್ಲಿ ಚರ್ಚೆ ನಡೆಸುತ್ತ ಮಾರ್ಕೆಟ್ಟಿನ ಕಡೆ ಹೊರಟೆವು. ಮಾರ್ಕೆಟ್ ಚೌಕದಲ್ಲಿ ಅವರು ಹಿಂಭಾಗದ ರಸ್ತೆಯ ಕಡೆ ಹೊರಟುದನ್ನು ಕಂಡು ನನಗೆ ಆಶ್ಚರ್ಯವಾಯಿತು. "ಶಿಲ್ಪಿಯೊಬ್ಬರನ್ನು ಪರಿಚಯ ಮಾಡಿಕೊಡುತ್ತೇನೆ ಬನ್ನಿ" ಎಂದು ನನ್ನನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋದರು. ಮಾರ್ಕೆಟ್ಟಿನ ಹಿಂಬದಿಯಲ್ಲಿ ಪಶ್ಚಿಮಕ್ಕೆ ರಸ್ತೆ ಕವಲು ಒಡೆಯುತ್ತದೆ. ಎಡ ಭಾಗದ ರಸ್ತೆಯಲ್ಲಿ ಕೊಂಚ ದೂರ ಹೋಗುವುದರಲ್ಲಿ ಮಾರ್ಕೆಟ್ಟಿನ ಗದ್ದಲ ಸರಿದು ಕರಗಿ ಹೋಗುತ್ತದೆ. ಅಲ್ಲೊಂದು ಸಣ್ಣ ಮನೆ, ಬಾಗಿಲಿನಲ್ಲಿ ನಿಂತು ಕೂಗಿದೆವು. ಒಳಗಿನಿಂದ ಯಾರೋ ದೀಪ ತೆಗೆದುಕೊಂಡು ಬಂದರು. ಕಿರಿದಾದ ಹಂತಗಳ ಸಾಲಿನಲ್ಲಿ ತಲೆಯನ್ನು ತಗ್ಗಿಸಿಕೊಂಡು ಅಗಾಧವಾದ ಕತ್ತಲಿನಲ್ಲಿ ತಡವರಿಸಿ ಮುಂದೆ ಹೋದೆವು. ಇದ್ದಕ್ಕಿದಂತೆಯೇ ಬೆಳಕು ಗೋಚರಿಸಿತು. ಮಹಡಿಯ ಮೇಲಿನ ಆ ದೊಡ್ಡ ಕೊಠಡಿಯಲ್ಲಿ ಅನೇಕ ಶಿಲಾಮೂರ್ತಿಗಳನ್ನು ನೋಡಿ ನಾವು ಹೊರ ಪ್ರಪಂಚವನ್ನು ಮರೆತುಬಿಟ್ಟೆವು. ಪೇಪರ್ ಮೌಲ್ಡಿಂಗ್‌ನ ಅತ್ಯುತ್ತಮ ಶಿಲ್ಪ ಕೃತಿಗಳನ್ನು ನಿರ್ಮಿಸಿದ ಶಿಲ್ಪಿ ಶ್ರೀನಿವಾಸಚಾರ್ಯರು ಕೆಲಸ ಮಾಡುತ್ತಲೇ ನಮ್ಮನ್ನು ಸ್ವಾಗತಿಸಿದರು.

ನಾವು ಹೋದಾಗ ಅವರು ಶ್ರೀಕೃಷ್ಣನ ವಿಗ್ರಹವೊಂದಕ್ಕೆ ಕಾಗದದ ಹಿಟ್ಟನ್ನು ಕಲಾತ್ಮಕವಾಗಿ ತುಂಬುತ್ತಿದ್ದರು. ಅಸ್ತವ್ಯಸ್ತವಾಗಿ ಬಿದಿದ್ದ ಅವರ ಸಲಕರಣೆಗಳು, ಅರ್ಧ ಮುಗಿದ, ಆರಂಭಿಸಿದ, ಪೂರ್ಣಗೊಂಡ ಶ್ವೇತ ವಿಗ್ರಹಗಳು-ಇವೆಲ್ಲವನ್ನು ಒಮ್ಮೆ ಮನದಣಿಯೆ ನೋಡಬೇಕೆನಿಸಿತು. ಗಂಭೀರವಾದ ನಗೆಯನ್ನು ಬೀರುತ್ತಾ ಸಾಧಾರಣ ಉಡುಪಿನಲ್ಲಿದ್ದ ಶಿಲ್ಪಿಗಳು ಎದ್ದು ನಮಗೆ ಕೂರಲು ಎಡೆ ಮಾಡಿಕೊಟ್ಟರು. ಈ ಘಟನೆ ನಡೆದದ್ದು ನಾಲ್ಕು ದಶಕಗಳ ಹಿಂದೆ ಅದೂ ಚದುರಂಗರಿಂದಾಗಿ ಓರ್ವ ಅಪರೂಪದ ಶಿಲ್ಪಿಯ ಪರಿಚಯ ನನಗಾಯಿತು.

ಮೈಸೂರಿನ ಸಾಹಿತ್ಯ ವಿಮರ್ಶೆ ವಲಯದಲ್ಲಿ ಪ್ರಮುಖರಾಗಿದ್ದ ಕವಿ ಗೋಪಾಲ

ಕೃಷ್ಣ ಅಡಿಗರು ಮಹಾಕವಿ ಕುವೆಂಪು ಅವರ ಶ್ರೀ ರಾಮಾಯಣದರ್ಶನಕ್ಕೆ ಪ್ರಶಸ್ತಿ ಬಂದ ಸಂದರ್ಭದಲ್ಲಿ ಒಂದು ಸತ್ಕಾರ ಕೂಟ ಏರ್ಪಾಟು ಮಾಡಿದ್ದರು. ಈ ಸಂದರ್ಭದಲ್ಲಿ ಚದುರಂಗರ ಸೂಚನೆ ಮೇರೆಗೆ ಶಿಲ್ಪಿ ಶ್ರೀನಿವಾಸಚಾರ್ಯರಿಂದ ರಚಿತವಾದ ಸರಸ್ವತಿ ಶ್ವೇತ ವಿಗ್ರಹ ವೊಂದನ್ನು 'ಕುವೆಂಪು' ಅವರಿಗೆ ಅರ್ಪಿಸಲಾಯಿತು. ಈ ಕಾಣಿಕೆಯನ್ನು ''ಸಹೃದಯ ಸರಸ್ವತಿ'' ಎಂದು ಕವಿಗಳು ಕರೆದರು. ಇದು 'ಉದಯ ರವಿ'ಯಲ್ಲಿ ಈಗಲೂ ರಾರಾಜಿಸುತ್ತಿದೆ. ಇದಕ್ಕೆ ಚದುರಂಗರೇ ಕಾರಣರು ಎಂಬುದನ್ನು ಮರೆಯುವಂತಿಲ್ಲ.

ಚದುರಂಗರು ಪೂನದಲ್ಲಿ ಲಾ ಕಾಲೇಜಿನಲ್ಲಿ ವ್ಯಾಸಂಗ ಮುಂದುವರಿಸಿದ ಸಂದರ್ಭ. ಅಲ್ಲೂ ವಿದ್ಯಾರ್ಥಿ ಸಂಘದ ಪಟ್ಟ. ಆಗಲೂ ಡಾ|| ರಾಧಾಕೃಷ್ಣರ ಅಧ್ಯಕ್ಷತೆಯ ಒಂದು ಸಮಾರಂಭ. ವೇದಿಕೆಗೆ ಬರುತ್ತಿದ್ದ ಅವರು ಚದುರಂಗರನ್ನು ಕಂಡೊಡನೆ ಜಟ್ಟಿ ತಾಯಮ್ಮನವರನ್ನು ನೆನಪು ಮಾಡಿ ಮಾಡಿಕೊಂಡರು. ''ಹೌ ಈಸ್ ಶಿ'' ಎಂದು ವಿಚಾರಿಸುವುದನ್ನು ಮರೆಯಲಿಲ್ಲ.

ಚಿತ್ರಕಲೆ, ಶಿಲ್ಪಕಲೆ, ಸಂಗೀತ, ನಾಟ್ಯ ನಾಟಕ ಮೊದಲಾದ ಕಲೆಗಳ ಬಗ್ಗೆ ಹಾಗೂ ಕಲಾವಿದರ ಬಗ್ಗೆ ಚದುರಂಗರಿಗೆ ಇದ್ದ ಆಸಕ್ತಿಯನ್ನು ಕಲೆಯ ಬೆಳವಣಿಗೆ ಮತ್ತು ಕಲಾವಿದರ ಬದುಕಿನ ಬಗೆಗೆ ಇವರಿಗಿರುವ ನಿಜವಾದ ಕಾಳಜಿಯನ್ನು ಕಂಡು ವಿಸ್ಮಯ ಗೊಂಡಿದ್ದೇನೆ.

ಜಟ್ಟಿ ತಾಯಮ್ಮ ಸುಪ್ರಸಿದ್ಧ ನೃತ್ಯಗಾತಿ ಎನಿಸಿದ್ದರು. ಈಕೆಯ ಪ್ರಮುಖ ಶಿಷ್ಯರಲ್ಲಿ ವೆಂಕಟಲಕ್ಷ್ಮಮ್ಮ, ಸುಂದರಮ್ಮ ಎಸ್. ಎನ್. ಸ್ವಾಮಿ ಪ್ರಮುಖರಾಗಿದ್ದರು. ಇವರೆಲ್ಲರೂ ಚದುರಂಗ ಅವರಿಗೆ ಪರಿಚಿತರಷ್ಟೆ ಅಲ್ಲ ಆಪ್ತರೂ ಆಗಿದ್ದರು.

ಜಟ್ಟಿ ತಾಯಮ್ಮನವರ ನೃತ್ಯ ಕಲೆ ಮೆಚ್ಚಿಕೊಂಡಿದ್ದ ಚದುರಂಗರು ಆಗಾಗ ಅವರ ಬಳಿ ಹೋಗಿ ಬರುತ್ತಿದ್ದರು. ೧೯೪೦ರಲ್ಲಿ ಮೈಸೂರಿನ ಬಿಡಾರಂ ಕೃಷ್ಣಪ್ಪನವರ ರಾಮಮಂದಿರದಲ್ಲಿ ಹಿರಿಯ ಸಂಗೀತ ವಿದ್ವಾಂಸರ ಭಾವಚಿತ್ರಗಳನ್ನು ರಚಿಸುವ ಒಂದು ಸದವಕಾಶ ಎಸ್. ಎನ್. ಸ್ವಾಮಿಗಳಿಗೆ ಬಂದಿತ್ತು. ಆ ಸಂದರ್ಭದಲ್ಲಿ ಜಟ್ಟಿ ತಾಯಮ್ಮನವರ ಶಿಷ್ಯರಾಗಿದ್ದ ಸ್ವಾಮಿಗಳು ನೃತ್ಯಾಭ್ಯಾಸಕ್ಕೆ ತೊಡಗಿದ್ದರು. ಒಮ್ಮೆ ಕೈಲಾಸಂ ಅವರು ಈ ಸ್ಥಳಕ್ಕೆ ಬಂದರು. ತಾಯಮ್ಮನವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಅಲ್ಲೇ ಇದ್ದ ಸ್ವಾಮಿಗಳತ್ತ ತಿರುಗಿ ನಗುತ್ತ 'ಲೋ ಸ್ವಾಮಿ, ನೀನು ಪುಣ್ಯ ಮಾಡಿದ್ದೆ ಇಂಥ ಅಜ್ಜಿಯಿಂದ ಪಾಠ ಹೇಳಿಸಿಕೊಳ್ಳೋಕೆ. ಈ ಹೆಂಗಸು ವಿದೇಶದಲ್ಲಿ ಇದ್ದಿದ್ದರೆ ಚಿನ್ನದ ಪ್ರತಿಮೆ ಮಾಡಿಸಿ ಪಾರ್ಕಿನಲ್ಲಿ ಮೆರೆಸುತ್ತಿದ್ದರು'' ಎಂದು ಹೇಳಿದ ಒಂದು ಸಂದರ್ಭವನ್ನು ಅಲ್ಲಿದ್ದು ನೋಡಿದ ಚದುರಂಗರು ಹೆಮ್ಮೆಯಿಂದ ಆಗಾಗ ನೆನಪಿಸಿಕೊಳ್ಳುತ್ತಿದ್ದರು. ನೃತ್ಯಕಾರರ ಚಿತ್ರಕಾರರ ಸಂಪರ್ಕ ಚದುರಂಗರಿಗೆ ಮೊದಲಿನಿಂದಲೂ ಇದ್ದಿತು ಎಂಬುದನ್ನು ನಾನು ಚೆನ್ನಾಗಿ ಬಲ್ಲೆ.

೧೯೩೧ರ ಸಮಯ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ

ನಾನು, ಹೇಮದಳ ರಾಮದಾಸ, ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದ ಎಂ. ಬಿ. ಮರಕಿಣಿ, ಇಂಟರ್-ಓದಿನಲ್ಲಿದ್ದ ಜೀಶಂ ಪರಮಶಿವಯ್ಯ, ನಜೀರ್ ಸಾಬ್ (ದಿವಂಗತ ಮಂತ್ರಿ)ಮೊದಲಾದ ಉತ್ಸಾಹಿ ಮಿತ್ರರು 'ಕಲಾಕ್ಷೇತ್ರ' ಮಾಸ ಪತ್ರಿಕೆಯ ಮೂಲಕ ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಕಲೆ ಬಗ್ಗೆ ಆಸಕ್ತಿ ಮೂಡಿಸುತ್ತಿದ್ದ ದಿನಗಳವು.

ನಾನು, ಮರಕಿಣಿ, ಹೇಮದಳ ಒಂದು ಭಾನುವಾರ ಒಂಟಿಕೊಪ್ಪಲಿನ ಚದುರಂಗ ಭವನಕ್ಕೆ ಹೋದೆವು. ಗೇಟು ಮುಚ್ಚಿತ್ತು. ಹೂದೋಟದಲ್ಲಿದ್ದ ಕೈಕೆಲಸ ಮಾಡುತ್ತಿದ್ದ ಮಾಲಿಯನ್ನು ವಿಚಾರಿಸಿದಾಗ 'ಪುಟ್ಟ ಬುದ್ಧೋರು ಹೊರಗೆ ಹೋಗಿದ್ದಾರೆ, ಇನ್ನೇನು ಬರಬಹುದು' ಎಂದು ತಿಳಿಸಿದ. ವೇಳೆ ಕಳೆವರೂ ಚದುರಂಗರ ಸುಳಿವು ಇಲ್ಲದ್ದರಿಂದ 'ಇನ್ನೊಮ್ಮೆ ಬರುತ್ತೇವೆ' ಎಂದು ತಿಳಿಸಿ ಹೊರಗೆ ಬರುವುದಕ್ಕೂ 'ಪುಟ್ಟಬುದ್ದಿ'ಯವರು ಒಳಕ್ಕೆ ಕಾಲಿಡುವುದಕ್ಕೂ ಸರಿಹೋಯಿತು. ನಾವು ಕಾದಿದ್ದ ಸಂಗತಿ ತಿಳಿದುಕೊಂಡು 'ನಮಸ್ಕಾರ' ಎಂದಷ್ಟೆ ಹೇಳಿ ತತ್‌ಕ್ಷಣ 'ಹೋಗೋಣ ಬನ್ನಿ' ಎಂದು ನಮ್ಮನ್ನು ಹೊರಗೆ ಸಾಗಿಸಿಯೇ ಬಿಟ್ಟರು! ನೋಡಲು ಬಂದ ನಮ್ಮನ್ನು ಯಾರು ಏನು ಎಂದು ವಿಚಾರಿಸದ ಮನೆಯೊಳಗೆ ಬನ್ನಿ ಎನ್ನದ ಒಂದು ಒಳ್ಳೆಯ ಮಾತನ್ನೂ ಆಡದ ಇವರೆಂಥ 'ಪ್ರಗತಿ ಶೀಲ ಸಾಹಿತಿ' ಎಂದು ಗೊಣಗಿಕೊಂಡೆವು. ಅರಸರು ನಮ್ಮನ್ನು ಒಂಟಿಕೊಪ್ಪಲಿನ ಆನಂದ ಭವನ ಹೋಟೆಲಿಗೆ ಕರೆತಂದರು. ಜಾಮೂನು, ಮಸಾಲೆ ದೋಸೆ ಬಾದಾಮಿ ಹಾಲು ಕೊಡಿಸಿದ ನಂತರ ಸಾಕಷ್ಟು ವೇಳೆ ಸಂಭಾಷಣೆಯಲ್ಲಿ ಕಳೆದವು. ನಮ್ಮ ಕಲಾಕ್ಷೇತ್ರ ಸಂಸ್ಥೆಯ ಕೆಲಸ ಕಾರ್ಯಗಳನ್ನು ಮುಕ್ತ ಕಂಠದಿಂದ ಹೊಗಳಿ ತರುಣರಾದ ನಮ್ಮನ್ನು ಹುರಿದುಂಬಿಸಿ ಕಾರ್ಯಪ್ರವೃತ್ತರಾಗಿಸುತ್ತಿದ್ದರು. ರಮಾವಿಲಾಸ ಅಗ್ರಹಾರದ ಗಾಂಧಿ ಭವನದ ಮಹಡಿಯ ಮೇಲೆ ನಾನು ಪ್ರತಿ ತಿಂಗಳೂ ಚಿತ್ರ ಶಿಲ್ಪ ಅಕಾಡೆಮಿ ಮೂಲಕ ಏರ್ಪಡಿಸುತ್ತಿದ್ದ ಕಲಾಪ್ರದರ್ಶನ ಹಾಗೂ ಸಮಾರಂಭಗಳಿಗೆ ಅತಿಥಿಯಾಗಿ ಬಂದು ಕಲಾವಿದರನ್ನು ಪ್ರೋತ್ಸಾಹಿಸುತ್ತಿದ್ದರು. ನಾವು ಏರ್ಪಡಿಸಿದ್ದ ವಿಶ್ವವಿದ್ಯಾಲಯ ಮಟ್ಟದ ಕವಿತಾ ಸ್ಪರ್ಧೆಯ ತೀರ್ಪುಗಾರರಾಗಿ ಅಡಿಗ,ತರಾಸು ಜೊತೆಗೆ ಚದುರಂಗರೂ ಒಬ್ಬರಾಗಿ ಬಂದಿದ್ದರು. ವಿದ್ಯಾರ್ಥಿಗಳಾಗಿದ್ದ ವೃಷಭೇಂದ್ರಸ್ವಾಮಿ, ಮರುಳಸಿದ್ಧ ಅವರ ಕವನಗಳಿಗೆ ಬಹುಮಾನ ಬಂದುದು ಇನ್ನೂ ನೆನಪಿದೆ. ಹೀಗೆ ಚದುರಂಗರು ಬಾಳಿನುದ್ದಕ್ಕೂ ಕಲೆ ಹಾಗೂ ಕಲಾವಿದರ ನಿಕಟ ಸಂಪರ್ಕ ಹೊಂದಿರುತ್ತಿದ್ದುದನ್ನು ಕಂಡಿರುವೆ. ಅಲ್ಲದೆ ಮೈಸೂರಿನ ಎಲ್ಲಾ ಸಾಹಿತಿಗಳ ಜೊತೆ ಚದುರಂಗ ಅವರನ್ನು ದಾಸಪ್ರಕಾಶ್ ಹೋಟೆಲಿನಲ್ಲಿ ಪ್ರತಿ ತಿಂಗಳೂ ಕಾಣುತ್ತಿದ್ದೆ. ಆದರೆ ಕೊನೆ ಕೊನೆಗೆ ಅವರ ಭೇಟಿ ಇಲ್ಲವಾಯಿತು. ಏಕೆಂದು ವಿಚಾರಿಸಿದಾಗ ಅವರು ಮೈಸೂರು ಬಿಟ್ಟು ತಮ್ಮ ಊರು ಕಲ್ಲಹಳ್ಳಿಯಲ್ಲಿ ವಾಸವಾಗಿದ್ದಾರೆ ಎಂದು ತಿಳಿಯಿತು. ಅಲ್ಲಿ ಜನಸಾಮಾನ್ಯರ ಜೀವನವನ್ನು ಹತ್ತಿರದಿಂದ ನೋಡುವ ಹಂಬಲದಿಂದ ರೈತರಾಗಿ ಜೀವನ ನಡೆಸಿದರು. ಬೇಸಾಯ ಮಾಡಿದರು. ಇದರಿಂದ ಹೆಚ್ಚು

ಬೆಳೆಯು ಬದಲು ಗ್ರಾಮೀಣ ಸಂಸ್ಕೃತಿ ಸಂಪತ್ತನ್ನು ಹೆಚ್ಚು ಗಳಿಸಿದರು. 'ವೈಶಾಖ' ಕಾದಂಬರಿ ಮೂಡಿದ್ದು ಇಲ್ಲೇ. ಚದುರಂಗರ ಏಕೈಕ ಪುತ್ರ ವಿಕ್ರಮನ ಪ್ರೌಢ ವ್ಯಾಸಂಗಕ್ಕಾಗಿ ಮೈಸೂರಿಗೆ ಮತ್ತೆ ಹಿಂದಿರುಗಬೇಕಾಯಿತು.

ಚದುರಂಗರು ವಾಸವಾಗಿದ್ದ ಪಕ್ಕದ ಬೀದಿಯ ಪುಟ್ಟಮನೆಯಲ್ಲಿ ಸುಪ್ರಸಿದ್ಧ ಚಿತ್ರ ಶಿಲ್ಪಿ ದಿ|| ಎಸ್. ನಂಜುಂಡಸ್ವಾಮಿಗಳೂ ವಾಸವಾಗಿದ್ದರು. ಇವರು ಪ್ರಸಿದ್ಧ ಶಿಲ್ಪಿ ಸಿದ್ಧಲಿಂಗಸ್ವಾಮಿಗಳ ಅಣ್ಣಂದಿರ ಮಕ್ಕಳು. ಚಾಮರಾಜೇಂದ್ರ ಕಲಾಶಾಲೆಯ ಚಿತ್ರ ಕಲಾಧ್ಯಾಪಕರಾಗಿದ್ದರು. ಇವರ ಕಲೆಯಿಂದ ಆಕರ್ಷಿತರಾದವರಲ್ಲಿ ಚದುರಂಗರೂ ಒಬ್ಬರು. ''ಮಹಾಮೇಧಾವಿ ಸ್ವಾಮಿಗಳೆ'' ಎಂದು ಚದುರಂಗರು ಅವರನ್ನು ಕರೆದರೆ "ಅರಸಿನವರೇ" ಎಂದು ಸ್ವಾಮಿಗಳು ಕರೆಯುತ್ತಿದ್ದರು. ಚದುರಂಗರ 'ಸ್ವಪ್ನಸುಂದರಿ' ಮೊದಲಾದ ಕಥಾ ಸಂಕಲನದ ರಕ್ಷಾ ಕವಚಕ್ಕೆ ಚಿತ್ರ ರಚಿಸಿಕೊಟ್ಟರು. ಉತ್ತಮ ಸಂಸ್ಕೃತ ಪಾಂಡಿತ್ಯ ಗಳಿಸಿದ್ದ ಸ್ವಾಮಿಗಳು ಒಳ್ಳೆಯ ಚಿತ್ರಕಾರರೂ ಶಿಲ್ಪಿಗಳೂ ಆಗಿದ್ದರು. ಆಗಾಗ ಸಾಹಿತ್ಯದ ಬಗ್ಗೆ ಚದುರಂಗರೊಡನೆ ಚರ್ಚಿಸುತ್ತಿದ್ದರು. ಆದರೆ ಎಲ್ಲಾ ದೊಡ್ಡ ಕಲಾವಿದರಂತೆ ಅವರಲ್ಲೂ ಕೂಡ ಒಂದು ಕೊಂಕು ಸ್ವಭಾವ ಮನೆ ಮಾಡಿತ್ತು. ಬಹುಶಃ ಇದಕ್ಕೆ ಮುಖ್ಯ ಕಾರಣ ಸ್ವಾಮಿಗಳು ಯಾರನ್ನೂ ಅಷ್ಟಾಗಿ ನಂಬುತ್ತಿರಲಿಲ್ಲ. ಅವರಿಗೆ ಆದ ಕೆಲವು ಕಟು ಅನುಭವಗಳಿಂದ ಸಾಮಾನ್ಯವಾಗಿ ಮಧ್ಯಮ ವರ್ಗದ ಜನ ನಂಬಿಕೆಗೆ ಅರ್ಹರಲ್ಲ ಎಂದು ತೀರ್ಮಾನಕ್ಕೆ ಬಂದಿದ್ದರು. ತಾವು ರಚಿಸುವ ಚಿತ್ರಗಳು ಅಥವಾ ಶಿಲ್ಪಗಳು ಸ್ವಸಂತೋಷಕ್ಕೆ ಅಷ್ಟೇ ಎಂದು ಭಾವಿಸಿದ್ದರು. ಜನ ಮೆಚ್ಚಲಿ ಎಂದು ಅಲ್ಲ ಅವರ ಕಲಾ ಚಾತುರ್ಯವನ್ನು ನೋಡಿ ಚದುರಂಗರು ಮಾರುಹೋಗಿದ್ದರು. ಆದರಿಂದಾಗಿ ಅವರ ಏಕ ವ್ಯಕ್ತಿ ಕಲಾಕೃತಿಗಳ ಪ್ರದರ್ಶನ ಬೆಂಗಳೂರು, ದೆಹಲಿಯಲ್ಲಿ ಏರ್ಪಾಡು ಮಾಡಿದರೆ ಒಳ್ಳೆಯದಲ್ಲವೆ? ಎಂದು ಒಮ್ಮೆ ತಮ್ಮ ಇಂಗಿತವನ್ನ ಅವರಲ್ಲಿ ವ್ಯಕ್ತಪಡಿಸಿದರು.

ಆದರೆ ಸ್ವಾಮಿಗಳು ಇದಕ್ಕೆ ಒಪ್ಪಲಿಲ್ಲ. "ಯಾರಿಗೆ ಬೇಕು ಕಲೆ? ಕಲಾವಿದರ ಕಲೆಯ ಹೆಸರಿನಲ್ಲಿ ಪ್ರತಿಷ್ಠಿತ ವಿಮರ್ಶಕರು ತಾವು ದೊಡ್ಡವರಾಗಬೇಕು ಎಂದು ಬಯಸುತ್ತಾರೆ, ಅಷ್ಟೆ. ನಾನು ನನ್ನ ಪಾಡಿಗೆ ಚಿತ್ರ ರಚನೆ ಮಾಡ್ತೀನಿ" ಎಂದು ಹೇಳುತ್ತಿದ್ದರಂತೆ.

ಇದಕ್ಕೆ ಪೂರಕವಾಗಿ ಅವರಿಗೆ ಆಗಿದ್ದ ಒಂದು ಅನುಭವವನ್ನು ಸ್ವಾಮಿಗಳು ಚದುರಂಗರ ಬಳಿ ಒಮ್ಮೆ ತೋಡಿಕೊಂಡಿದ್ದರಂತೆ. ಒಮ್ಮೆ ಚಿಕ್ಕಮಗಳೂರು ಕಡೆಯ ದೊಡ್ಡ ಶ್ರೀಮಂತರೊಬ್ಬರು ತಮ್ಮ ಎಸ್ಟೇಟಿನ ಮನೆಗೆ ಸ್ವಾಮಿಗಳನ್ನು ಬರಮಾಡಿಕೊಂಡರಂತೆ. ತಮ್ಮ ಭಾವಚಿತ್ರ ಬಿಡಿಸಿಕೊಡಲು ಒಪ್ಪಿಸಿದ್ದರು. ಸ್ವಾಮಿಗಳು ಆ ಶ್ರೀಮಂತ ವ್ಯಕ್ತಿಯನ್ನು ಕೂಡಿಸಿಕೊಂಡು ಚಿತ್ರ ಬಿಡಿಸಿದರು. ಅವರ ಮುಖದ ಪೊದೆಯಾದ ಮೀಸೆಯನ್ನು ಸ್ವಾಭಾವಿಕವಾಗಿ ಮೂಡಿಸಿದ್ದರು. ಚಿತ್ರ ಇನ್ನೇನು ಮುಗಿಯುವ ಹಂತದಲ್ಲಿತ್ತು. ಶ್ರೀಮಂತ ತನ್ನ ಗೆಳೆಯರನ್ನು ಕರೆತಂದು ತನ್ನ ಭಾವಚಿತ್ರವನ್ನು ಅವರಿಗೆ ಹೆಮ್ಮೆಯಿಂದ ತೋರಿಸಿದ. ಆ ಮಿತ್ರರು

"ನಿಮ್ಮ ಮುಖದಲ್ಲಿ ಇರುವ ಪೊರಕೆ ಈ ಚಿತ್ರದಲ್ಲೂ ಬರಬೇಕೇನಯ್ಯ. ಮೊದಲು ತೆಗೆಸಾಕು" ಎಂದು ಸೂಚನೆ ಕೊಟ್ಟರು. ಆಗ ಶ್ರೀಮಂತ ಸ್ವಾಮಿಗಳ ಬಳಿ ಬಂದು "ನನ್ನ ಮಿತ್ರರಿಗೆ ಆ ಮೀಸೆ ಇಷ್ಟವಿಲ್ಲ. ದಯಪಿಟ್ಟು ತೆಗೆದುಬಿಡಿ" ಎಂದರಂತೆ. ಆಗ ಸ್ವಾಮಿಗಳು ತುಂಬ ಕೋಪ ಬಂದರೂ ನುಂಗಿಕೊಂಡು ಆ ಮೀಸೆಯನ್ನು ಅಳಿಸಿ ಮುಖದ ಬಣ್ಣಕ್ಕೆ ಮತ್ತೆ ಹೊಂದಾಣಿಕೆ ಮಾಡಿ ಚಿತ್ರ ಮುಗಿಸಬೇಕಾಯಿತು. ಕೆಲವು ದಿನಗಳ ಅನಂತರ ತೌರು ಮನೆಗೆ ಹೋಗಿದ್ದ ಶ್ರೀಮಂತನ ಪತ್ನಿ ಮನೆಗೆ ಬಂದಳು. "ನಿಮ್ಮ ಚಿತ್ರ ಎಲ್ಲಿಯ ತನಕ ಬಂದಿದೆ?" ಎಂದು ಗಂಡನನ್ನು ವಿಚಾರಿಸಿದಳು. ಚಿತ್ರ ನೋಡಿದಳು. ಅತ್ಯುತ್ಸಾಹದಿಂದ ಗಂಡ ತನ್ನ ಚಿತ್ರ ತೋರಿಸಿ "ತುಂಬ ಸೊಗಸಾಗಿ ಬಂದಿದೆ ನೋಡು" ಎಂದ. "ಆ ಚಿತ್ರದಲ್ಲಿ ನಿಮ್ಮ ಮೀಸೇನೇ ಇಲ್ಲ. ಬೋಳನ್ಮನ ತರಹ ಕಾಣಿಸ್ತೀರಿ, ಮೊದಲು ಮೀಸೆ ಹಾಕಿಸ್ರಿ ಆ ಮುಖಕ್ಕೆ" ಎಂದಳಂತೆ.

ಶ್ರೀಮಂತ ಮೆಲ್ಲನೆ ಸ್ವಾಮಿಗಳ ಬಳಿ ಬಂದು "ನನ್ನ ಹೆಂಡತಿ ಮೀಸೆ ಇರಲಿ ಎಂದು ಹೇಳ್ತಾಳೆ. ಬೇಜಾರು ಮಾಡಬೇಡಿ ಮೀಸೆ ಮತ್ತೆ ಹಾಕಿಬಿಡಿ" ಅಂದನಂತೆ.

ಸ್ವಾಮಿಗಳಿಗೆ ಅದೆಷ್ಟು ಕೋಪ ಬಂತೋ! "ಏನ್ರೀ ಕಲಾವಿದರು ಅಂದ್ರೆ ಏನೆಂದು ತಿಳಿದಿರಿ. ಒಂದು ಸಲ ಮೀಸೆ ತೆಗೀರಿ ಅಂತೀರಿ, ಒಂದು ಸಾರಿ ಹಾಕ್ರಿ ಅಂತೀರಿ. ನಾನು ಇನ್ನು ಚಿತ್ರ ಮುಟ್ಟೊಲ್ಲ. ನೀವು ಕೊಟ್ಟ ಅಡ್ವಾನ್ಸ್ ಐದು ನೂರು ರೂ. ವಾಪಸ್ಸು ತೆಗೆದುಕೊಳ್ಳಿ. ಎಂದು ಹೇಳಿ ಅವರ ಮುಖಕ್ಕೆ ಎಸೆದು ಬಸ್ಸು ಚಾರ್ಜು ಪಡೆಯದೆ ಸ್ವಾಮಿಗಳು ಮೈಸೂರಿಗೆ ಬಂದ ಸ್ವಾರಸ್ಯಕರ ಸಂಗತಿ ಚದುರಂಗರಿಗೆ ಹೇಳಿದರಂತೆ. ಅಲ್ಲಿಂದ ಸ್ವಾಮಿಗಳು ಬಹಳ ಕಾಲ ಭಾವಚಿತ್ರಗಳನ್ನು ಬರೆಯುವ ಗೋಜಿಗೆ ಹೋಗಲಿಲ್ಲವಂತೆ. ಕೈಲಾಸಂ ಅವರನ್ನು ಕೂರಿಸಿಕೊಂಡು ಒಂದು ಭಾವಚಿತ್ರ ರಚಿಸಿದ್ದು ನಾನು ಅವರ ಕಲಾವಿದ್ಯಾರ್ಥಿಯಾಗಿದ್ದಾಗ ನೋಡಿದ್ದೆ. ಆಗ ಚದುರಂಗ ಅವರೂ ಚಾಮರಾಜೇಂದ್ರ ಕಲಾಶಾಲೆಗೆ ಆಗಾಗ ಸ್ವಾಮಿಗಳ ಭೇಟಿಗೆ ಬರುತ್ತಿದ್ದನ್ನು ನಾನು ಬಲ್ಲೆ.

೧೯೫೦ರಲ್ಲಿ ಚದುರಂಗರ ಕಾದಂಬರಿ 'ಉಯ್ಯಾಲೆ' ರಕ್ಷಾಪುಟಕ್ಕೆ ಚಿತ್ರವನ್ನು ಸ್ವಾಮಿಗಳು ಸಂತೋಷದಿಂದ ರಚಿಸಿ ಕೊಟ್ಟರು. "ಹೇಗಿದೆ?" ಎಂದು ಸ್ವಾಮಿಗಳು ಚದುರಂಗರನ್ನು ಕೇಳಿದರು. "ಚೆನ್ನಾಗಿಲ್ಲ. ನೀವು ವಿಷಯವನ್ನು ಪೂರ್ತಿ ಅರ್ಥ ಮಾಡಿಕೊಂಡು ಚಿತ್ರ ರಚಿಸಿಲ್ಲ, ಬೇರೆ ಬರೆದುಕೊಡಿ" ಎಂದರು ಚದುರಂಗರು. ಆಗ ಸ್ವಾಮಿಗಳಿಗೆ ಕೋಪ ಮೂಗಿನ ತುದಿಗೆ ಬಂತು. ಬೇರೆಯವರು ಈ ಮಾತು ಹೇಳಿದ್ದರೆ ಚಿತ್ರವನ್ನು ಹರಿದು ಚೂರು ಮಾಡುತ್ತಿದ್ದರೇನೋ? ಆದರೆ ಚದುರಂಗರ ಬಗ್ಗೆ

ಸ್ವಾಮಿಗಳಿಗೆ ಪ್ರೀತಿ ವಾತ್ಸಲ್ಯ ಇದ್ದ ಕಾರಣ ಸ್ವಲ್ಪವೂ ಬೇಸರಿಸದೆ ಚದುರಂಗರ ಕಲ್ಪನೆಗೆ ತಕ್ಕ ಒಂದು ಅದ್ಭುತ ಚಿತ್ರ ರಚಿಸಿಕೊಟ್ಟರು.

ಸ್ವಾಮಿಗಳು ರಚಿಸಿದ ಜಲವರ್ಣ ಸಂಯೋಜಿತ ಚಿತ್ರ 'ಕುಮಾರರಾಮ' ಚದುರಂಗರ ಬಳಿ ಇದೆ. ಅದನ್ನು ನೋಡಿದ ಯಾರೇ ಆಗಲಿ ಸ್ವಾಮಿಗಳ ಕುಂಚ ವೈಭವಕ್ಕೆ ಕಲ್ಪನಾ ಚಾತುರ್ಯಕ್ಕೆ ಬೆರಗಾಗುತ್ತಾರೆ.

ಸ್ವಾಮಿಗಳು ಗಿಡಮೂಲಿಕೆಗಳ ಭಟ್ಟಿರಸದಿಂದ ಬಂಗಾರ ತಯಾರಿಕೆಯಲ್ಲಿ ತೊಡಗಿ ನಷ್ಟಕ್ಕೊಳಗಾದ ವಿಚಾರಗಳನ್ನು, ವೈದ್ಯಶಾಸ್ತ್ರದಲ್ಲಿ ಸ್ವಾಮಿಗಳ ಅನುಭವವನ್ನು ಚದುರಂಗರ ಬಾಯಿಂದ ಕೇಳಬೇಕು.

ಒಮ್ಮೆ ಚದುರಂಗರ ಪುತ್ರ ಜ್ವರದ ಬಾಧೆಯಿಂದ ನರಳುತ್ತಿದ್ದ ಸಂದರ್ಭ. ಅದೇ ವೇಳೆಗೆ ಸ್ವಾಮಿಗಳು ಚದುರಂಗರ ಮನೆಗೆ ಬಂದರು. ಚದುರಂಗರು ಡಾಕ್ಟರರನ್ನು ಕರೆತರಲು ಹೊರಡಲಿದ್ದರು. ಆಗ ಸ್ವಾಮಿಗಳು ಅವರನ್ನು ತಡೆದು, ಮನೆಗೆ ಧಾವಿಸಿ ತಕ್ಷಣ ಹಿಂದಿರುಗಿದರು. ಚದುರಂಗರ ಪತ್ನಿ ಚಡಪಡಿಸುತ್ತಿದ್ದರು, ಮಗನ ಒದ್ದಾಟ ನೋಡಲಾರದೆ. ಸ್ವಾಮಿಗಳ ಕೈಯಲ್ಲಿ ದೊಡ್ಡ ಕಿತ್ತಲೆ ಹಣ್ಣಿನ ಗಾತ್ರದ ಒಂದು ಕಪ್ಪು ವಸ್ತು ಇತ್ತು. ಗಂಧ ತೇಯುವ ಸಾಣೆಕಲ್ಲು ತರಿಸಿದರು. ಸ್ವಲ್ಪ ಜೇನುತುಪ್ಪ ತರಿಸಿದರು. ಕಪ್ಪು ವಸ್ತುವನ್ನು (ಕಪ್ಪು ಮಾತ್ರೆ) ಮೂರು ಸುತ್ತು ತೇದು ಬೆರಳಿನಲ್ಲಿ ತೆಗೆದು ಸವರಿದರು. "ಇನ್ನು ಡಾಕ್ಟರ ಬಳಿ ಹೋಗುವ ಅವಶ್ಯಕತೆ ಇಲ್ಲ" ಎಂದು ಹೇಳಿ ಚದುರಂಗ ದಂಪತಿಗಳೊಡನೆ ಹರಟುತ್ತಾ ಕುಳಿತರಂತೆ. ಅರ್ಧ ತಾಸಿನಲ್ಲಿ ಮಗುವಿನ ಮುಖ ಮೈಯಲ್ಲಿ ಬೆವರು ಕಾಣಿಸಿಕೊಂಡಿತು. ಜ್ವರ ಬಿಟ್ಟು ಹೋಗಿ ಏನೊಂದೂ ಹೊಟ್ಟೆಗೆ ತೆಗೆದುಕೊಳ್ಳದಿದ್ದ ಮಗು ಬಾಯಾರಿಕೆಗೆ ಏನಾದರೂ ಕುಡಿಯಲು ಕೊಡಲು ಕೇಳಿ ತಾನೇ ಮಗ್ಗುಲಾಗಿ ಎದ್ದು ಕುಳಿತ ಪವಾಡವನ್ನು, ಸ್ವಾಮಿಗಳ ವೈದ್ಯಕೀಯ ಕೈಗುಣವನ್ನು ಚದುರಂಗರು ಆಗಾಗ ಸ್ಮರಿಸುತ್ತಿದ್ದರು.

ಪ್ರಸಿದ್ಧ ವ್ಯಂಗ್ಯ ಚಿತ್ರಕಾರ, ಶಿಲ್ಪಿ ಆರ್.ಎಸ್.ನಾಯಿಡು ಅವರ ಪರಿಚಯವೂ ಚದುರಂಗರಿಗೆ ಇದ್ದಿತು. ಜಿ ಎಚ್. ರಾಮರಾಯರ ಪ್ರೆಸ್ಸಿನಲ್ಲಿ ಆನಂದ, ಅಡಿಗ, ತ ರಾ.ಸು., ನಿರಂಜನ, ಚದುರಂಗ, ಆರ್. ಎಸ್. ಎನ್. ಮೊದಲಾದ ಸಾಹಿತಿ ಕಲಾವಿದರ ಬಳಗವೇ ಸೇರುತ್ತಿತ್ತು.

ಒಂದು ದಿನ ಆರ್ ಎಸ್.ಎನ್. ತಮಗೆ ಆದ ಒಂದು ಅನುಭವವನ್ನು ಚದುರಂಗರಲ್ಲಿ ಹೇಳಿಕೊಂಡಿದ್ದರಂತೆ. ಲಂಡನ್ನಿನಲ್ಲಿ ಆರ್. ಎಸ್.ಎನ್.ಗೆ ಪ್ರಸಿದ್ಧ ವ್ಯಂಗ್ಯ ಚಿತ್ರಕಾರ ಡೇವಿಡ್ ಲೋ ನೋಡುವ ಆಸೆ ಆಯಿತು. ಅವರ ಆಫೀಸಿಗೆ ಒಮ್ಮೆ ಆರ್.ಎಸ್.ಎನ್. ಹೋದರು. ಇವರಿಗೆ ಡೇವಿಡ್ ಲೋ ಅವರ ಸಂದರ್ಶನ ಬೇಗ ಸಿಗಲಿಲ್ಲ ಬಹಳ ವೇಳೆಯ ನಂತರ ಇವರಿಗೆ ಕರೆ ಬಂತು. ಆಗ ಇವರನು ಕರೆಯಲು ಬಂದ ಸ್ವಾಗತಕಾರಿಣಿಗೆ ಹೇಳಿದರಂತೆ —"ನಾನು ಲೋ ನೋಡುವ ಅಗತ್ಯ ಇಲ್ಲ ಅವರನ್ನು ಆಗಲೇ ನೋಡಿ ಆಯಿತು" ಎಂದರಂತೆ.


"ಅದು ಹೇಗೆ?" ಎಂದು ಕೇಳಿದಳು ಸ್ವಾಗತಕಾರಿಣಿ. ಆರ್.ಎಸ್.ಎನ್. ಕುಳಿತಿದ್ದ ಸಂದರ್ಶಕರ ಹಜಾರದಲ್ಲಿ ತೂಗು ಹಾಕಿದ್ದ ಡೇವಿಡ್ ಲೋ ಅವರ ವ್ಯಂಗ್ಯ

ಚಿತ್ರ ಪಟದತ್ತ ಕೈಮಾಡಿ ತೋರಿಸುತ್ತಾ "ಇಲ್ಲಿ ಯಾರನ್ನು ಕಾಣಲು ಬಂದಿದ್ದೆನೋ ಅವರನ್ನು ಕಂಡಾಯ್ತು. ಮತ್ತೆ ಅವರನ್ನು ನೋಡುವ ಅವಶ್ಯಕತೆ ಇಲ್ಲ" ಎಂದು ಹೇಳಿ ಅಲ್ಲಿಂದ ಹೊರಟು ಬಂದರಂತೆ.

ಚದುರಂಗ ಅವರ ಕಲಾವಿದರ ಬಳಗ ದೊಡ್ಡದು. ಸಂಗೀತ ಕಲಾನಿಧಿ ವಾಸುದೇವಾಚಾರ್, ಜಟ್ಟಿತಾಯಮ್ಮ, ಪಿಟೀಲು ಚೌಡಯ್ಯ, ಡಾ. ಬಿ. ದೇವೇಂದ್ರಪ್ಪ, ವೆಂಕಟಲಕ್ಷ್ಮಮ್ಮ, ರಾಚೋಟಿ, ಗುಬ್ಬಿ ವೀರಣ್ಣ, ಮಾಧವರಾಂ, ಕೊಟ್ಟೂರು ಬಸವಯ್ಯ, ನಾಟಕದ ಸುಬ್ಬಣ್ಣ, ಎಂ.ಬಿ. ಮರಿರಾಯರು, ಜಯಮ್ಮ ಮೊದಲಾದ ಮಹಾನ್ ರಂಗಭೂಮಿ ಕಲಾವಿದರೂ, ಸಂಗೀತಗಾರರೂ, ವಾದನ ಪ್ರವೀಣರೂ ಚದುರಂಗರ ಆತ್ಮೀಯರಾಗಿದ್ದರು.

ಒಮ್ಮೆ ಐದು ವರ್ಷದ ಕೆಳಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶಕರಾಗಿದ್ದ ದಿ॥ ನಾ. ಕಠಾವಿ ಅವರು ಮೈಸೂರಿಗೆ ಬಂದಿದ್ದರು. ನನ್ನ ಜೊತೆ ಚದುರಂಗರನ್ನು ಭೇಟಿ ಮಾಡಿ ಹೊರ ಬರುವಾಗ "ಈ ವ್ಯಕ್ತಿ ಮುಖ್ಯಮಂತ್ರಿ ದೇವರಾಜ ಅರಸರ ಸೋದರರು. ಅವರ ಸ್ಥಾನದಲ್ಲಿ ಬೇರೆಯವರು ಇದ್ದಿದ್ದರೆ ಅದೇನೆಲ್ಲ ಮಾಡಿಕೊಳ್ಳುತ್ತಿದ್ದರೋ ?" ಎಂದರು. "ಆದರೆ ಚದುರಂಗರು ಮಾತ್ರ ಯಾವ ಆಸೆ ಆಕಾಂಕ್ಷೆಗೆ ಬಲಿ ಬೀಳದೆ ಉತ್ತಮ ಬಾಳನ್ನು ಬಾಳುತ್ತಿದ್ದಾರೆ. ಇದೇ ಸ್ಥಿರವಾದುದು. ನ್ಯಾಯವಾದುದು" ಎಂದು ಹೇಳಿದ ಮಾತುಗಳು ಮತ್ತೆ ಮತ್ತೆ ನೆನಪಿಗೆ ಬರುತ್ತಿವೆ.

ವಿಸ್ತಾರದಲಿ ಬಾಳು ವೈಶಾಲ್ಯದಿಂ ಬಾಳು
ಕತ್ತಲೆಯ ಮೊಡಕು ಮೂಲೆಗಳ ಸೇರದಿರು
ಭಾಸ್ಕರನನುಗ್ರಹವೆ ನೂತ್ನ ಜೀವನ ಸತ್ತ್ವ
ಮೃತ್ಯು ನಿನಗಲ್ಪತೆಯೊ ಮಂಕುತಿಮ್ಮ



ನಾವು ಬಡವರಾಗಿರಬಹುದು. ಆದರೆ ನಮಗಿಂತಲೂ ಬಡವರಾದವರು ಜಗತ್ತಿನಲ್ಲಿ ಇದ್ದಾರೆಂಬುದನ್ನು ತಿಳಿಯಬೇಕು. ಈ ತಿಳುವಳಿಕೆಯಿಂದ ನಮ್ಮ ಸುಖದ ಕಲ್ಪನೆಯನ್ನು ನಾವು ಹೆಚ್ಚಿಸಿಕೊಳ್ಳಬಹುದು.

—ವಿನೋಬಾ

ಮೀನಳ್-ಸರೋವರ

ಡಾ|| ಸ. ಜ. ನಾಗಲೋಟಿಮಠ

೨೫ 'ಶಾಂತಾ' ಬಸವ ಕಾಲನಿ

ಬೆಳಗಾವಿ-೫೯೦ ೦೧೦

ಎತ್ತಣ ಮೈಸೂರು ಎತ್ತಣ ಗುಜರಾಥ ಎತ್ತಣಿಂದೆತ್ತ ಸಂಬಂಧವಯ್ಯಾ ? ಸ್ವಾರಸ್ಯ ವಿರುವುದು ಈ ಸಂಬಂಧದಲ್ಲಿ, ಇದಕ್ಕಿಂತ ಹೆಚ್ಚಾಗಿ ಈ ಸ್ವಾರಸ್ಯವನ್ನು ಗುರುತಿಸಿ ಓದುಗರಿಗೆ ಆ ಪುಣ್ಯ ಸಲಿಲ ದರ್ಶನ ಮಾಡಿಸುವುದರಲ್ಲಿ. ಮೀನಳ್ ಸರೋವರದ ವರ್ತಮಾನ ದುಃಸ್ಥಿತಿ ನಮ್ಮ ಸಂಸ್ಕೃತಿಗೆ ಹತ್ತಿರುವ ಜಂಗುವಿನ ಲಕ್ಷಣವಾಗಿರಬಹುದೇ?

ಗುಜರಾಥ ರಾಜ್ಯದ ರಾಜಧಾನಿ ಅಹಮದಾಬಾದ. ಇಲ್ಲಿಂದ ೬೦ ಕಿ. ಮಿ. ದೂರದಲ್ಲಿ ಒಂದು ತಾಲ್ಲೂಕು ಕೇಂದ್ರವಿದೆ: ವಿರಮಗಾಮು. ವಿರಮಸಿಂಗ ಎಂಬ ಸುಪ್ರಸಿದ್ಧ ರಾಜನ ನೆನಪಿಗಾಗಿ ಊರಿಗೆ ಈ ಹೆಸರು. ಇಲ್ಲಿ ದೊಡ್ಡದಾದ ಒಂದು ಸುಂದರ ಸರೋವರ ಇದೆ. ಇದನ್ನು ಇಲ್ಲಿಯ ಜನ "ಮೀನಳ್‌ದರ್" ಎಂದು ಕರೆಯುತ್ತಾರೆ. ಸರಿಯಾದ ಹೆಸರೆಂದರೆ ಮೀನಳ್‌ಸರೋವರ. ಅಷ್ಟು ಸುಂದರವಾಗಿ ಕಟ್ಟಿದ ಸರೋವರ ವನ್ನು ನಾನು ನೋಡಿಯೇ ಇದ್ದಿಲ್ಲ. ನನ್ನ ಮನಸ್ಸಿಗೆ ಬಹಳ ಸಂತೋಷವೆನಿಸಿತು. ಇದನ್ನು ಕಟ್ಟಿಸಿದ ಪುಣ್ಯವಂತರು ಯಾರು ಎಂದು ವಿಚಾರಿಸಿದೆ. ಊರಿನ ಹಿರಿಯ ರೊಬ್ಬರು ಬಹು ಸ್ವಾರಸ್ಯಕರ ಕಥೆ ಹೇಳಿದರು. ಅದರ ವೃತ್ತಾಂತವೇ ಈ ಬರಹ.

ಸೌರಾಷ್ಟ್ರ ಎಂಬುದು ಭಾರತದ ಒಂದು ಪ್ರದೇಶ. ಹೆಸರೇ ಹೇಳುವಂತೆ ಈ ಪ್ರದೇಶ ದಲ್ಲಿ ಒಂದು ನೂರು ಸಂಸ್ಥಾನಗಳಿದ್ದುವು. ಒಂದೊಂದು ಸಂಸ್ಥಾನಕ್ಕೆ ಒಬ್ಬೊಬ್ಬ ರಾಜ. ಇಂಥ ರಾಜರಲ್ಲಿ ಕರ್ಣದೇವ ಎಂಬವನು ರಾಜ್ಯವಾಳುತ್ತಿದ್ದ ಅವನದು ಸೋಳಂಕಿ ರಾಜವಂಶವಂತೆ. ಕರ್ಣದೇವನಿಗೆ ಮದುವೆ ನಡೆಯಬೇಕಿತ್ತು. ರಾಜಕನ್ನೆಯ ರನ್ನು ಹುಡುಕಾಡತೊಡಗಿದರು. ಸುದ್ದಿ ಇಡೀ ಭಾರತದ ತುಂಬ ಹರಡಿತು. ಅವನದು ದೊಡ್ಡ ಶ್ರೀಮಂತ ರಾಜ್ಯ. ಹಲವಾರು ಕಡೆಗಳಿಂದ ಅವನಿಗೆ ರಾಜಕನ್ನೆಯರ ಚಿತ್ರ ಗಳು ಬಂದುವು. ಅವುಗಳಲ್ಲಿ ಅವನ ಮನಸ್ಸನ್ನು ಗೆದ್ದ ಚಿತ್ರವೆಂದರೆ ಮೀನಳ್ ದೇವಿಯದು. ಈಕೆ ಮೈಸೂರಿನ ರಾಜ ಕನ್ಯೆ. ಕರ್ಣದೇವ ತನ್ನ ಒಪ್ಪಿಗೆ ಕೊಟ್ಟ. ಮೈಸೂರಿನ ರಾಜಮನೆತನಕ್ಕೂ ಇದು ಒಪ್ಪಿಗೆ ಆಯಿತು. ವೈಭವದಿಂದ ಮದುವೆಯೂ ನಡೆದುಹೋಯಿತು. ಮೀನಳದೇವಿ ನಡೆಯಲು ಪತಿಯ ಮನೆಗೆ ಬಂದಳು. ರಾಜನು ಪತ್ನಿಯ ಸೌಂದರ್ಯ ವನ್ನು ಸವಿಯಲು ಬಹಳ ಆತುರದಲ್ಲಿ

ಇದ್ದನು. ಮೊದಲ ರಾತ್ರಿ ಮಿನುಗು ದೀಪದಲ್ಲಿ ಮಿಲನವಾಯಿತು. ಆದರೆ ಅವನಿಗೆ ಆಕೆಯ ಸೌಂದರ್ಯ ನೋಡಲು ಸಾಧ್ಯವಾಗಲಿಲ್ಲ. ಬೆಳಗಾದೊಡನೆ ನೋಡಿದ. ಅವನ ಎದೆ ಬಿರಿದು ಹೋಯಿತು. ಆಕೆಯು ಸಾದು ಕಪ್ಪು ವರ್ಣದವಳು. ಮುಖದ ಮೇಲೆಲ್ಲ ಮೈಲಿ ಬೇನೆಯ ಕಲೆಗಳು. ಮೋಸಹೋದೆನೆಂದು ಪಂತಪಿಸಿದ. ಆದರೆ ತಾನೇ ಆರಿಸಿದ ಕನ್ಯೆ. ಯಾರೂ ಅವನಿಗೆ ಜೋರು ಮಾಡಿಲ್ಲ. ಆಕೆಯ ಚಿತ್ರವನ್ನು ತಗೆದು ಮೀನಲ್ ದೇವಿಗೆ ತೋರಿಸಿ ಈ ಚಿತ್ರದಲ್ಲಿ ಇದ್ದಂತೆ ನೀನು ಇಲ್ಲ ಎಂದನು. ಅವಳು ಒಪ್ಪಿದಳು. ಆ ಚಿತ್ರವನ್ನು ತಗೆದ ಮೇಲೆ ಆಕೆ ಮೈಲಿ ಬೇನೆಯಿಂದ ಬಳಲಿದಳಂತೆ ಮುಖದಮೇಲೆ ಈ ಕಲೆಗಳು ಮೂಡಿದ ಮೇಲೆ ಹೊಸ ಚಿತ್ರ ತಗೆಸಿಲ್ಲ ಎಂದಳು. ರಾಜನಿಗೆ ಆಘಾತ. ಸುಂದರ ರಾಣಿಯೊಡನೆ ಸುಖ ಪಡಬೇಕು ಎಂದು ಆಶೆಪಟ್ಟವನಿಗೆ ಇಂಥ ರಾಣಿ ಸಿಕ್ಕಿದ್ದಳು. ಅವನು ಕ್ರಮೇಣ ಆಕೆಯಿಂದ ದೂರವಾಗತೊಡಗಿದ. ಅಷ್ಟ ರಲ್ಲಿ ಅವಳು ಗರ್ಭಧರಿಸಿದ್ದಳು. ಪ್ರಸವವೂ ನಡೆಯಿತು. ಸುಂದರವಾದ ಗಂಡು ಮಗು ಹುಟ್ಟಿತು. ಅವನಿಗೆ 'ಸಿದ್ಧರಾಜ' ಎಂದು ಹೆಸರಿಟ್ಟರು. ಕರ್ಣದೇವ ಮೀನಲ್ ದೇವಿಗೆ ಒಂದು ಪ್ರದೇಶ ಕೊಟ್ಟು ತಾನು ಬೇರೆ ಯಾಗಿ ಹೊಸ ರಾಣಿಯರೊಂದಿಗೆ ಕಾಲ ಕಳೆಯತೊಡಗಿದ.

ಮೀನಳ್‌ದೇವಿಯ ಸೌಂದರ್ಯವನ್ನು ಮೈಲಿಬೇನೆ ಕೆಡಿಸಿತ್ತು. ಆದರೆ ಆಕೆಯ ಬುದ್ಧಿಶಕ್ತಿ ಬಹಳ ಹರಿತವಾಗಿತ್ತು. ಆಕೆ ಒಳ್ಳೆಯ ರಾಜ್ಯಭಾರ ಹೇಗೆ ಮಾಡುವು ದೆಂಬುದನ್ನು ಚೆನ್ನಾಗಿ ಅರಿತಿದ್ದಳು. ಮಗನ ಆರೈಕೆ, ಶಿಕ್ಷಣದಲ್ಲಿ ಮನಸ್ಸು ಕೇಂದ್ರೀಕರಿ ಸಿದಳು. ಕರ್ಣದೇವನ ಬಗ್ಗೆ ಅಷ್ಟೇನೂ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಸಿದ್ಧರಾಜ ಬಲಶಾಲಿಯಾಗಿ ಬೆಳೆದ. ಬುದ್ಧಿವಂತನಾದ. ತಾಯಿಯಿಂದ ಚತುರತೆಯನ್ನು ಕಲಿತ. ವೀರರಲ್ಲಿ ಅತಿವೀರನೆನಿಸಿದ. ಯೌವನಕ್ಕೆ ಬಂದಮೇಲೆ ಪಟ್ಟವನ್ನೇರಿದ. ತಾಯಿಯ ಮಾರ್ಗದರ್ಶನದಲ್ಲಿ ಸುತ್ತಲಿನ ರಾಜರ ಮೇಲೆ ಏರಿಹೋಗಿ ಅವರನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತಾರಗೊಳಿಸಿದ. ಯುದ್ಧಭೂಮಿಯಲ್ಲಿ ಅವನನ್ನು ಗೆಲ್ಲುವ ವ್ಯಕ್ತಿಗಳೇ ಸಿಗಲಿಲ್ಲ. ಆಗ ಗುಜರಾಥದ ಜನ ಅವನನ್ನು "ಸಿದ್ಧರಾಜ ಜೈಸಿ" ಎಂದೇ ಕರೆಯಹತ್ತಿದರು. ಜೈಸಿ ಅಂದರೆ 'ಗೆಲ್ಲುವ ಸಿಂಹ' ಎಂದು ಅರ್ಥ. ಪ್ರತಿ ಯುದ್ಧಕ್ಕೆ ಹೋಗುವಾಗ ತಾಯಿ 'ಮೀನಳ್ ದೇವಿ' ಯನ್ನು ಕರೆದುಕೊಂಡು ಹೋಗುತ್ತಿದ್ದ ನಂತೆ. ಯುದ್ಧರಂಗದಲ್ಲಿ ತಾಯಿಯ ಸಲಹೆ ಯನ್ನು ಪಡೆಯುತ್ತಿದ್ದ. ಒಂದು ಸಲ ಅವನ ಸೈನ್ಯ ಪಡೆ ವಿರಮಗಾಮ ಊರಿನ ಸಮೀಪ ಬೀಡು ಬಿಟ್ಟಿತು. ಆಗ ರಾಜ ಮಾತೆ ಮೀನಳ ದೇವಿ ಊರಿನ ಸಮೀಪವೇ ತನ್ನ ಬಿಡಾರ ಬಿಟ್ಟಿದ್ದಳು. ಊರಿನ ಅಂಗನೆ ಯರನ್ನು ಕರೆಸಿ ಅವರ ಕುಶಲವನ್ನು ವಿಚಾರಿಸಿದಳು. ಆಗ ಆ ಊರಿಗೆ ನೀರಿನ ಬವಣೆ ಇತ್ತು. ಕುಡಿಯಲು ನೀರು ತರುವುದು ದೊಡ್ಡ ಸಮಸ್ಯೆ ಆಗಿತ್ತು. ಅದನ್ನು ಕೇಳಿದ ರಾಜಮಾತೆ ಮಗ ಸಿದ್ಧರಾಜ ಜೈಸಿಯನ್ನು ಕರೆಸಿ ಆ ಊರಿ ನವರಿಗೆ ಒಂದು ಕೆರೆ ಕಟ್ಟಿಸಲು ಸೂಚಿಸಿ ದಳು. ತಾಯಿಯ ಸೂಚನೆಯನ್ನು ಒಪ್ಪಿ

ತಕ್ಷಣ ಸರೋವರ ಕಟ್ಟಿಸಲು ಕಾರ್ಯ ಪ್ರವರ್ತನಾದ. ಅಂದು ಕಟ್ಟಿದ ಸರೋವರವನ್ನು ತನ್ನ ತಾಯಿಯ ಹೆಸರಿನಿಂದಲೇ ಕರೆಯತೊಡಗಿದ. ಅದೇ 'ಮೀನಳ್ ಸರ' ಅಥವಾ 'ಮೀನಳ್ ಸರೋವರ'. ಆ ಭಾಗದ ಜನರು ಅದನ್ನು ಮೈಸೂರು ರಾಣಿಯ ಸರೋವರ ಎಂದೇ ಹೇಳುತ್ತಾರೆ. ಕನ್ನಡಿಗರ ಬಗ್ಗೆ ಆದರ ತೋರಿಸುತ್ತಾರೆ. ಮೀನಳ್ ದೇವಿಯ ಚಾಣಾಕ್ಷತೆಯನ್ನು ಕೊಂಡಾಡುತ್ತಾರೆ.


ಮೀನಳ್ ಸರೋವರ ೧೫೦೦×೧೫೦೦ ಅಡಿ ವಿಸ್ತಾರವಾಗಿದ್ದು ಚೌರಸಾಕಾರ ಪಡೆದಿದೆ. ಸರೋವರವನ್ನು ಕಟಿದ ಕಲ್ಲುಗಳಿಂದ ಕಟ್ಟಿರುವರು. ಸರೋವರದ ಸುತ್ತಲೂ ೨೦ ಅಡಿಯ ವಿಶಾಲವಾದ ಕಲ್ಲು ಪ್ರಾಂಗಣವಿದೆ. ಪ್ರಾಂಗಣದಲ್ಲಿ ಇಳಿಯಲು ನಾಲ್ಕೂ ದಿಕ್ಕಿಗೂ ಮಧ್ಯಭಾಗದಲ್ಲಿ ಪಾವಟಿಗೆಗಳಿವೆ. ಸುತ್ತಲಿನ ಭೂಮಿಗೂ ಪ್ರಾಂಗಣಕ್ಕೂ ನಡುವೆ ಸುಮಾರು ೧೦ಅಡಿ ಎತ್ತರದ ಗೋಡೆ ಇದೆ. ಪ್ರಾಂಗಣದಲ್ಲಿ ಸುಂದರವಾದ ಚಿಕ್ಕಚಿಕ್ಕ ಲಿಂಗದೇವಾಲಯಗಳಿವೆ. ಒದೊಂದು ಬದಿಗೆ ೯೦ ಗುಡಿಗಳಂತೆ ಒಟ್ಟು ೩೬೦ ಚಿಕ್ಕ ಗುಡಿಗಳಿವೆ ಇವು ೩×೩ ಅಡಿ ಚೌಕಾಕಾರದ ತಳ ವಿನ್ಯಾಸ ಹೊಂದಿವೆ. ಪ್ರತಿ ಗುಡಿಯಲ್ಲಿ ಒಂದೊಂದು ಈಶ್ವರಲಿಂಗವನ್ನು ಸ್ಥಾಪಿಸಿದ್ದರಂತೆ. ಲಿಂಗದ ಮೇಲೆ ಧಾರಾ ಪಾತ್ರೆ ಕಟ್ಟಲು ವ್ಯವಸ್ಥೆ ಮಾಡಿದ್ದಾರೆ. ಪ್ರತಿ ಗುಡಿಯ ಬಲಬದಿಗೆ ತೀರ್ಥಗುಂಡಿ ಇದೆ. ಗುಡಿಯ ಹೊರ ಆವರಣದ ಗೋಡೆಗಳ ಮೇಲೆ ಸುಂದರ ಕೆತ್ತನೆಯ ಕೆಲಸವಿದೆ. ಗೋಡೆಯ ಮಧ್ಯದಲ್ಲಿ ಶಿವತಾಂಡವದ ಮೂರ್ತಿ. ಅದರ ಬದಿಗೆ ವಾದ್ಯಗಳನ್ನು ನುಡಿಸುವ ಶಿಲಾಬಾಲಿಕೆಯರು ಗುಡಿಯ ಮೂಲೆ-ಮೂಲೆಗಳನ್ನು ಶೃಂಗರಿಸಿದ್ದಾರೆ. ಗುಡಿಗಳಿಗೆ ಒಂದೇ ತೆರನಾದ ಗೋಪುರವಿದೆ. ಗೋಪುರಕ್ಕೆ ಕಲ್ಲಿನ ಕಳಸವಿದೆ. ಗೋಪುರವೂ ಅಂದವಾದ ಕೆತ್ತನೆಯ ಕೆಲಸ ಹೊಂದಿದೆ. ಗೋಪುರದ ಮಧ್ಯಭಾಗದಲ್ಲಿ ಒಂದು ಗುಡಿಯಿಂದ ಇನ್ನೊಂದು ಗುಡಿಗೆ ಹಗ್ಗ ಪೋಣಿಸಲು ಬರುವಂತೆ ರಂಧ್ರವಿದೆ. ಮೊದಲು ಒಂದು ತಂತಿಯ ಹಗ್ಗ ಎಲ್ಲ ಗುಡಿಗಳನ್ನು ಸೇರಿಸಿ ಮಾಲೆ ಮಾಡಿದಂತೆ ಕಟ್ಟಲು ಬರುತ್ತಿತ್ತಂತೆ. ಈಗ ನಮ್ಮ ಜನರು ಈ ತಂತಿಯ ಹಗ್ಗವನ್ನು ಕದ್ದಿದ್ದಾರೆ. ತಂತಿಯ ಹಗ್ಗಕ್ಕೆ ದೇವಾಲಯಕ್ಕೊಂದರಂತೆ ಗಂಟೆಗಳನ್ನು ಕಟ್ಟಿದ್ದರಂತೆ ಈಗ ಹಗ್ಗವೇ ಇಲ್ಲ ಎಂದಾಗ ಗಂಟೆಗಳು ಹೇಗೆ ಉಳಿದಾವು ! ದಿನಾಲು ಪೂಜೆಯ ವೇಳೆಗೆ ಯಾರಾದರೂ ಈ ಹಗ್ಗವನ್ನು ಎಳೆಯುತ್ತಿಂತರೆ ಸಾಕು ಎಲ್ಲ ೩೬೦ ಗಂಟೆಗಳು ಒಮ್ಮೆಲೆ ಬಾರಿಸುತ್ತಿದ್ದವಂತೆ. ಆ ಸರೋವರವನ್ನು ಯೋಜಿಸಿ ನಿರ್ಮಿಸಿದ ಶಿಲ್ಪಿಯ ಚಾಣಾಕ್ಯತೆಯನ್ನು ಮೆಚ್ಚಲೇ ಬೇಕು. ಹಿಂದೂ ಪಂಚಾಗದ ಪ್ರಕಾರ ವರ್ಷದಲ್ಲಿ ೩೬೦ ದಿನಗಳು. ಒಂದೊಂದು ಗುಡಿಯನ್ನು ಒಂದೊಂದುದಿನ ಪೂಜಿಸುತ್ತ ಹೋದರು ಎಲ್ಲ ಗುಡಿಗಳನ್ನು ಪೂಜಿಸಲು ಒಂದು ವರ್ಷವೇ ಬೇಕು.

ಈ ಚಿಕ್ಕ ಗುಡಿಗಳಲ್ಲದೆ ಪಶ್ಚಿಮ ದಿಕ್ಕಿನಲ್ಲಿ ದೊಡ್ಡ ಮುಖ್ಯ ದೇವಾಲಯವಿದೆ. ಇದರಲ್ಲೂ ಈಶ್ವರ ಲಿಂಗವಿದೆ. ಮುಖ್ಯ ದೇವಾಲಯದಿಂದ ಸ್ವಲ್ಪ ದೂರದಲ್ಲಿ ಸ್ನಾನದ

ಘಟ್ಟಗಳಿವೆ. ಸ್ತ್ರೀಯರ ಸ್ನಾನಕ್ಕೆ ಬೇರೆ ವ್ಯವಸ್ಥೆ ಇದೆ.

ಸರೋವರದಲ್ಲಿ ನೀರು ಎಂದೂ ಬತ್ತುವುದಿಲ್ಲ ಎಂದು ಆ ಊರಿನ ಜನ ಹೇಳುತ್ತಾರೆ. ನೀರಿನ ಆಳ ಬಹಳವಿದೆ ಎಂದು ಬಣ್ಣಿಸುವರು.

ಇಂದು ನೀರಿನಲ್ಲಿ ಹಾವಸೆ ಪಾಚಿ ತುಂಬಾ ಬೆಳೆದಿದೆ. ನೂರಾರು ವರ್ಷಗಳವರೆಗೆ ಬಿಸಿಲು ಮಳೆ-ಚಳಿಗಳನ್ನು ಎದುರಿಸುತ್ತ ನಿಂತಿರುವ ಕಲ್ಲುಗಳು ಸ್ವಲ್ಪ ಪ್ರಮಾಣದಲ್ಲಿ ಸವಕಲಾಗಿವೆ. ಕೆತ್ತನೆಯ ಕೆಲಸಗಳ ಸೌಂದರ್ಯ ಮಸುಕಾಗತೊಡಗಿದೆ. ತಂತಿಯ ಹಗ್ಗ, ಗಂಟೆ, ಧಾರಾಪಾತ್ರೆಗಳೆಲ್ಲ ಮಾಯವಾಗಿವೆ. ಗುಡಿಗಳಲ್ಲಿಯ ಈಶ್ವರ ಲಿಂಗಗಳು ಎಲ್ಲೋ ಎದ್ದು ಹೋಗಿವೆ. ಜನರಿಗಾಗಿ ಕಟ್ಟಿಸಿದ ಈ ಸರೋವರ ಇಂದಿಗೂ ನೀರು ತುಂಬಿಕೊಂಡು ಜನರಿಗೆ ಸಹಕಾರಿಯಾಗಿದೆ. ಮೈಸೂರು ರಾಜ ಮನೆತನದ ಮಗಳು 'ಮೀನಳ್‌ದೇವಿಯ' ಚಾಣಾಕ್ಷತೆಯನ್ನು ಹೇಳುವ ಸಾಕ್ಷಿಯಾಗಿ ನಿಂತಿದೆ.



ಇತರರ ಕಷ್ಟವನ್ನು ನೋಡಿ ನಗುವುದಕ್ಕೆ ಕಣ್ಣು ನನಗಿರದಿರಲಿ. ಇತರರನ್ನು ನಿಂದಿಸುವ ನಾಲಿಗೆಯೂ ನನಗಿರದಿರಲಿ. ಇತರರ ಬಗ್ಗೆ ಕೆಟ್ಟದ್ದನ್ನು ಕೇಳುವ ಕಿವಿ ನನಗಿರದಿರಲಿ. ಇತರರದನ್ನು ಅಪಹರಿಸುವ ಕೈಗಳು ನನಗಿರದಿರಲಿ.

—ಏಸುಸ್ವಾಮಿ

ನಾನು ವಿದ್ಯಾವಂತನೇ ?

ಟಿ. ಎಸ್. ಸಂಜೀವರಾ
೧, ಕಾವ್ರೆ ಬ್ಲಾಕ್ಸ
ಘಂಟಾಲಿ ದೇವಿಪಾತ್
ಥಾನೆ–೪೦೦ ೬೦೩ ಮಹಾರಾಷ್ಟ್ರ

ಪ್ರಪಂಚಕ್ಕೇ ಒಂದು ವಿಶ್ವವಿದ್ಯಾನಿಲಯದಂತಿದ್ದ ಜಾರ್ಜ್ ಬರ್ನಾಡ್ ಷಾ ತನ್ನ ೯೩ನೇ ವಯಸ್ಸಿನಲ್ಲಿ ತನಗೆ ತಾನೇ ಕೇಳಿಕೊಂಡ ಪ್ರಶ್ನೆಗೆ ಆತ ನಿಸ್ಸಂಕೋಚವಾಗಿ ಬರೆದ ಉತ್ತರ ಇದು.

ನನ್ನ ಹೆಸರಿನ ಮುಂದೆ ಯಾವ ಡಿಗ್ರಿ ಪಗ್ರಿ ಇಲ್ಲ. ಆದರೂ ವಿಶ್ವವಿದ್ಯಾನಿಲಯದ ಅನೇಕ ಪಂಡಿತರುಗಳಿಗಿಂತ ನಾನು ಹೆಚ್ಚು ವಿದ್ಯಾವಂತ ಎಂಬುದನ್ನು ನಾನು ಒತ್ತಿ ಹೇಳುತ್ತೇನೆ. ನಾನು ಹುಟ್ಟಿದ್ದು ಬೆಳೆದಿದ್ದು ಸಂಗೀತ ತಿಳಿದವರ ವಂಶದಲ್ಲಿ. ನಾನು ಕಲಿತ ಸಂಗೀತ ಹೊಸ ಪೀಳಿಗೆಯದು— ಹ್ಯಾಂಡೆಲ್, ಗ್ಲುಕ್, ಮೊಜಾರ್ಟ್ ಅವರಿಂದ ಪ್ರಾರಂಭವಾದದ್ದು. ಅದು ನವ್ಯ ಸಂಸ್ಕೃತಿಯ ಕಲೆ. ಅದಕ್ಕೂ ಸತ್ತ ಭಾಷೆಗಳಾದ ಗ್ರೀಕ್, ಲ್ಯಾಟಿನ್‌ಗಳಿಗೂ ಏನೂ ಸಂಬಂಧವಿಲ್ಲ.

ನವೀನ ಪದ್ಧತಿಯವರಾದ ಜಿಲ್ಬರ್ಟ್ ಮುರ್ರೆಯವರೇನೋ ಸತ್ತ ಭಾಷೆಗಳಿಂದ ಅನುವಾದಮಾಡಿ ಸಂಗೀತ ಸೃಷ್ಟಿಮಾಡಿದ್ದಾರೆ, ನಿಜ. ಆದರೆ ಅವರ ಅನುವಾದ ಎಂದರೆ ಅದೂ ಒಂದು ನವಸೃಷ್ಟಿಯೇ. ಷೇಕ್ಸಪಿಯರನ ಅನುವಾದಗಳ ಹಾಗೆ. ಕಥೆಗಳನ್ನೇನು ಅವನು ಹೊಸದಾಗಿ ಹೊ
ಯಲಿಲ್ಲ. ಸತ್ತ ಕಥೆಗಳಿಗೆ ಹೊಸಜೀ
ತುಂಬಿ ನೂತನ ಸೃಷ್ಟಿಯನ್ನೇ ಮಾಡಿದ.

ಕೌಟುಂಬಿಕ ಪ್ರೇಮದ ಸೌಭಾಗ್ಯ ನನ
ಲಭಿಸಲಿಲ್ಲ. ಅದರೇನು? ಬೈಬಲಿನ ಪಾ
ಚೆನ್ನಾಗಿ ಕಲಿಯುವ ಮುನ್ನವೇ ಅದ್ಭು
ಗಾನಗಳನ್ನು ನಾವೆಲ್ಲ ಹಾಡಬಲ್ಲವರಾ
ದ್ದೆವು. ಎಳೆಮನಸ್ಸನ್ನು ರೂಪಿಸುವುದಕ್
ಅದಕ್ಕಿಂತ ಹೆಚ್ಚಾಗಿ ಏನುಬೇಕು ?

ಈ ತರಹದ ವಿದ್ಯಾಭ್ಯಾಸ ನನಗೆ ಇಂದಿ
ವರೆಗೆ ನಡೆದುಬಂದಿದೆ.

ಶಾಲೆಗಳಲ್ಲಿ ನಡೆಸುವ ಪರೀಕ್ಷೆಗಳು
ಯಾವುದೇ ತರಹದ ಪರೀಕ್ಷೆಗಳೇ ಇಲ್ಲದಿರ
ವುದಕ್ಕಿಂತ ವಾಸಿ ಎಂದು ಒಪ್ಪಿಕೊಳ್ಳು
ತ್ತೇನೆ. ಕಾಲೇಜುಗಳಲ್ಲಿ ಅಭ್ಯಾಸಮಾಡಿದ
ವರು ಹಿಂದೆ ಏನೇನು ನಡೆಯಿತು ಎಂಬು
ದನ್ನಾದರೂ ತಿಳಿದಿರುತ್ತಾರೆ ಹಾಗೂ ಅದೇ
ತಿಳುವಳಿಕೆಯನ್ನು ಮತ್ತೆ ಪಡೆದವರಿಗ
ಸರ್ಟಿಫಿಕೇಟ್‌ಕೊಡಲು ಯೋಗ್ಯರಾಗು

ಮೂಲ : 'ಸಿಕ್ಸ್‌ಟೀನ್ ಸ್ಕೆಚಸ್' ಕೃತಿ.

ತ್ತಾರೆ, ಅಷ್ಟೆ! ಆದರೆ ಸ್ವಂತ ಜೀವದಿಂದ ಸ್ಪಂದಿಸುವ ಅನುಭವವಿಲ್ಲದೆ ಹೋದರೆ ಯಾವ ಮನುಷ್ಯನೂ ವಿದ್ಯಾವಂತನಾಗಲಾರ. ಡಿಗ್ರಿಗಳ ಮಾಲೆಗಳನ್ನೇ ಹಾಕಿಕೊಂಡು, ಸತ್ತ ಭಾಷೆಗಳ ಹರುಕು ಮುರುಕು ಪರಿಚಯದ ಹೊರೆಯನ್ನೇ ಹೊತ್ತು, ಗಜ್ಜುಗದಷ್ಟು ಬೀಜಗಣಿತ ನುಂಗಿ, ಮಹಾಪಂಡಿತ ಎನಿಸಿಕೊಂಡ ವಿಶ್ವವಿದ್ಯಾನಿಲಯಗಳ ಸ್ನಾತಕರು ಜೀವ ಸಾನುಭವವಿಲ್ಲದೇ ಹೋದರೆ ಕೇವಲ ಮಂಕುಮಡೆಯರಾಗೇ ಉಳಿಯುತ್ತಾರೆ. ಪರೀಕ್ಷೆಗಳಲ್ಲಿನ ನಂಬರುಗಳಿಂದ ವಿದ್ಯೆಗೂ ಅನುಭವಕ್ಕೂ ಇರುವ ಅಂತರವನ್ನು ಅಳೆಯಲು ಸಾಧ್ಯವಿಲ್ಲ. ಈ ಅಂತರ ಮಹತ್ವದ್ದೇ, ನಿಸ್ಸಂಕೋಚವಾಗಿ—ಅಹಂಕಾರದಿಂದಲೇ ಅನ್ನಿ—ನಾನೂ ಪ್ರಪಂಚದಲ್ಲೆಲ್ಲಾ ಅತಿ ಹೆಚ್ಚಿನ ವಿದ್ಯಾವಂತರಲ್ಲಿ ಒಬ್ಬ ಎಂದು ಹೇಳಿಕೊಳ್ಳುತ್ತೇನೆ. ಅದೇ ಕಾರಣದಿಂದ, ಪಂಡಿತ ಶೇಖರರಲ್ಲಿ ಶೇಕಾಡ ೯೫ ಜನರನ್ನು ನಿಸ್ಸಂಕೋಚವಾಗಿ ದಡ್ಡದಾಮೋದರರು ಎನ್ನುತ್ತೇನೆ. ಅವರಲ್ಲಿ ಕೆಲವರಿಗೆ ಮಾತ್ರ ಕೆಲವಿಷಯಗಳಲ್ಲಿರುವ ಪರಿಣತಿಗೆ ನಾನು ಮರ್ಯಾದೆ ಕೊಡುತ್ತೇನೆ, ಅಷ್ಟೆ.

ಕಲಾನುಭವದ ಅನುಕೂಲವಿದ್ದದ್ದರಿಂದಲೇ ನಾನು ಸಾಹಿತ್ಯದ ಬೆನ್ನು ಹತ್ತಿದರೂ ಉಪವಾಸ ಬೀಳಬೇಕಾಗಲಿಲ್ಲ. ಗೆಳೆಯ ವಿಲಿಯಂ ಆರ್ಚರ್‌ನಿಗೆ ಚಿತ್ರ ವಿಮರ್ಶೆಯ ಕೆಲಸ ಸಿಕ್ಕಿತ್ತು. ಆದರೆ ಅವನಿಗೆ ಅದನ್ನು ನಿಭಾಯಿಸುವ ಯೋಗ್ಯತೆ ಇರಲಿಲ್ಲ. ಸರಿ, ನನ್ನ ಕಡೆಗೆ ನೂಕಿದ. ನಾನು ಆ ಕೆಲಸಕ್ಕೆ ಕೈಹಚ್ಚಿ ಸುರ್‌ಬಾಣದಂತೆ ಗಗನಕ್ಕೇರಿದೆ. ಆಗ ನಾನು ವಾರ ವಾರ ಬರೆಯುತ್ತಿದ್ದ ಕಲಾ ವಿಮರ್ಶಾತ್ಮಕ ತುಕಡಿಗಳು ಈಗಲೂ ಅರವತ್ತು ವರುಷಗಳ ಮೇಲೆ ಓದುವಂಥವಿವೆ. ನನ್ನ ಕಾದಂಬರಿಗಳೇನೋ ತಿರಸ್ಕರಿಸಲ್ಪಟ್ಟವು. ಅವು ಉತ್ತಮವಾದ ಹಾಗೆಲ್ಲಾ ಪ್ರಕಾಶಕರ ನೌಕರ-ಓದುಗರಿಗೆ ಅಜೀರ್ಣಕಾರಿಯಾದವು. ಆದರೆ, ಅನಂತರ ಹತ್ತು ವರ್ಷ ಲಂಡನ್ ನಗರದಲ್ಲಿ ನಡೆದ ಎಲ್ಲಾ ಕಲಾಪ್ರದರ್ಶನಗಳಿಗೂ, ಸಂಗೀತ ಕಛೇರಿಗಳಿಗೂ ನನಗೆ ಪ್ರವೇಶವಿರುತ್ತಿತ್ತು. ಕಲಾ ವಿಮರ್ಶಕನಾಗಿ ಅಡ್ಡಿ ಆತಂಕವಿಲ್ಲದೆ ನಾನು ತುತ್ತತುದಿಗೆ ಏರಿದೆ. ಕಲಾನುಭವವಿಲ್ಲದ ಮನೆಗಳಲ್ಲಿ ಬೆಳೆದು ಕಾಲೇಜುಗಳಲ್ಲಿ ಕಲೆಯನ್ನು ಅಭ್ಯಾಸಮಾಡಿದ ನನ್ನ ಜೊತೆಯ ವಿಮರ್ಶಕರೊಬ್ಬರೂ ನನ್ನ ಎತ್ತರಕ್ಕೆ ಹಾರಲಾರದಾದರು.

ವಿಮರ್ಶೆಯಲ್ಲಿ ಕಳೆದ ಈ ವರ್ಷಗಳಲ್ಲೇ ನನ್ನ ಬುದ್ಧಿ ಚೆನ್ನಾಗಿ ಬೆಳೆದದ್ದು. ವಿಮರ್ಶೆ ಮಾಡುವಾಗ ಅತಿಜಾಗ್ರತೆಯಿಂದ ತೂಕಮಾಡಿದ ತೀರ್ಪುಗಳನ್ನೇ ಕೊಡಬೇಕಿತ್ತು. ಲೋಕಪ್ರಿಯರಾದ, ಹೆಸರಾದ ಕಲಾವಿದರ ಅದ್ಭುತ ಜಾಣತನ ಹಾಗೂ ಕೌಶಲಗಳ ಸಾಧನೆಗಳಿಗೂ ಪ್ರಚಂಡ ಸತ್ವದ ಕೃತಿಗಳಿಗೂ ಇರುವ ಅಂತರವನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿತ್ತು. ಮೊದಲನೆಯವರ ಸಂಪ್ರದಾಯಗಳು ಕಲಾವಿದ ಸತ್ತಕೂಡಲೆ ಅಥವಾ ಅದಕ್ಕೂ ಮುಂಚೆಯೇ ಸಾಯುವಂಥವುವು; ಎರಡನೇಯವು, ಒಂದು ಯುಗಕ್ಕೆ ಮಾತ್ರವಲ್ಲ, ಸರ್ವಕಾಲಕ್ಕೂ ನಿಲ್ಲುವಂಥವುವು. ನನ್ನ ವಿಮರ್ಶೆಗೆ ತುತ್ತಾದವರಲ್ಲಿ ಎಷ್ಟೋ ಜನ ಅಗತಾನೆ ಕಲಾಶಾಲೆಗಳ ಹೊರಗಿಂದ ಬಂದ ವಟುಗಳು. ನೊದ

ಮೊದಲಿನ ಅವರ ಕೃತಿಗಳು ಪ್ರಾವೀಣ್ಯದ ಆಸೆ ಹುಟ್ಟಿಸುತ್ತಿದ್ದವು. ಆದರೆ ತಾವು ಕಲಿತಿದ್ದ ವಿದ್ಯೆಯ ಮೌಲ್ಯವನ್ನು ಅವರು ಅರಿತಿರಲಿಲ್ಲವಾದ್ದರಿಂದ ಬಹುಬೇಗನೇ, ಗುರುಗಳ ಪ್ರಭಾವ ತೀರಿದೊಡನೆಯೇ, ಸಾಮಾನ್ಯತೆಯ ಹಳ್ಳಕ್ಕೆ ಜಾರುತ್ತಿದ್ದರು. ಇಂತಹ ಅನುಭವದಿಂದ ವಿಮರ್ಶಕ ತನ್ನ ಕೆಲಸದಲ್ಲಿ ಕುಶಲಿಯಾಗುತ್ತಾನೆ. ಯೋಗ್ಯತಾಯೋಗ್ಯತೆಗಳ ಪರಾಮರ್ಶನದಲ್ಲಿ ಪ್ರಾವೀಣ್ಯಗಳಿಸುತ್ತಾನೆ. ಈ ಪ್ರಾವೀಣ್ಯವಿಲ್ಲದಿದ್ದರೆ ವಿಮರ್ಶಕ ಬಹುಬೇಗ ಮೋಸ ಹೋಗುವುದುಂಟು.

ನಾನು ಈ ನನ್ನ ೯೨ನೆಯ ವಯಸ್ಸಿನಲ್ಲೂ* ಇನ್ನೂ ಕಲಿಯುತ್ತಿದ್ದೇನೆ.

ಪರಭಾಷಾಜ್ಞಾನ ಹಾಗೂ ಗಣಿತ, ಇವೆರಡರಲ್ಲೂ ನನ್ನ ಪ್ರವೇಶ ಅಲ್ಪ. ಫ್ರೆಂಚ್ ಏನೋ ಇಂಗ್ಲಿಷ್‌ನಂತೆಯೇ ಸುಲಭವಾಗಿ ಓದುತ್ತೇನೆ, ಇಟಲಿ, ಸ್ಪೇನ್‌ಗೆ ಹೋದಾಗ ಅಲ್ಲಿನ ಪತ್ರಿಕೆಗಳನ್ನು ಓದಿ ಸಮಾಚಾರ ತಿಳಿದುಕೊಳ್ಳುವಷ್ಟು ಆ ಭಾಷೆಗಳ ಪರಿಚಯ ಇದೆ. ಜರ್ಮನ್ ಭಾಷೆಯಲ್ಲಿ ನನಗೆಷ್ಟೋ ಪತ್ರಗಳು ಬರುತ್ತವೆ. ಅವುಗಳ ಅರ್ಥ ಏನಿರಬಹುದೆಂದು ಊಹಿಸಿ ತಿಳಿದುಕೊಳ್ಳುವಷ್ಟು ಆ ಭಾಷೆ ನನಗೆ ಗೊತ್ತಿದೆ. ಆದರೆ ಆ ಭಾಷೆಗಳಲ್ಲಿ ಸಂಭಾಷಣೆ ನಡೆಸುವುದು ಮಾತ್ರ ನನ್ನಿಂದಾಗುವುದಿಲ್ಲ. ಗಣಿತ—ನಿವೃತ್ತ ಕಾರಕೂನನಿಗೆ ಗೊತ್ತಿರಬಹುದಾದಷ್ಟು—ನನಗೆ ಬರುತ್ತೆ, ಅಷ್ಟೆ. ಆ ಜ್ಞಾನವೂ ಈಗ ಮಸುಕು ಮಸುಕಾಗುತ್ತಿದೆ. ಆದರೆ; ಗಣಿತದಲ್ಲಿ ಕೌಶಲವಿಲ್ಲದಿದ್ದರೂ, ಅದರ ಉತ್ತಮೋತ್ತಮ ನಿಲುವಿನ ಅರಿವು ನನಗಿದೆ. ಅದನ್ನು ಊಹಿಸಿಕೊಳ್ಳಬಲ್ಲೆನಾದ್ದರಿಂದ.

*ಷಾ ತೀರಿಕೊಂಡದ್ದು ತಮ್ಮ ೯೪ನೇ ವರ್ಷದಲ್ಲಿ.

ನಾನು ಶತದಡ್ಡ; ಆದರೆ, ನನ್ನ ಕಾಲದಲ್ಲಿ ನಾನು ಎಲ್ಲ ನೀರುಗಳ ರುಚಿಬಲ್ಲವನು ಎನಿಸಿಕೊಂಡಿದ್ದೆ.

ನನ್ನ ವಿದ್ಯಾಭ್ಯಾಸದ ಬೆಳವಣಿಗೆ ಹೆಚ್ಚಾಗಿ ಪ್ರಸಿದ್ಧ ಪುಸ್ತಕಗಳಿಂದ, ಉತ್ತಮ ಚಿತ್ರಗಳಿಂದ, ಉದಾತ್ತ ಸಂಗೀತದಿಂದ ಆಯಿತು. ಆದರೂ ನಾನೂ ಹತ್ತು ವರ್ಷದವನಿದ್ದಾಗಲೇ ಸೌಂದರ್ಯದ ಸೋಗೂ ಇಲ್ಲದ ಅತಿ ಸಾಮಾನ್ಯ ಪರಿಸರದ ಓಣಿಯಿಂದ ಸುಂದರ ಸನ್ನಿವೇಶದ ಬೆಟ್ಟದ ಮೇಲಿನ ಒಂದು ಕುಟೀರಕ್ಕೆ ಒಯ್ಯಲ್ಪಟ್ಟೆ. ಅಲ್ಲಿನ ದೃಶ್ಯ ಕ್ಷಣಕ್ಷಣಕ್ಕೂ ನವ ರೂಪವನ್ನು ಧರಿಸುವಂಥಾದ್ದು. ಕೆಳಗೆ ವಿಸ್ತಾರಸಮುದ್ರ ಮೇಲೆ ನೀಲಾಕಾಶದ ಹರಹು. ಈ ಸನ್ನಿವೇಶಕ್ಕೆ ನಾನು ಬಾಲ್ಯದಲ್ಲೇ ಒಯ್ಯಲ್ಪಟ್ಟಿರದೇ ಇದ್ದರೆ ನನ್ನ ವಿದ್ಯಾಭ್ಯಾಸ ಇಷ್ಟರಮಟ್ಟಿಗೆ ವಿಸ್ತರಿಸುತ್ತಿತ್ತೋ ಎಂದು ನನಗನಿಸುವುದಿಲ್ಲ.

ಸುಖ ಎಂಬುದನ್ನು ನಾನು ಗುರಿಯಾಗಿ ಯಾವಾಗಲೂ ಇಟ್ಟುಕೊಂಡಿಲ್ಲ. ಐನ್‌ಸ್ಟೈನರ ಹಾಗೆ ನಾನೂ ಸುಖಿಯಲ್ಲ; ಸುಖವನ್ನು ಬಯಸುವನೂ ಅಲ್ಲ.

ಒಂದು ಗ್ಲಾಸು ವ್ಹಿಸ್ಕಿ, ಒಂದು ದಮ್ಮು ಅಫೂವಿನಿಂದ ಬರಬಹುದಾದ ಮತ್ತು ನನಗೆ ಬೇಕಿಲ್ಲ. ಅದಕ್ಕಾಗಿ ನನಗೆ ಪುರಸೊತ್ತೂ ಇಲ್ಲ. ಅದಕ್ಕಿಂತ ಮೇಲ್ಮಟ್ಟದ ಮೈಮರೆತ

ವನ್ನು ನಾನು ಎರಡು ಮೂರುಭಾರಿ ಅನುಭವಿಸಿದ್ದೇನೆ. ಪರಮಾನಂದ ಅನುಭವವೆಂದರೆ ನಾನು ಚಿಕ್ಕವನಿದ್ದಾಗ ನನ್ನ ತಾಯಿ ನಾವೆಲ್ಲ ಡಾಕಿ ಬೆಟ್ಟದ ಮೇಲೆ ವಾಸಕ್ಕೆ ಹೋಗುತ್ತೇವೆ ಎಂದಾಗ ಆಯಿತು. ಅಲ್ಲಿ ಕಣ್ಣು ತೆರೆದರೆ ಸಾಕು ಯಾವ ಕಲಾಕಾರನೂ ಎಳೆಯಲಾರದಂಥ ಚಿತ್ರಗಳನ್ನು ನಾನು ನೋಡಬಹುದಿತ್ತು. ಆಕಾಶ ಅಷ್ಟು ಸುಂದರವಾಗಿರಬಹುದೆಂದು ನನಗೆ ತಿಳಿದದ್ದು ಅಲ್ಲೇ. ಷೇಕ್‌ಸ್ಪಿಯರನ "ಪ್ರಜ್ವಲಿಸುವ ಚಿನ್ನದ ಎಳೆಗಳಿಂದ ಹೆಣೆದ ಈ ದಿವ್ಯ ಮೇಲ್ಛಾವಣಿ" ಎಂಬ ಮಾತುಗಳನ್ನು ಓದಿದಾಗ ಆತ ಡಾಕಿ ಬೆಟ್ಟದ ಮೇಲಿಂದ ಆಕಾಶವನ್ನು ನೋಡಿಯೇ ಈ ವರ್ಣನೆ ಮಾಡಿರಬೇಕೆಂದೆನಿಸಿತು.

ಆ ಸೌಂದರ್ಯದ ತೀವ್ರಾನುಭವ ಇದುವರೆಗೂ ನನ್ನ ಜೀವನದೊಂದಿಗೆ ಉಳಿದು ಬಂದಿದೆ.



ಭಿಕ್ಷೆ ಬೇಡುತ್ತ ಇತರರ ಸಂಪಾದನೆಯ ಮೇಲೆ ಜೀವನ ಮಾಡುತ್ತ ಸಾಧು ಸಂತರೆಂದು ಹೇಳಿಕೊಳ್ಳುತ್ತಿರುವವರನ್ನು ನಾನೆಂದೂ ಮೆಚ್ಚುವುದಿಲ್ಲ. ತನ್ನ ಸ್ವಂತ ಸಂಪಾದನೆಯನ್ನು ಇತರರೊಂದಿಗೆ ಹಂಚಿಕೊಂಡು, ಸದ್ಬೋಧನೆಯನ್ನು ಮಾಡುವವರನ್ನೇ ನಾನು ಮಹಾತ್ಮರೆನ್ನುತ್ತೇನೆ.

—ಗುರುನಾನಕ್

ಸುಖೀ ರಾಜಕುಮಾರ

ಲಕ್ಷ್ಮೀನಾರಾಯಣ
ರಾಘವೇಂದ್ರ ದೇವಸ್ಥಾನದ ಹತ್ತಿರ
ರೈಲ್ವೆಸ್ಟೇಷನ್ ರಸ್ತೆ
ಕೆ. ಆರ್. ಸಾಗರ ೫೭೧ ೬೦೭
ಮಂಡ್ಯ ಜಿಲ್ಲೆ

ನಗರದ ಅತಿ ಎತ್ತರವಾದ ಪ್ರದೇಶದಲ್ಲಿ ಒಂದು ಉದ್ದನೆಯ ಕಂಬದ ಮೇಲೆ ನಿಂತಿತ್ತು 'ಸುಖೀ ರಾಜಕುಮಾರನ' ಪ್ರತಿಮೆ. ಅವನು ತನ್ನ ದೇಹದ ಸುತ್ತ ಮಿನುಗುವ ತೆಳುವಾದ ಚಿನ್ನದ ತಗಡಿನಿಂದ ಮುಚ್ಚಲ್ಪಟ್ಟಿದ್ದ. ಎರಡೂ ಕಣ್ಣುಗಳಿಗೂ ನೀಲಿಯ ಹರಳುಗಳು (ಇಂದ್ರಮಣಿ) ಮತ್ತು ಅವನ ಖಡ್ಗದ ಹಿಡಿಯ ಮೇಲೆ ಕೋರೈಸುವ ಒಂದು ಕೆಂಪು ಮಾಣಿಕ್ಯ ಹೊಳೆಯುತ್ತಿತ್ತು.

ನಿಜವಾಗಿಯೂ ಅವನು ಎಲ್ಲರಿಗೂ ಮೆಚ್ಚಿಗೆಯಾಗಿದ್ದವ. 'ಅವನು ತುಂಬಾ ಚೆಲುವ, ಕಿರೀಟದ ಹುಂಜದ ಹಾಗೆ!' ಉದ್ಗರಿಸಿದ ನಗರದ ಒಬ್ಬ ಕೌನ್ಸಿಲರ್; ಕಲೆಯ ಬಗ್ಗೆ ತನ್ನ ಅಸೀಮವಾದ ಅಭಿರುಚಿ ತೋರಿದ ಮೆಚ್ಚುಗೆ ಪಡೆಯುವುದಕ್ಕಾಗಿ!

'ನೀನೇಕೆ, ರಾಜಕುಮಾರನಂತೆ' ಸಂತಸದಿಂದಿರಬಾರದು? ಚಂದ್ರನಿಗಾಗಿ ಆಕ್ರಂದಿಸುವ ತನ್ನ ಕಂದನ ಕಂಡು ಕೇಳಿದಳೊಬ್ಬಳು ಮಮತಾಮಯಿ ತಾಯಿ. 'ಆ ರಾಜಕುಮಾರ ಯಾವ ಚಿಂತೆಯ ಕನಸನ್ನು ಕಂಡಿರಲಾರ.'

'ನನಗೆ ಬಹಳ ಸಂತೋಷವಾಗುತ್ತಿದೆ. ಇಡೀ ಜಗತ್ತಿನಲ್ಲಿ ಪೂರ್ಣ ಸುಖಿಯಾಗಿರುವ ಅವನನ್ನು ಕಂಡು' ಆ ಅದ್ಭುತ ಪ್ರತಿಮೆ ದಿಟ್ಟಿಸುತ್ತಾ ನುಡಿದ ತಃಪ್ತ ಮನಸ್ಕನೊಬ್ಬ.

'ಅವನು ದೇವತೆಯಂತೆ ಕಾಣುತ್ತಿದ್ದಾನೆ' ಚರ್ಚಿನಿಂದ ಹೊರಬಂದ ಚೀಲದ ಬಿಳಿಯ ಬಟ್ಟೆಯ ಮಕ್ಕಳು ಮಾತಾಡಿಕೊಂಡರು.

'ನಿನಗೆ ಹೇಗೆ ಗೊತ್ತು? ನೀನು ದೇವತೆಗಳನ್ನು ನೋಡಿರುವೆಯಾ?' ಕೇಳಿದ ಗಣಿತದ ಶಿಕ್ಷಕ.

'ಹಾ! ಆದರೆ ನಾವು ನಮ್ಮ ಕನಸಿನಲ್ಲಿ ಕಂಡಿದ್ದೇವೆ', ಮಕ್ಕಳು ಉತ್ತರಿಸಿದರು. ಅದನ್ನು ನಂಬದ ಶಿಕ್ಷಕರು ಹುಬ್ಬುಗಂಟಿಕ್ಕಿ ದುರುಗಟ್ಟಿ ನೋಡಿದರು.

ಒಂದು ರಾತ್ರಿ ಪುಟ್ಟ ಹಂಸವೊಂದು ಆ ನಗರಕ್ಕೆ ಹಾರಿಬಂದಿತು. ಆದರೆ ಅದರ

ಮೂಲ: ಆಸ್ಕರ್ ವೈಲ್ಡ್‌ನ 'ದಿ ಹ್ಯಾಪಿ ಪ್ರಿನ್ಸ್' ಕಥೆ

ಸ್ನೇಹಿತರೆಲ್ಲಾ ಆರು ವಾರಗಳ ಹಿಂದೆಯೇ ಈಜಿಪ್ಟಿಗೆ ಹಾರಿ ಹೋಗಿದ್ದವು. ಆದರೆ ಅಚ್ಚ ಹಸುರಿನ ಹುಲ್ಲಿನೊಡನೆ ಪ್ರೇಮ ದಿಂದಿದ್ದ ಆ ಹಂಸ ಅಲ್ಲಿಯೇ ಉಳಿದಿತ್ತು. ಅದು ಕಳೆದ ವಸಂತಕ್ಕೂ ಮೊದಲು ನದಿಯ ಪಕ್ಕದ ದೊಡ್ಡ ಹಳದಿ ಪೊದೆಯ ಬಳಿ ಅವ ಳನ್ನು ಕಂಡಿತ್ತು ಮತ್ತು ಅವಳ ಸೊಂಟದ ಬಳುಕಿಗೆ ಮಾರು ಹೋಗಿ ಅವಳೊಡನೆ ಮಾತಾಡಲು ಬಯಸಿ ನಿಂತಿತ್ತು.

'ನಾನಿನ್ನ ಪ್ರೀತಿಸಬಹುದೇ ? ಕೇಳಿತು ಹಂಸ. ಹಸಿರು ಹುಲ್ಲು ನಾಚಿಕೆಯಿಂದ ಮೆಲ್ಲನೆ ತಲೆ ಬಾಗಿಸಿತು. ಹಂಸ ಅವಳ ಸುತ್ತ ಹಾರುತ್ತಾ, ರೆಕ್ಕೆಯಿಂದ ನೀರನ್ನು ಬಡಿಯುತ್ತಾ ಬೆಳ್ಳಿಯ ತೆರೆಗಳನ್ನೇಳಿಸಿತು ಮತ್ತು ಇಡೀ ಬೇಸಿಗೆಯನ್ನು ಅದರ ಪ್ರೇಮ ದಲ್ಲಿಯೇ ಕಳೆಯಿತು.

'ಇದು ತೀರ ಹಾಸ್ಯಾಸ್ಪದದ ಬಂಧನ' ಗೇಲಿ ಮಾಡಿದವು ಇತರ ಹಂಸಗಳು 'ಅವಳ ಬಳಿ ಹಣವಿಲ್ಲ, ಹೆಚ್ಚು ಬಂಧುಗಳೂ ಇಲ್ಲ', ಆದರೆ ನಿಜವಾಗಿಯೂ ನದಿಯ ಹತ್ತಿರ ತುಂಬಾ ಜೊಂಡುಹುಲ್ಲು ಬೆಳೆದಿತ್ತು. ಶರ ಧೃತುವಿನಲ್ಲಿ ಎಲ್ಲಾ ಹಕ್ಕಿಗಳೂ ದೂರಕ್ಕೆ ಹಾರಿದ್ದವು.

ಜತೆಗಾರರೆಲ್ಲಾ ಹಾರಿಹೋದ ಮೇಲೆ ಒಂಟಿತನ ಬಾಧಿಸಿತು ಹಂಸಕ್ಕೆ. ಅನಂತರ ತನ್ನ ಪ್ರೇಮಿಗೆ ಹೇಳಿತು 'ನೀನೇಕೆ ಮಾತೇ ಆಡುವುದಿಲ್ಲ, ನಿನಗೆ ಹೆಚ್ಚು ನಾಚಿಕೆ ಇರ ಬಹುದು ನನಗೆ ಸದಾ ಹಾರುತ್ತ ಪ್ರಯಾಣ ಮಾಡುವುದು ತುಂಬಾ ಇಷ್ಟ'

'ನನ್ನ ಜತೆ ನೀನು ಬರಲಾರೆಯಾ ? ಹಕ್ಕಿ ಕೇಳಿತು. ಆದರೆ ತನ್ನ ಬಿಟ್ಟು ಬರ ಲಾರೆನೆಂದು ಹುಲ್ಲು ತಲೆ ಅಲುಗಿಸಿತು.

'ನೀನು ನಾಟಕವಾಡಿದೆ' ಉಲಿಯಿತು ಹಕ್ಕಿ; ಕೊನೆಗೆ ಯೋಚಿಸಿ 'ನಾನೀಗ ಪಿರ ಮಿಡ್ಡುಗಳ ಹಾರಿಹೋಗುತ್ತಿದ್ದೇನೆ, ನಿನಗೆ ವಿದಾಯಗಳು ಎಂದು ಹೇಳಿ ದೂರ ಹಾರಿತು.

ಹಂಸ ದಿನವೆಲ್ಲಾ ಹಾರಿ, ಸಂಜೆಯ ವೇಳೆಗೆ ನಗರವೊಂದನ್ನು ತಲುಪಿತು. 'ನಾನೆಲ್ಲಿಳಿಯಲಿ' ಹಕ್ಕಿ ಯೋಚಿಸಿತು.

ಕೆಲವು ಕ್ಷಣಗಳ ನಂತರ ಅದು ಎತ್ತರದ ಕಂಬದ ಮೇಲಿನ ಪ್ರತಿಮೆಯನ್ನು ನೋಡಿತು. 'ನಾನು ಇಲ್ಲಿಯೇ ಇಳಿಯು ತ್ತೇನೆ. ಏಕೆಂದರೆ ಇದು ಹೆಚ್ಚು ತಾಜಾ ಗಾಳಿಯ ಉತ್ತಮ ಸ್ಥಳ'ಎಂದು ಯೋಚಿಸಿ ಸುಖೀ ರಾಜಕುಮಾರನ ಪಾದಗಳ ಮಧ್ಯೆ ಇಳಿಯಿತು.

'ನಾನೊಂದು ಚಿನ್ನದ ಶಯ್ಯಾಗೃಹವನ್ನು ಪಡೆದೆ' ಸುತ್ತ ನೋಡುತ್ತಾ ಮೆತ್ತಗೆ ತನ್ನಷ್ಟಕ್ಕೆ ತಾನೇ ಹೇಳಿಕೊಂಡು ಮಲಗಲು ಸಿದ್ಧವಾಯಿತು. ಆದರೆ ಇನ್ನೇನು ತಲೆ ಯನ್ನು ರೆಕ್ಕೆಗಳಡಿಯಲ್ಲಿಟ್ಟು ಮಲಗುತ್ತಿರು ವಂತೆಯೇ ಒಂದು ದಪ್ಪ ನೀರಿನ ಹನಿ ಅದರ ಮೇಲೆ ಬಿತ್ತು' ಎಂಥ ಆಶ್ಚರ್ಯ !' ಆಗಸ ದಲ್ಲಿ ತುಣುಕು ಮೋಡವೂ ಇಲ್ಲ, ನಕ್ಷತ್ರ ಗಳು ಮಿನುಗುತ್ತಿವೆ; ಆದರೂ ಮಳೆಯ ಹನಿ ; ಉತ್ತರ ಯುರೋಪಿನಲ್ಲಿ ವಾತಾ ವರಣ ನಿಜಕ್ಕೂ ಭಯಂಕರ' ಹಕ್ಕಿ ಉಲಿ ಯಿತು

ಮತ್ತೆ, ಮತ್ತೊಂದು ಹನಿ ಉರುಳಿ ಬಿತ್ತು.

ಮಳೆ ಹನಿಯನ್ನು ಮರೆ ಮಾಡದಿದ್ದ ಮೇಲೆ ಈ ಪ್ರತಿಮೆಯಿಂದೇನು ಪ್ರಯೋ ಜನ. ಒಂದು ಉತ್ತಮವಾದ ಹೊಗೆ

ಗೂಡನ್ನು ಹುಡುಕಿಕೊಳ್ಳುತ್ತೇನೆ' ಎಂದು ಹಾರಿ ಹೋಗಲು ತೀರ್ಮಾನಿಸಿತು.

ಆದರೆ ಅದು ರೆಕ್ಕೆಗಳನ್ನು ಬಿಚ್ಚುವುದಕ್ಕೆ ಮುಂಚೆಯೇ ಮೂರನೆಯ ಹನಿ ಬಿತ್ತು. ಆಗ ಅದು ತಲೆಯೆತ್ತಿ ನೋಡಿತು—' ಓ! ಅವನೇನು ನೋಡುತ್ತಿದ್ದಾನೆ?'

ಸುಖೀ ರಾಜಕುಮಾರನ ನೀರು ತುಂಬಿದ ಕಣ್ಣುಗಳಿಂದ ಕಣ್ಣೀರು ಅವನ ಚಿನ್ನದ ಕೆನ್ನೆಗಳ ಮೇಲೆ ಹರಿಯುತ್ತಿದೆ: ಚಂದ್ರನ ಬೆಳದಿಂಗಳಲ್ಲಿ ಅವನ ಮುಖ ಇನ್ನೂ ಕಂಗೊಳಿಸುತ್ತಿದೆ: ಪುಟ್ಟ ಹಂಸಕ್ಕೆ ತುಂಬಾ ವ್ಯಥೆಯಾಯಿತು.

'ಯಾರು ನೀನು?' ಅದು ಕೇಳಿತು.

'ನಾನು ಸುಖೀ ರಾಜಕುಮಾರ'

'ಮತ್ತೇಕೆ ಅಳುತ್ತಿರುವೆ? ಆಶ್ಚರ್ಯವಾಗುತ್ತಿದೆಯಲ್ಲಾ' ಕೇಳಿತು ಹಂಸ.

'ನಾನು ಬದುಕಿದ್ದಾಗ ನನಗೂ ಮಾನವ ಹೃದಯವಿತ್ತು' ಪ್ರತಿಮೆ ಉತ್ತರಿಸಿತು. 'ನನಗೆ ಕಣ್ಣೀರೇ ತಿಳಿದಿರಲಿಲ್ಲ. ಏಕೆಂದರೆ, ನಾನು ದುಃಖಕ್ಕೆ ಪ್ರವೇಶವಿರದ ಸ್ಯಾನ್ಸ್—ಸೋಸಿಯ ಅರಮನೆಯಲ್ಲಿದ್ದೆ. ಹಗಲಿನಲ್ಲಿ ಸಂಗಾತಿಗಳೊಡನೆ ಉದ್ಯಾನವನದಲ್ಲಿ ಆಟ, ಸಂಜೆಯ ಸಮಯ ದೊಡ್ಡ ಹಜಾರದಲ್ಲಿ ನೃತ್ಯವಿರುತ್ತಿತ್ತು. ಉದ್ಯಾನವನದ ಸುತ್ತಲೂ ಎತ್ತರವಾದ ಗೋಡೆ, ಗೋಡೆಯ ಆಚೆ ಏನಿದೆ ಎಂದು ನಾನು ಕೇಳಲೇ ಇಲ್ಲ. ಎಲ್ಲವೂ ಅಲ್ಲಿ ಸುಂದರವಾಗಿತ್ತು. ಈಗಲೂ ನನ್ನನ್ನು ಸುಖೀ ರಾಜಕುಮಾರನೆಂದು ಕರೆಯುತ್ತಿದ್ದರು ಮತ್ತು ನಾನು ನಿಜವಾಗಿಯೂ ಸುಖವಾಗಿಯೇ ಇದ್ದೆ. ಹೀಗೆ ಬದುಕಿದ್ದೆ ಮತ್ತೆ ಸತ್ತೆ. ನಾನು ಸತ್ತ ಮೇಲೆ ಅವರೆಲ್ಲಾ ಇಷ್ಟು ಎತ್ತರದಲ್ಲಿ ನನ್ನನ್ನು ನಿಲ್ಲಿಸಿದ್ದಾರೆ. ಏಕೆಂದರೆ ನನ್ನ ನಗರದ ಕುರೂಪ ಹಾಗೂ ದುಃಖಗಳನ್ನೆಲ್ಲಾ ನಾನು ನೋಡಲಿ ಎಂದು; ನನ್ನ ಹೃದಯವನ್ನು ಸೀಸದಲ್ಲಿ ಮಾಡಿದ್ದರೂ ಕೂಡಾ ನನಗೆ ಈಗ ಬಹಳ ದುಃಖವಾಗುತ್ತಿದೆ.

'ಏನು? ಇವನು ಪೂರ್ಣ ಗಟ್ಟಿ ಚಿನ್ನವಲ್ಲವೇ? ಸ್ವಗತಿಸಿತು ಹಂಸ. 'ದೂರದಲ್ಲಿ' ಸಂಗೀತದ ಸ್ವರದಲ್ಲಿ ಪ್ರತಿಮೆ ಮುಂದುವರಿಸಿತು 'ಒಂದು ಕಿರುದಾರಿಯಲ್ಲಿ ಒಂದು ಗುಡಿಸಲಿದೆ. ಅದರ ಒಂದು ಕಿಟಕಿ ತೆರೆದಿದೆ. ಅದರ ಮೂಲಕ ಮೇಜಿನ ಮುಂದೆ ಕುಳಿತ ಹೆಂಗಸೊಬ್ಬಳನ್ನು ಕಂಡೆ. ತೆಳ್ಳನೆಯ ಚಿಂದಿ ಉಡುಪಿನ ಕೆಂಪು ಕೈಗಳಿಂದ ಕೂಡಿದ ಅವಳ ಸಣಕಲ ಮುಖ ದುಃಖದಿಂದ ಕೂಡಿತ್ತು. ಅವಳ ಕೈಗಳ ಬೆರಳುಗಳು ಸೂಜಿಯಿಂದ ಚುಚ್ಚಿ ಚುಚ್ಚಿ ಗಾಯವಾಗಿವೆ. ಏಕೆಂದರೆ ಅವಳೊಬ್ಬಳು ದರ್ಜಿ. ಅವಳು, ಅರಮನೆಯ ಔತಣಕೂಟದಲ್ಲಿ ಭಾಗವಹಿಸುವ ರಾಣಿಗಾಗಿ ಅವಳ ಸೌಂದರ್ಯ ಹೆಚ್ಚಿಸಲು ಒಂದು ಸ್ಯಾಟಿನ್ ಗೌನು ಮತ್ತು ಅದರ ಮೇಲೆ ಚೆಂದದ ಹೂಗಳ ಚಿತ್ರ ಬಿಡಿಸುತ್ತಿದ್ದಾಳೆ. ಕೋಣೆಯ ಒಂದು ಮೂಲೆಯ ಹಾಸಿಗೆಯಲ್ಲಿ ಅವಳ ಪುಟ್ಟಮಗು ಖಾಯಿಲೆಯಿಂದ ಬಿದ್ದಿದೆ. ಅದಕ್ಕೆ ತುಂಬಾ ಜ್ವರವಿದೆ. ಆ ಮಗು ಬಾಯಾರಿಕೆಯಿಂದ ಕಿತ್ತಲೆಹಣ್ಣನ್ನು ಕೇಳುತ್ತಿದೆ. ಪಾಪ ಅದರ ತಾಯಿಗೆ ನೀರಿನ ಹೊರತು ಅದಕ್ಕೆ ನೀಡಲು ಬೇರೇನು ಇಲ್ಲ. ಅದಕ್ಕಾಗಿ ಆ ಮಗು ಅಳುತ್ತಿದೆ.

'ಹಂಸ, ಹಂಸ ಪುಟ್ಟ ಹಂಸವೇ ನನ್ನ ಖಡ್ಗದ ಹಿಡಿಯಲ್ಲಿರುವ ಮಾಣಿಕ್ಯವನ್ನು

ತೆಗೆದುಕೊಂಡು ಹೋಗಿ ಕೊಡಲಾರೆಯಾ? ನನ್ನ ಕಾಲುಗಳು ಪೀಠಕ್ಕೆ ಅಂಟಿಸಲ್ಪಟ್ಟಿವೆ. ಅದಕ್ಕೆ ನಾನು ಚಲಿಸಲಾರೆ.

'ಈಜಿಪ್ಟಿಗೆ ಹೋಗಲು ನಾನು ಕಾಯುತ್ತಿದ್ದೇನೆ' ಹೇಳಿತು ಹಂಸ. 'ನನ್ನ ಗೆಳೆಯರೆಲ್ಲಾ ಹಾರಿ ಹೋಗಿ ನೈಲ್ ನದಿಯ ಕೆಳಗೆ ಇಳಿದಿವೆ ಮತ್ತು ಅಗಲವಾದ ತಾವರೆ ಎಲೆಗಳೊಡನೆ ಮಾತನಾಡುತ್ತಲಿವೆ. ಬೇಗನೆ ಅವೆಲ್ಲಾ ದೊಡ್ಡ ಮಹಾರಾಜನ ಸಮಾಧಿಯೊಳಗೆ ನಿದ್ರಿಸುವುವು. ಬಣ್ಣದ ಶವಪೆಟ್ಟಿಗೆಯೊಳಗೆ ಹಳದಿ ಬಟ್ಟೆಯಿಂದ ಸುತ್ತಿದ ಆ ರಾಜನ ಶವವಿದೆ'

'ಹಂಸ, ಹಂಸ, ಪುಟ್ಟ ಹಂಸವೇ' ಕೇಳಿದ ರಾಜಕುಮಾರ 'ನನಗಾಗಿ ಒಂದು ರಾತ್ರಿ ಉಳಿಯಲಾರೆಯಾ, ನನ್ನ ದೂತನಾಗಲಾರೆಯಾ? ಆ ಹುಡುಗ ತುಂಬಾ ಬಳಲಿದ್ದಾನೆ ಮತ್ತು ಆ ತಾಯಿಯೂ ಸಹಾ ತುಂಬಾ ದುಃಖದಲ್ಲಿದ್ದಾಳೆ.'

'ಹುಡುಗರೆಂದರೆ ನನಗೆ ಇಷ್ಟವಿಲ್ಲ' ಹಂಸ ಉತ್ತರಿಸಿತು. 'ಕಳೆದ ಬೇಸಿಗೆಯಲ್ಲಿ ನದಿಯ ನೀರಿನ ಮೇಲೆ ನಾನು ಕುಳಿತಿದ್ದಾಗ, ಎರಡು ತುಂಟ ಹುಡುಗರು, ಗಿರಣಿಯವನ ಮಕ್ಕಳು ಸದಾ ನನಗೆ ಕಲ್ಲೆಸೆಯುತ್ತಿದ್ದರು. ಆದರೆ ಅವರು ನನಗೆ ಹೊಡೆಯಲಾಗಲಿಲ್ಲ. ಅದು ಬೇರೆ; ನಾವು ಹಂಸಗಳು ತುಂಬಾ ದೂರದಿಂದ ಹಾರಿ ಬಂದಿರುತ್ತೇವೆ, ಜತೆಗೆ ನಾನಂತೂ ತುಂಬಾ ಒಳ್ಳೆಯ ಕುಟುಂಬದಿಂದ ಬಂದವನು. ಆದರೂ ಅವಮಾನಿಸಲಾಯಿತು ನನ್ನನ್ನು'.

ಸುಖೀ ರಾಜಕುಮಾರನಿಗೆ ತುಂಬಾ ದುಃಖವಾಯಿತು. ಹಂಸಕ್ಕೂ ಬೇಸರವಾಯಿತು. 'ಇಲ್ಲಿ ತುಂಬಾ ಚಳಿ' ನಾನು ಇಲ್ಲಿ ಕೇವಲ ಒಂದು ರಾತ್ರಿ ಮಾತ್ರ ನಿನ್ನೊಡನೆ ಇರುತ್ತೇನೆ ಮತ್ತು ನಿನಗೋಸ್ಕರ' ಎಂದಿತು ಹಂಸ. 'ವಂದನೆಗಳು ಪುಟ್ಟ ಹಂಸವೇ' ಹೇಳಿದ ರಾಜಕುಮಾರ.

ನಂತರ ಹಂಸ ರಾಜಕುಮಾರನ ಖಡ್ಗದಿಂದ ಬೆಲೆಯುಳ್ಳ ಮಾಣಿಕ್ಯವನ್ನು ಕಿತ್ತುಕೊಂಡು ನಗರದ ಛಾವಣಿಯ ಮೇಲೆ ಹಾರಿತು.

ಅದು ಅಮೃತಶಿಲೆಯಿಂದ ದೇವತೆಯನ್ನು ಕೆತ್ತಿದ್ದ ಚರ್ಚಿನ ಗೋಪುರವನ್ನು ಡಾಟಿತು. ನಂತರ ಅರಮನೆಯ ಮೇಲೆ ಹಾರುತ್ತಾ ನರ್ತನದ ಗೆಜ್ಜೆಯ ಸಪ್ಪಳವನ್ನು ಕೇಳಿತು. ಚಂದದ ಬೊಂಬೆಯಂತಹ ಹುಡುಗಿಯೊಬ್ಬಳು ಪ್ರಿಯಕರನೊಡನೆ ಮಹಡಿಯನ್ನು ಹತ್ತಿ ಪಿಸುಗುಟ್ಟಿದಳು 'ಎಷ್ಟು ಅದ್ಭುತವಾಗಿದೆ ಈ ನಕ್ಷತ್ರಗಳು' ಪ್ರಿಯಕರ ಹೇಳಿದ 'ಎಷ್ಟು ಸಿಹಿಯಾಗಿದೆ ಈ ಪ್ರೇಮ'.

'ನನಗೆ ನಂಬಿಕೆಯಿದೆ ನನ್ನ ಉಡುಪು ಅರಮನೆಯ ಔತಣಕ್ಕೆ ಸಿದ್ಧವಾಗುತ್ತದೆಂದು, ಉಡುಪಿನ ಮೇಲೆ ಚೆಂದದ ಹೂಗಳ ಚಿತ್ರ ಬಿಡಿಸಲು ನಾನು ಆಜ್ಞೆ ಮಾಡಿದ್ದೇನೆ. ಆದರೆ ಆ ದರ್ಜಿ ತುಂಬಾ ಸೋಮಾರಿ!' ಅವಳು ಹೇಳಿದಳು.

ಅದು ನದಿಯ ಮೇಲೆ ತೇಲಿತು, ಹಡಗಿನ ಅಟ್ಟಣಿಗೆಯ ಮೇಲೆ ಕಟ್ಟಿದ್ದ ಲಾಟೀನುಗಳನ್ನು ಕಂಡಿತು. ಕೊನೆಗೆ ಅದು ಆ ಬಡ ಗುಡಿಸಲನ್ನು ತಲುಪಿ ಒಳಗೆ ತಾಯಿ ಬಳಲಿ ಬೆಂಡಾಗಿ ನಿದ್ದೆಯನ್ನಪ್ಪಿದ್ದಳು. ಹಕ್ಕಿ ಒಳಗೆ ಕುಪ್ಪಳಿಸಿ ಅಮೂಲ್ಯವಾದ ಮೆಲ್ಲನೆ ಹಾಸಿಗೆಯ ಸುತ್ತಮುತ್ತ ಡುರುಕಿ ಹೊಡೆದು, ಆ ಹುಡುಗನ ಹಣೆಗೆ ರೆಕ್ಕೆಯಿಂದ ಗಾಳಿ ಬೀಸಿತು. ಜ್ವರದ ತಾಪ

ದಲ್ಲಿ ಬೇಯುತ್ತಿದ್ದ ಹುಡುಗ 'ಎಷ್ಟು ತಣ್ಣಗೆ ಹಿತವಾಯ್ತು. ಇನ್ನೂ ಬೇಕೆನಿಸುತ್ತಿದೆ' ಎಂದು ಹೇಳುತ್ತಾ ಸುಖದಲ್ಲಿ ನಿದ್ದೆ ಹೋದ.

ಹಂಸ ಮತ್ತೆ ಸುಖೀ ರಾಜಕುಮಾರನ ಕಡೆಗೆ ಹಾರಿತು 'ತಾನು ಮಾಡಿದ ಕೆಲಸಕ್ಕೆ ತುಂಬಾ ಸಂತೋಷವಾಗುತ್ತಿದೆ ಮತ್ತು ಬಳಿಯಲ್ಲಿಯೂ ಬೆಚ್ಚನೆಯ ಅನುಭವವಾಗುತ್ತಿದೆ' ಎಂದು ಹೇಳಿತು.

'ಈ ರಾತ್ರಿ ಈಜಿಪ್ಟಿಗೆ ಹೋಗುತ್ತೇನೆ' ಹೇಳಿತು ಹಂಸ. ಅದು ಬಹಳ ಉತ್ಸಾಹದಲ್ಲಿತ್ತು. ಆ ನಗರದ ಎಲ್ಲಾ ಸ್ಮಾರಕಗಳಿಗೂ ಭೇಟಿಯಿಟ್ಟಿತು ಮತ್ತು ಚರ್ಚಿನ ತುದಿಯ ಮೇಲೆ ದೀರ್ಘ ಕಾಲ ಕುಳಿತಿತು. ಗುಬ್ಬಿಗಳ ಚಿಲಿಪಿಲಿಯನ್ನು ಆಲಿಸಿತಲ್ಲದೆ ಆ ದಿನ ಬಹಳ ಸಂತೋಷದಿಂದ ಕಾಲ ಕಳೆಯಿತು.

ಆಕಾಶದಲ್ಲಿ ಚಂದ್ರ ಮೇಲೇರುತ್ತಿದ್ದಂತೆಯೇ ಅದು ಮತ್ತೆ ಸುಖೀ ರಾಜಕುಮಾರನ ಕಡೆಗೆ ಹಾರಿ ಅವನನ್ನು ಕೇಳಿತು ಈಜಿಪ್ಟಿನಲ್ಲಿ ನಿನಗೇನಾದರೂ ಕೆಲಸವಿದೆಯೇ ನಾನೀಗ ಹೊರಟೆ.'

'ಹಂಸ, ಹಂಸ, ಪುಟ್ಟ ಹಂಸವೇ, ಮತ್ತೊಂದು ರಾತ್ರಿ ನನ್ನೊಡನೆ ಇರಲಾರೆಯಾ ?' ಕೇಳಿಕೊಂಡ ರಾಜಕುಮಾರ.

'ನಿನಗಾಗಿ ಇನ್ನೊಂದು ರಾತ್ರಿಯನ್ನು ಕಾಯುತ್ತೇನೆ.' ಇನ್ನೊಂದು ಮಾಣಿಕ್ಯವನ್ನು ಕೊಂಡೊಯ್ಯಲೇ' ಒಳ್ಳೆಯ ಮನಸ್ಸಿನ ಹಂಸ ಹೇಳಿತು,

ಅಯ್ಯೋ ನನ್ನ ಬಳಿ ಈಗ ಮಾಣಿಕ್ಯವಿಲ್ಲ' ಹೇಳಿದ ರಾಜಕುಮಾರ 'ಆದರೆ ನನ್ನ ಕಣ್ಣುಗಳು ಹಾಗೆಯೇ ಇವೆ. ಅವು ಸಾವಿರ ವರ್ಷಗಳ ಹಿಂದೆ ಭಾರತದಿಂದ ತಂದ ಅಪರೂಪದ ನೀಲಮಣಿಯಿಂದ ಮಾಡಲ್ಪಟ್ಟಿವೆ. ಅವುಗಳಲ್ಲಿ ಒಂದನ್ನು ಕಿತ್ತು ಅವನಿಗೆ ಕೊಡು. ಆ ಒಡವೆ ಮಾರಿ ಆ ಹುಡುಗ ಬೆಂಕಿ, ಸೌದೆ ಪಡೆದು ತನ್ನ ನಾಟಕ ಬರೆದು ಮುಗಿಸಲಿ !'

'ಪ್ರೀತಿಯ ರಾಜಕುಮಾರನೇ, ನನ್ನಿಂದ ಆ ಕೆಲಸ ಮಾಡಲಾಗುವುದಿಲ್ಲ' ಎಂದು ಅಳತೊಡಗಿತು ಹಂಸ.

ಹಂಸ, ಹಂಸ, ಪುಟ್ಟ ಹಂಸವೇ ನಾನು ಹೇಳಿದ ಹಾಗೆ ಮಾಡು' ಕೇಳಿಕೊಂಡ ರಾಜಕುಮಾರ ನಂತರ ಹಂಸ ರಾಜಕುಮಾರನ ಕಣ್ಣುಗಳನ್ನು ಕಿತ್ತುಕೊಂಡು ಆ ವಿದ್ಯಾರ್ಥಿಯ ರೂಮಿನ ಕಡೆಗೆ ಹಾರಿತು. ಹಕ್ಕಿಗೆ ರೂಮಿನೊಳಗೆ ಹೋಗಲು ಕಷ್ಟವಾಗಲಿಲ್ಲ. ಏಕೆಂದರೆ ಮೇಲ್ಛಾವಣಿಯಲ್ಲಿ ಸ್ವಲ್ಪ ತೂತಿತ್ತು. ಆ ತೂತಿನ ಮೂಲಕ ನುಸುಳಿ ರೂಮಿನೊಳಕ್ಕೆ ನುಗ್ಗಿತು. ಆ ಯುವಕ ತನ್ನ ಕೈಗಳಿಂದ ಮುಖವನ್ನು ಮುಚ್ಚಿದ್ದರಿಂದ ಆ ಹಕ್ಕಿಯ ರೆಕ್ಕೆಯ ಶಬ್ದವನ್ನು ಕೇಳಲಾಗಲಿಲ್ಲ. ಸ್ವಲ್ಪ ಹೊತ್ತಿನ ನಂತರ ತಲೆಯನ್ನು ಮೇಲಕ್ಕೆತ್ತಿ ನೋಡಿದಾಗ ಸುಂದರವಾದ ಬಣ್ಣ ಬಣ್ಣದ ಇಂದ್ರಮಣಿಯನ್ನು ಕಂಡನು.

'ನಾನು ಎಲ್ಲರಿಗೂ ಮೆಚ್ಚಿಕೆಯಾಗುತ್ತಿದ್ದೇನೆ'. ಅವನು ಕಿರುಚಿದ 'ಇದು ಯಾರೋ ನನ್ನನ್ನು ಮೆಚ್ಚಿದವರಿಂದ ಬಂದಿದೆ, ನಾನೀಗ ನಾಟಕ ಬರೆದು ಮುಗಿಸುತ್ತೇನೆ'. ಎಂದು ಹೇಳಿ ಸಂತಸಗೊಂಡ.

ಮರುದಿನ ಹಂಸ ಬಂದರಿಗೆ ಹಾರಿ ಹೋಯಿತು. ಒಂದು ದೊಡ್ಡ ದೋಣಿಯ ಮೇಲೆ ಹಗ್ಗ ಹಿಡಿದು ಕುಳಿತ ಬಲೆ ಬೀಸುವ ನಾವಿಕರನ್ನು ನೋಡತೊಡಗಿತು. 'ಹಾಯಿಸ್ ! ಹೋ!' ಬಲೆ ಮೇಲೆ ಬಂದಂತೆ ನಾವಿಕರು ಕೂಗತೊಡಗಿದರು. 'ನಾನೀಗ ಈಜಿಪ್ಟಿಗೆ ಹೋಗುತ್ತೇನೆ' ಹಂಸ ಕೂಗಿ ಹೇಳಿತು. ಆದರೂ ಯಾರೂ ಅದಕ್ಕೆ ಕಿವಿಗೊಡಲಿಲ್ಲ. ಚಂದ್ರ ಹುಟ್ಟುತ್ತಿದ್ದಂತೆಯೇ ಹಕ್ಕಿ ಮತ್ತೆ ರಾಜಕುಮಾರನ ಕಡೆಗೆ ಹಾರಿತು. 'ನಿನಗೆ ನಾನೀಗ ವಿದಾಯ ಹೇಳಲು ಬಂದಿರುವೆ' ಹೇಳಿತು ಹಕ್ಕಿ. 'ಹಂಸ, ಹಂಸ, ಪುಟ್ಟ ಹಂಸವೇ' ಹೇಳಿದ ರಾಜಕುಮಾರ 'ಮತ್ತೊಂದು ರಾತ್ರಿ ನನ್ನೊಡನೆ ಇರಲಾರೆಯಾ ?'

'ಈಗ ಚಳಿಗಾಲ' ಹೇಳಿತು ಹಂಸ 'ಹಿಮ ಇಲ್ಲಿ ಹೆಚ್ಚು ಈಜಿಪ್ಟಿನಲ್ಲಿ ಪಾಮ್ ಮರದ ಹಸಿರೆಲೆಗಳ ಮೇಲೆ ಸೂರ್ಯ ಬೆಚ್ಚಗಿರುತ್ತಾನೆ. ಮೊಸಳೆಗಳೆಲ್ಲಾ ಕೆಸರಿನ ಮೇಲೆ ಮಲಗಿ ಸೋಮಾರಿಗಳಂತೆ ತಮನ್ನು ನೋಡುತ್ತಿರುತ್ತವೆ. ನನ್ನ ಸಂಗಾತಿಗಳೆಲ್ಲಾ ಬಾಲ್‌ಬೇಕ್ ದೇವಾಲಯದಲ್ಲಿ ಗೂಡು ಕಟ್ಟಿವೆ ಹಾಗೂ ಕಂದು ಮತ್ತು ಬಿಳಿಯ ಬಣ್ಣದ ಪಾರಿವಾಳಗಳೆಲ್ಲಾ ಆ ಗೂಡನ್ನು ನೋಡುತ್ತಾ ಗುಟುರು ಹಾಕುತ್ತವೆ. ಪ್ರೀತಿಯ ರಾಜಕುಮಾರನೇ ನಾನೀಗ ಹೋಗಲೇಬೇಕು. ಆದರೆ ನಾನೆಂದು ನಿನ್ನನ್ನು ಮರೆಯಲಾರೆ. ಮುಂದಿನ ವಸಂತದಲ್ಲಿ ನಿನಗಾಗಿ ಎರಡು ಸುಂದರ ಆಭರಣಗಳನ್ನು ತರುತ್ತೇನೆ, ನೀನು ಕೊಟ್ಟ ಆಭರಣಗಳ ಬದಲಾಗಿ! ನಾನು ತರುವ ಮಾಣಿಕ್ಯ ಕೆಂಪು ಗುಲಾಬಿಗಿಂತಲೂ ಕೆಂಪು, ನೀಲಮಣಿಗಿಂತಲೂ ನೀಲಿ!

'ಆ ಚೌಕದಲ್ಲಿ' ರಾಜಕುಮಾರ ಹೇಳಿದ 'ಒಂದು ಪುಟ್ಟ ಹುಡುಗಿ ನಿಂತಿದ್ದಾಳೆ. ಅವಳ ಬೆಂಕಿಯ ಕಡ್ಡಿಗಳೆಲ್ಲಾ ಚರಂಡಿಗೆ ಬಿದ್ದು ಹಾಳಾಗಿವೆ. ಬರಿಗೈಯಲ್ಲಿ ಅವಳು ಮನೆಗೆ ಹೋದರೆ ಅವಳ ತಂದೆ ಹೊಡೆಯುತ್ತಾನೆ. ಅವಳಿಗೆ ಶೂಗಳಾಗಲೀ, ಚಪ್ಪಲಿಗಳಾಗಲೀ ಇಲ್ಲ. ಅವಳ ಪುಟ್ಟ ತಲೆ ಬರಿದಾಗಿದೆ. ಆದ್ದರಿಂದ ನನ್ನ ಇನ್ನೊಂದು ಕಣ್ಣನ್ನು ಕಿತ್ತು ಅವಳಿಗೆ ಕೊಡು. ಆಗ ಅವಳ ತಂದೆ ಅವಳನ್ನು ಶಿಕ್ಷಿಸಲಾರ.

'ನಾನು ಇನ್ನೊಂದು ರಾತ್ರಿ ಇಲ್ಲಿ ತಂಗಿರುತ್ತೇನೆ' ಹೇಳಿತು ಹಂಸ 'ಆದರೆ ನಾನು ನಿನ್ನ ಕಣ್ಣನ್ನು ಕೀಳಲಾರೆ, ನೀನು ಪೂರ್ತಿ ಕುರುಡನಾಗುವೆ!'

'ಹಂಸ, ಹಂಸ, ಪುಟ್ಟ ಹಂಸವೇ, ನಾನು ಹೇಳಿದಂತೆ ದಯವಿಟ್ಟು ಮಾಡು' ಗೋಗರೆದ ರಾಜಕುಮಾರ.

ಅನಂತರ ಅದು ಅವನ ಇನ್ನೊಂದು ಕಣ್ಣನ್ನು ಕಿತ್ತು ಆ ಹುಡುಗಿಯ ಕಡೆಗೆ ಹಾರಿ ಅವಳ ಅಂಗೈಯಲ್ಲಿ ಹಾಕಿತು. 'ಎಷ್ಟೊಂದು ಸುಂದರವಾಗಿದೆ, ಈ ಗಾಜಿನ ಚೂರು!' ಹುಡುಗಿ ಕುಣಿಯುತ್ತಾ ಮನೆಯ ಕಡೆ ಸಾಗಿದಳು.

ಮತ್ತೆ ರಾಜಕುಮಾರನಲ್ಲಿ ಹಿಂತಿರುಗಿ ಹೇಳಿತು ಹಕ್ಕಿ 'ನೀನೀಗ ಪೂರ್ತ ಕುರುಡನಾಗಿರುವೆ. ಆದ್ದರಿಂದ ನಾನು ಸದಾ ನಿನ್ನ ಬಳಿಯೇ ಇರುತ್ತೇನೆ.'

'ಇಲ್ಲ ಹಂಸವೇ ನೀನು ಈಜಿಪ್ಟಿಗೆ ಹಾರಿ ಹೋಗಲೇಬೇಕು' ಹೇಳಿದ ರಾಜಕುಮಾರ.

'ನಾನು ನಿನ್ನ ಬಳಿಯೇ ಇರುತ್ತೇನೆ' ಎಂದು ಹೇಳಿ ಅವನ ಪಾದದ ಬಳಿ ಮಲಗಿತು.

ಹಕ್ಕಿ ಇಡೀ ದಿನ ಹಗಲು ರಾಜ ಕುಮಾರನ ಮೇಲೆ ಕುಳಿತು ತಾನು ಕಂಡ ಅನೇಕ ವಿಚಿತ್ರ ನಾಡುಗಳ ಬಗ್ಗೆ ವರ್ಣಿಸಿತು. ಉದ್ದದ ನೈಲ್ ದಂಡೆಯಲ್ಲಿ ನಿಂತು ಹೊನ್ನಿನ ಬಣ್ಣದ ಮೀನುಗಳನ್ನು ತಮ್ಮ ಕೊಕ್ಕಿನಿಂದ ಹಿಡಿಯುವ ದೊಡ್ಡ ಹಕ್ಕಿಗಳ ಬಗ್ಗೆ ಹೇಳಿತು. ಮತ್ತು ಭೂಮಿಯಷ್ಟು ಹಿಂದಿನ ಚೇರುಂಡಗಳ (ಸ್ಫಿಂಕ್ಸ್) ಬಗ್ಗೆ, ಮರುಭೂಮಿಯಲ್ಲಿ ತಮ್ಮ ಒಂಟೆಗಳ ಪಕ್ಕ ದಂತದ ಮಣಿ ಹಿಡಿದು ಸಾಗುವ ವ್ಯಾಪಾರಗಳ ಬಗ್ಗೆ ಹಾಗೂ ಎಬೋನಿಯಷ್ಟು ಕಪ್ಪಗಿರುವ ದೊಡ್ಡ ಮಣಿ ಪೂಜೆ ಮಾಡುವ ಚಂದ್ರ ಪರ್ವತದ ರಾಜನ ಬಗ್ಗೆ, ಪಾಮ್ ಮರದಲ್ಲಿ ಮಲಗಿ ನಿದ್ರಿಸುವ ಸರ್ಪ ಹಾಗು ವಿಶಾಲವಾದ ಸರೋವರದಲ್ಲಿ ಅಗಲವಾದ ಚಪ್ಪಟೆ ಎಲೆಯ ಮೇಲೆ ಯಾನ ಮಾಡುವ ಪಿಗ್ಮಿಗಳ ಬಗ್ಗೆ, ಯಾವಾಗಲೂ ಚಿಟ್ಟೆಗಳೊಡನೆ ಕಾದಾಡುವ ಜನರ ಬಗ್ಗೆ ರಾಜನಿಗೆ ವರ್ಣಿಸಿತು.

'ನನ್ನ ಪ್ರೀತಿಯ ಪುಟ್ಟ ಹಂಸವೇ, ನೀನು ಅದ್ಭುತವಾದ ಸಂಗತಿಗಳ ಬಗ್ಗೆ ಹೇಳಿದೆ. ಆದರೆ ಅದಕ್ಕಿಂತಲೂ ಹೆಚ್ಚಿನ ಅದ್ಭುತ ಸಂಗತಿಗಳೆಂದರೆ ಗಂಡು ಹೆಣ್ಣುಗಳ ನೋವು ಮತ್ತು ಮನುಷ್ಯನ ಜಿಪುಣತನಕ್ಕಿಂತಲೂ ದೊಡ್ಡದಾದ ರಹಸ್ಯ ಸಂಗತಿಯಿಲ್ಲ. ಪುಟ್ಟ ಹಂಸವೇ, ನೀನು ನನ್ನ ನಗರಕ್ಕೆ ಹಾರಿ ಹೋಗು, ನಂತರ ಅಲ್ಲಿ ನೀನು ಏನೇನು ನೋಡಿದೆಯೆಂದು ವರ್ಣಿಸು.'

ಆ ಹಕ್ಕಿ ದೊಡ್ಡ ನಗರದ ಮೇಲೆ ಹಾರಿತು. ಸುಂದರ ಬಂಗಲೆಗಳೊಳಗಿನ ಸಂತಸದ ಜನರನ್ನು ಮತ್ತು ಅವರ ಮನೆಯ ಗೇಟಿನ ಬಳಿಯಲ್ಲಿದ್ದ ಭಿಕ್ಷುಕರನ್ನು ಕಂಡು ಕತ್ತಲಲ್ಲಿಯೇ ಮುಂದಕ್ಕೆ ಹಾರಿತು. ಹಸಿವಿನಿಂದ ಬಿಳಿಚಿದ ಮುಖಗಳನ್ನು ನೋಡಿತು. ಕಮಾನಿನ ಸೇತುವೆಯಡಿ ಮಲಗಿದ್ದ ಮಕ್ಕಳಿರಡು ಒಂದರೊಡನೊಂದು ತಬ್ಬಿಕೊಂಡು ಬೆಚ್ಚಗೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾ 'ನಾವೆಷ್ಟು 'ಹಸಿದಿದ್ದೇವೆ' ಎಂದು ಹೇಳುವುದನ್ನು ಕೇಳಿಸಿಕೊಂಡಿತು. ಅನಂತರ ಆ ಮಕ್ಕಳನ್ನು ನೋಡಿ 'ನೀವಿಲ್ಲಿ ಮಲಗಬಾರದು' ಎಂದು ಗದರಿಸಿದ ಕಾವಲುಗಾರನನ್ನು ಕಂಡು ಹೆದರಿ ಓಡಿದ ಮಕ್ಕಳನ್ನೂ ಸಹಾ ಗಮನಿಸಿತು.

ಹಕ್ಕಿ ಹಿಂತಿರುಗಿ ತಾನು ನೋಡಿದುದನ್ನೆಲ್ಲಾ ರಾಜಕುಮಾರನಿಗೆ ವಿವರಿಸಿತು.

ಪ್ರತಿಮೆಗೆ ಹೊದಿಸಿದ್ದ ಚಿನ್ನವನ್ನು ಆ ಹಂಸ ಎಲೆ ಎಲೆಯಂತೆ ತೆಗೆಯಿತು ರಾಜಕುಮಾರ ಮಂಕಾಗಿ ಕಾಣತೊಡಗಿದ ಅನಂತರ ಆ ಚಿನ್ನವನ್ನು ಹಕ್ಕಿ ಬಡವರಿಗೆ ಹಂಚಿತು. ಅದನ್ನು ಪಡೆದ ಮಕ್ಕಳ ಮುಖ ಗುಲಾಬಿಯಾಗಿ ಸಂತೋಷದಿಂದ 'ನಮಗಿಂದು ಊಟ ಸಿಕ್ಕಿದೆ' ಎಂದು ಬೀದಿಯಲ್ಲಿ ಕುಣಿದಾಡಿದರು.

ಅನಂತರ ಮಂಜು ಮುಸುಕಿ ಹಿಮ ಹೆಪ್ಪಾಗಿ ಸುರಿಯಿತು. ಬೀದಿಯೆಲ್ಲಾ ಬೆಳ್ಳಿಯಂತೆ ಹೊಳೆಯುತ್ತಿತ್ತು. ಮನೆಯ ಸೂರಿನಲ್ಲಿ ಮಂಜು ಕತ್ತಿಯಂತೆ ನೇತಾಡು

ತ್ತಿತ್ತು. ಉಣ್ಣೆಯ ಬಟ್ಟೆ ಧರಿಸಿದ ಮಕ್ಕಳು ಕುಲಾವಿ ತೊಟ್ಟು ಹಿಮದ ಮೇಲೆ ಜಾರುಗುಪ್ಪೆಯಾಡಿದರು.

ಪುಟ್ಟ ಬಡ ಹಂಸ ಚಳಿಯಿಂದ ಗಡಗಡನೆ ನಡುಗಿತು. ಆದರೂ ರಾಜಕುಮಾರನನ್ನು ಬಿಟ್ಟಿರಲಾಗಲಿಲ್ಲ. ಬೇಕರಿಯವನ ಕಣ್ಣು ತಪ್ಪಿಸಿ ಜಲ್ಲಿ ಕಾಗದ ತಂದು ರೆಕ್ಕೆ ಮುದುರಿ ಬೆಚ್ಚಗೆ ಮಾಡಿಕೊಳ್ಳಲು ಪ್ರಯತ್ನಿಸಿತು.

ಕೊನೆಗೆ ಅದಕ್ಕೆ ತಿಳಿಯಿತು ತನ್ನ ಸಾವು ಬಹಳ ದೂರವಿಲ್ಲವೆಂದು ಅದಕ್ಕೆ ಕೇವಲ ರಾಜಕುಮಾರನ ಹೆಗಲಿನ ಮೇಲೆ ಹಾರುವಷ್ಟು ಮಾತ್ರ ಶಕ್ತಿ ಉಳಿಯಿತು. ನಿನಗೆ ನನ್ನ ಕೊನೆಯ ಪ್ರಣಾಮಗಳು ಪ್ರೀತಿಯ ರಾಜಕುಮಾರನೇ 'ಮೆತ್ತಗೆ ಹೇಳಿತು' 'ನಿನ್ನ ಕೈಗಳನ್ನು ಒಂದು ಸಾರಿ ಚುಂಬಿಸಲು ಅನುಮತಿ ನೀಡಲಾರೆಯಾ ?"

'ಪುಟ್ಟ ಹಂಸವೇ ನೀನು ಈಜಿಪ್ಟಿಗೆ ಹೋಗುತ್ತಿರುವುದಕ್ಕೆ ಖುಷಿಯಾಗುತ್ತಿದೆ' ಹೇಳಿದ ರಾಜಕುಮಾರ 'ಬಹಳ ದಿನಗಳು ಇಲ್ಲಿ ಉಳಿದೆ ; ನನ್ನ ಕೈಗಳಿಗೇ ಏಕೆ ನನ್ನ ತುಟಿಗಳಿಗೇ ಚುಂಬಿತು ಬಾ ಏಕೆಂದರೆ ನಾನು ನಿನ್ನನ್ನು ಪ್ರೀತಿಸುತ್ತೇನೆ !

'ನಾನು ಈಜಿಪ್ಟಿಗೆ ಹೋಗುತ್ತಿಲ್ಲ' ಹೇಳಿತು ಹಂಸ. ನಾನು ಸಾವಿನ ಮನೆಗೆ ಹೋಗುತ್ತಿದ್ದೇನೆ. ಸಾವು ನಿದ್ದೆಯ ಸೋದರರಲ್ಲವೇ ?'

ಎಂದು ಹೇಳುತ್ತಾ ಸುಖೀ ರಾಜಕುಮಾರನ ತುಟಿಗಳನ್ನು ಚುಂಬಿಸಿ ಮೇಲಿನಿಂದ ಉರುಳುತ್ತಾ ಅವನ ಪಾದಗಳ ಬಳಿ ಸತ್ತಿತು.

ಮರುಕ್ಷಣದಲ್ಲಿಯೇ ಪ್ರತಿಮೆಯ ಬಳಿಗೆ ಏನೋ ಒಡೆದು ಭಗ್ನವಾದ ಶಬ್ದ ಕೇಳಿತು. ಅದು ಆ ಪ್ರತಿಮೆಯ ಸೀಸದ ಹೃದಯ ಒಡೆದು ಚೂರುಚೂರಾದ ಶಬ್ದ. ಕೇಳಿಬಂದಿತು.

ಬೆಳಿಗ್ಗೆ ಆ ಚೌಕದಲ್ಲಿ ಮೇಯರ್ ಕೌನ್ಸಿಲರ್‌ಗಳ ಜತೆ ವಾಯುವಿಹಾರಕ್ಕೆ ಹೋಗುತ್ತಿದ್ದಾಗ ಉದ್ಗರಿಸಿದ 'ದೇವರೇ ! ಎಷ್ಟೊಂದು ಕೊಳಕು ಸುಖೀ ರಾಜಕುಮಾರ !' 'ಹೌದು ಎಷ್ಟು ಕೊಳಕು !' ಉದ್ಗರಿಸಿದರು ಕೌನ್ಸಿಲರ್‌ಗಳೂ ಸಹಾ ನಂತರ ಅದರ ಮೇಲೆ ಹತ್ತಿ ಹೋದರು ಮೇಯರ್‌ನ ಬಾಲದಂತೆ.

'ಅವನ ಖಡ್ಗದಿಂದ ಮಾಣಿಕ್ಯ ಮರೆಯಾಗಿದೆ, ಕಣ್ಣುಗಳು ಕಾಣೆಯಾಗಿ. ಅವನು ಚಿನ್ನದ ಪ್ರತಿಮೆಯಾಗಿರಲಾರ'.

'ಈಗ ಅವನು ನಿಜವಾಗಿಯೂ ಭಿಕ್ಷುಕನಿಗಿಂತ ಮೇಲಲ್ಲಿ !' ಹೇಳಿದ ಮೇಯರ್ 'ಭಿಕ್ಷುಕನಿಗಿಂತ ಮೇಲಲ್ಲಿ' ದನಿಗೂಡಿಸಿದರು ಕೌನ್ಸಿಲರ್‌ಗಳೂ ಇಲ್ಲಿ ಅವನ ಪಾದದ ಬಳಿ ಒಂದು ಹಕ್ಕಿ ಸತ್ತಿದೆ. 'ನಾವು ಈಗ ಒಂದು ಘೋಷಣೆ ಹೊರಡಿಸಬೇಕು. ಏನೆಂದರೆ ಪಕ್ಷಿಗಳು ಇಲ್ಲಿ ಸಾಯಿಬಾರದೆಂದು !' ಕಾರಕೂನ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ.

ಆನಂತರ ಅವರೆಲ್ಲಾ ಸುಖೀ ರಾಜಕುಮಾರನ ಪ್ರತಿಮೆಯನ್ನು ಕೆಳಗಿಳಿಸಿದರು 'ಅವನಲ್ಲಿ ಸೌಂದರ್ಯವಿಲ್ಲದಿದ್ದ ಮೇಲೆ ಉಪಯೋಗವಿಲ್ಲ' ವಿಶ್ವವಿದ್ಯಾಲಯದ ಕಲಾತಜ್ಞ ಪ್ರೊಫೆಸರ್ ಘೋಷಿಸಿದರು.

ಆನಂತರ ಪ್ರತಿಮೆಯನ್ನು ಕುಲುಮೆಯಲ್ಲಿ ಕರಗಿಸಿದರು. ಮೇಯರ್ ಸಭೆ ಕರೆದ ಆ ಲೋಹವನ್ನು ಏನು ಮಾಡಬೇಕೆಂದು ಕೇಳಲು ಮತ್ತು ಸಭೆಯಲ್ಲಿ ಹೇಳಿದ 'ನಾವು ಇನ್ನೊಂದು ಪ್ರತಿಮೆಯನ್ನು ಮಾಡ

ನಿಲ್ಲಿಸಬೇಕು. ಆದರೆ ಅದು ನನ್ನ ಪ್ರತಿಮೆಯಾಗಿರಬೇಕು.'

'ನನ್ನದು....ನನ್ನದು' ಕಿತ್ತಾಡುತ್ತಾ ಕೂಗಿದರು ಪ್ರತಿಯೊಬ್ಬ ಕೌನ್ಸಿಲರ್. ನಾನು ಕೊನೆಯಲ್ಲಿ ಕೇಳಿಸಿಕೊಂಡಾಗ ಅವರು ಇನ್ನೂ ಕಿತ್ತಾಡುತ್ತಿದ್ದರು.

'ಎಂಥ ವಿಚಿತ್ರ ವಸ್ತು' ಕೆಲಸಗಾರರ ಮೇಲ್ವಿಚಾರಕ ಹೇಳಿದ 'ಫೌಂಡ್ರಿಯಲ್ಲಿ ಈ ಒಡೆದ ಸೀಸದ ಹೃದಯ ಕುಲುಮೆಯಲ್ಲಿ ಕರಗಲಾರದು. ಅದನ್ನು ನಾವು ಎಸೆಯಬೇಕು.' ದೂಳಿನ ರಾಶಿಯಲ್ಲಿ ಸತ್ತು ಬಿದ್ದಿದ್ದ ಹಂಸದತ್ತ ಆ ಹೃದಯದ ಚೂರನ್ನು ಎಸೆದರು.

'ನಗರದಿಂದ ನನಗೆರಡು ಅಮೂಲ್ಯವಾದ ವಸ್ತುಗಳನ್ನು ತನ್ನಿ' ದೇವರು ತನ್ನ ಸೇವಕರಿಗೆ ಹೇಳಿದ. ದೇವ ದೂತರು 'ಸೀಸದ ಹೃದಯ ಮತ್ತು ಸತ್ತ ಹಕ್ಕಿ'ಯನ್ನು ತಂದು ಅರ್ಪಿಸಿದರು. 'ನೀವು ಅಮೂಲ್ಯವಾದುದನ್ನೇ ತಂದಿರಿ' ತೃಪ್ತಿಯಿಂದ ಹೇಳಿದ ದೇವರು. ನನ್ನ ಸ್ವರ್ಗದಲ್ಲಿ ಈ ಹಕ್ಕಿ ಸದಾ ಹಾಡುತ್ತಲಿರಲಿ ಮತ್ತು ನನ್ನ ಚಿನ್ನದ ನಗರದಲ್ಲಿ ರಾಜಕುಮಾರ ಸುಖವಾಗಿರಲಿ !



ರಾಜಕೀಯ ಕ್ಷೇತ್ರದಲ್ಲಿಯ ನನ್ನ ಪ್ರಯೋಗಗಳನ್ನು ಭಾರತವೇ ಅಲ್ಲದೆ ಒಹುಮಟ್ಟಿಗೆ ನಾಗರಿಕ ಜಗತ್ತೂ ಅರಿತಿದೆ. ನನಗಾದರೋ ಅವುಗಳು ಹೆಚ್ಚು ಮೌಲ್ಯವಾದವುಗಳಲ್ಲ. ನಾನು ಸಾಧಿಸಬೇಕೆಂದಿರುವುದು ಆತ್ಮ ಸಾಕ್ಷಾತ್ಕಾರ; ದೇವರನ್ನು ಮುಖತಃ ದರ್ಶಿಸಿ ಮೋಕ್ಷಸಾಧನೆ ಮಾಡುವುದು.

—ಗಾಂಧೀಜಿ

ಕಾರ್ಬನ್ನಿನ ಹೊಸರೂಪ C-60 ಬಕ್‌ಮಿನ್‌ಸ್ಟರ್ ಫುಲರೀನ್

ಡಾ|| ಸರ್ವೋತ್ತಮ ಅಂಬೇಕರ್
೪೪, ೧೫ನೇ ಕ್ರಾಸ್
ವಿ. ವಿ. ಪುರಂ, ಮೈಸೂರ-೫೭೦೦೦೨

ಕಾರ್ಬನ್ನು ಜೀವಿಗಳಲ್ಲಿರುವ ಅತ್ಯಂತ ಮಹತ್ವದ ಧಾತು. ಇಡೀ ಸಾವಯವ ರಸಾಯನ ಶಾಸ್ತ್ರ ಈ ಧಾತುವಿನ ಮೇಲೆ ಅವಲಂಬಿಸಿದೆ. ಇದರ ಸಂಯುಕ್ತಗಳು ಡೀಜಲ್ ಎಣ್ಣೆ ಮೊದಲ್ಗೊಂಡು ಡಿ.ಎನ್.ಎ. ವರೆಗೆ ವ್ಯಾಪಕವಾಗಿವೆ. ಈ ಜೈವಿಕ ಸಂಬಂಧವನ್ನು ಹೊರತುಪಡಿಸಿ ಕಾರ್ಬನ್ನು ಸ್ವತಂತ್ರವಾಗಿಯೂ ವಿಜ್ಞಾನಿಗಳ ಗಮನವನ್ನು ಸೆಳೆದಿದೆ. ಕಾರ್ಬನ್ನಿನ ಎರಡು ಭಿನ್ನರೂಪಗಳಾದ ವಜ್ರ ಮತ್ತು ಗ್ರಾಫೈಟನ್ನು ವಿಜ್ಞಾನಿಗಳು ಅಭ್ಯಸಿಸಿದ್ದಾರೆ ಹಾಗೂ ಅವುಗಳ ಅನೇಕ ಉಪಯೋಗಗಳನ್ನು ಕಂಡುಹಿಡಿದಿದ್ದಾರೆ. ನಮ್ಮ ಮಿತ್ರ ಕಾರ್ಬನ್ ತನ್ನ ಹೃದಯವನ್ನು ಇಷ್ಟೆಲ್ಲ ನಮ್ಮೆದುರಿಗೆ ಬಿಚ್ಚಿಟ್ಟಿದ್ದರೂ ಒಂದು ವಿಷಯವನ್ನು ಮಾತ್ರ ಈವರೆಗೆ ಗುಟ್ಟಾಗಿಯೇ ಇಟ್ಟಿದ್ದ. ಈಗ ಈ ಗುಟ್ಟು ರಟ್ಟಾಗಿದೆ. ಕಾರ್ಬನ್ನಿಗೆ ಎರಡೇ ಭಿನ್ನ ರೂಪಗಳಲ್ಲಿ ಮೂರನೆಯ ಭಿನ್ನರೂಪವೂ ಒಂದು ಉಂಟು ಎಂಬುದನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ೧೯೮೫. ಸ್ಮಾಲೆ, ಕ್ರೋಟೋ ಮತ್ತು ಕರ್ಲ್ ಎನ್ನುವ ವಿಜ್ಞಾನಿಗಳಿಗೆ ಈ ಅವಿಷ್ಕಾರಕ್ಕಾಗಿ ೧೯೯೬ರ ರಸಾಯನ ಶಾಸ್ತ್ರಕ್ಕೆ ಮೀಸಲಾದ ನೊಬೆಲ್ ಬಹುಮಾನ ದೊರಕಿದೆ. ಕಾರ್ಬನ್ನಿನ ಈ ಭಿನ್ನ ರೂಪಕ್ಕೆ ಬಕ್‌ಮಿನ್‌ಸ್ಟರ್ ಫುಲರೀನ್ ಅನ್ನುತ್ತಾರೆ. ಇದರ ಅಣುವಿನಲ್ಲಿ ೬೦ ಕಾರ್ಬನ್ನಿನ ಪರಮಾಣುಗಳು ಇರುವುದರಿಂದ ಇದಕ್ಕೆ ರಾಸಾಯನಿಕವಾಗಿ C-೬೦ ಎಂದು ಕರೆಯುತ್ತಾರೆ.

ಇದರ ರಾಸಾಯನಿಕ ರಚನೆ ವಜ್ರ ಮತ್ತು ಗ್ರಾಫೈಟುಗಳ ರಚನೆಗಿಂತ ತೀರ ಭಿನ್ನವಾಗಿದೆ. ಇದರಲ್ಲಿ ೬೦ ಕಾರ್ಬನ್ನಿನ ಪರಮಾಣುಗಳು ಒಂದಕ್ಕೊಂದು ಬಂಧವಾಗಿ ಕಾಲ್ಚೆಂಡಿನೋಪಾದಿಯ ಪಂಜರ ರೂಪದಲ್ಲಿವೆ. ಈ ಕಾಲ್ಚೆಂಡಿನ ಪಂಜರಕ್ಕೆ ೩೨ ಮುಖಗಳಿದ್ದು ಅವುಗಳ ಪೈಕಿ ೨೦ ಷಟ್ಕೋನಾಕೃತಿಯವು ೧೨ ಪಂಚಕೋನಾಕೃತಿಯವು. ಇಂಥ ಒಂದು ರಚನೆ ಮಾತ್ರ ಅತ್ಯಂತ ಸಮ್ಮಿತಿಯ ಹಾಗೂ ಸ್ಥಿರವಾದ ಗೋಲಾಕಾರವಾಗಿರಲು ಸಾಧ್ಯ ಎಂದು ಅಮೆರಿಕದ ಸುಪ್ರಸಿದ್ಧ ವಾಸ್ತುಶಿಲ್ಪಿ ಬಕ್‌ಮಿನ್‌ಸ್ಟರ ಫುಲರ್ ಬಹಳ ಹಿಂದೆಯೇ ಹೇಳಿದ್ದ. C-೬೦ ಇದರ ರಚನೆ ಮತ್ತು

ಸ್ಥಿರತೆ ಈತ ಕಟ್ಟಿದ ಷಟ್ಕೋನಾಕೃತಿಯ ಹಾಗೂ ಪಂಚಕೋನಾಕೃತಿಯ ರಚನೆಗಳನ್ನೊಳಗೊಂಡ ಭದ್ರ ಗುಮ್ಮಟಗಳ ರಚನೆಗೆ ಹೋಲುತ್ತಿದುದರಿಂದ ಇದಕ್ಕೆ ಬಕ್‌ಮಿನ್‌ಸ್ಟರ್ ಫುಲರೀನ್ ಅನ್ನುವ ಹೆಸರು.

C–೬೦ ತನ್ನ ಸುಂದರ ಸಮ್ಮಿತಿಯ ಗೋಲಾಕೃತಿಯಿಂದಾಗಿ ಅಷ್ಟೇ ಅಲ್ಲ ಅದೊಂದು ಅಲೌಕಿಕ ಉಪಯೋಗೀ ವಸ್ತುಗಳನ್ನು ಕೊಡಬಲ್ಲ ಅಣು ಎಂದು ಮಹತ್ವವನ್ನು ಪಡೆದಿದೆ. ಏಕೆಂದರೆ ವಜ್ರ ಹಾಗೂ ಗ್ರಾಫೈಟು ಒಂದೇ ಧಾತುವಿನ ಎರಡು ಭಿನ್ನರೂಪಗಳಾಗಿದ್ದರೂ ಅವುಗಳ ಗುಣಧರ್ಮಗಳು ತದ್ವಿರುದ್ಧವಾಗಿವೆ. ವಜ್ರ ಅತ್ಯಂತ ಕಠಿಣ, ಬಿಳಿ ಮತ್ತು ವಿದ್ಯುತ್ ನಿರೋಧಕವಾದರೆ ಗ್ರಾಫೈಟು ಅತ್ಯಂತ ಮೃದು, ಕಪ್ಪಾದ ವಿದ್ಯುದ್ವಾಹಕವಾಗಿದೆ. ಅಂದ ಬಳಿಕ ಮೂರನೇಯ ಭಿನ್ನರೂಪಕ್ಕೆ ವಿಸ್ಮಯಕಾರಕ ಹಾಗೂ ಅಲೌಕಿಕ ಗುಣಧರ್ಮಗಳು ಇರಬಹುದು ಎಂದು ಊಹಿಸುವಲ್ಲಿ ತಪ್ಪೇನಿಲ್ಲ.

ಸ್ಮಾಲೆ, ಕ್ರೊಟೊ ಮತ್ತು ಕರ್ಲ್ ಅವರ ಉದ್ದೇಶ C–೬೦ ನ್ನು ಕಂಡುಹಿಡಿಯುವುದು ಆಗಿರಲಿಲ್ಲ. ಅದೊಂದು ಆಕಸ್ಮಿಕ ಆವಿಷ್ಕಾರ. ನಕ್ಷತ್ರಗಳ ಮೋಡ ಹಾಗೂ ಧೂಳಿನ ಕಣಗಳಲ್ಲಿರುವ ಸರಪಳಿಯಂತೆ ಉದ್ದವಾದ ಅಣುಗಳು ಮತ್ತು ಅವುಗಳ ಗುಚ್ಛಗಳು ಅಲ್ಲಿ ಹೇಗೆ ತಯಾರಾಗುತ್ತವೆ ಅನ್ನುವುದನ್ನು ತಿಳಿದುಕೊಳ್ಳುವುದು ಅವರ ಉದ್ದೇಶವಾಗಿತ್ತು. ಅಂತರ್ನಕ್ಷತ್ರಗಳವಾತಾವರಣವನ್ನು ಪ್ರತಿಕೃತಿಗಿಳಿಸಲು ಲೇಸರ್ ಸೂಪರ್‌ಸಾನಿಕ್ ಕ್ಲಸ್ಟರ್ ಬೀಮ್ ಎನ್ನುವ ಅತ್ಯಂತ ದುಬಾರಿಯ ಸೂಕ್ಷ್ಮತರ ಮತ್ತು ಕ್ಲಿಷ್ಟವಾದ ಉಪಕರಣದಲ್ಲಿ ಲೇಸರ್ ಕಿರಣದಿಂದ ಗ್ರಾಫೈಟನ್ನು ಬಾಷ್ಪವನ್ನಾಗಿ ಮಾಡಿ ತಮ್ಮ ಪ್ರಯೋಗ ಮಾಡುವಾಗ ದೊರೆತದ್ದು C–೬೦. ಆದರೆ ಪ್ರಕೃತಿಯಲ್ಲಿ ಮಿಲಿಯನ್‌ಗಟ್ಟಲೆ ವರ್ಷದಿಂದಲೂ ಭೂಮಿಯ ಉದರದಲ್ಲಿ ಇರುತ್ತ ಬಂದಿದೆ ಎಂದು ಈಗ ತಿಳಿದುಬಂದಿದೆ.

ಇದರ ಅಧಿಕತಮ ರಾಸಾಯಕ ಸ್ಥಿರತೆ ಹಾಗೂ ಅದರ ಬಲುರೀತಿಯ ರಾಸಾಯನಿಕ ರಚನೆ ಪ್ರಪಂಚದ ವಿಜ್ಞಾನಿಗಳ ಕುತೂಹಲ ಕೆರಳಿಸಿತು. ಆದರೆ ಅದರ ಬಗ್ಗೆ ಅಭ್ಯಸಿಸುವದು ಅಸಾಧ್ಯ ಮಾತಾಗಿತ್ತು. ಏಕೆಂದರೆ ಅದನ್ನು ಪಡೆಯಲು ಅತ್ಯಂತ ದುಬಾರಿಯ ಉಪಕರಣ ಬೇಕಾಗಿತ್ತು. ಪ್ರಪಂಚದ ಎರಡೇ ಎರಡು ಪ್ರಯೋಗಶಾಲೆಯಲ್ಲಿದ್ದ ಈ ಉಪಕರಣಗಳು ಅವುಗಳ ಸ್ವಂತ ತಯಾರಿಕೆಯ ಸ್ವತ್ತಾಗಿದ್ದವು, ಅಷ್ಟಾಗಿ ಅದರಿಂದ ದೊರಕುವ C–೬೦ ಒಂದು ಕಣದಷ್ಟು ಮಾತ್ರ. ಈ ರೀತಿ ವಂಚಿತರಾದ ಪ್ರಪಂಚದ ವಿಜ್ಞಾನಿಗಳಿಗೆ ಕ್ರೇಟ್‌ಸ್ಮರ ಎಂಬ ವಿಜ್ಞಾನಿ ವರದಾನವಾಗಿ ಬಂದ. ಆತ ಎರಡು ಗ್ರಾಫೈಟ ಎಲೆಕ್ಟ್ರೋಡುಗಳ ಮಧ್ಯ ಕಿಡಿ ಹೊರಡಿಸಿದಾಗ ಹುಟ್ಟಿದ ಕಾಡಿಗೆಯಲ್ಲಿ ಗ್ರಾಮ್ ಪ್ರಮಾಣದಲ್ಲಿ C–೬೦ ನ್ನು ತಯಾರಿಸುವ ವಿಧಾನವನ್ನು ೧೯೯೦ ರಲ್ಲಿ ಪ್ರಕಟಿಸಿದ. ಈ ಸಂಶೋಧನೆಯ ಪ್ರಕಟಣೆಯ ಎರಡೇ ವರುಷಗಳಲ್ಲಿ ರಸಾಯನ ಶಾಸ್ತ್ರಜ್ಞರು ಅದರ ವ್ಯುತ್ಪನ್ನಗಳನ್ನು ತಯಾರಿಸಿದರು. ಭೌತ ವಿಜ್ಞಾನಿಗಳು ಅವುಗಳ ಗುಣಲಕ್ಷಣಗಳನ್ನು ಕಂಡುಹಿಡಿದರು. ವಸ್ತುರಚನಾ ವಿಜ್ಞಾನಿಗಳು

ಮಾನವನಿಗೆ ಉಪಯೋಗವಾಗಬಲ್ಲ ವಸ್ತುಗಳನ್ನು ಇದರಿಂದ ತಯಾರಿಸುವಲ್ಲಿ ನಿರತರಾದರು. ಈ ಕೇವಲ ಎರಡು ವರುಷಗಳ ಅವಧಿಯಲ್ಲಿ ಇದೊಂದೇ ಅಣುವಿನ ಬಗೆಗೆ ೧೩೫೦ ಸಂಶೋಧನಾ ಪತ್ರಗಳು ಪ್ರಕಟವಾಗಿವೆ ಎನ್ನುವುದನ್ನು ಗಮನಿಸಿದರೆ ವಿಜ್ಞಾನಿಗಳು ಈ ಅಣುವಿನ ಬಗೆಗೆ ಎಷ್ಟು ಆಸಕ್ತರಾಗಿದ್ದರು ಎನ್ನುವದನ್ನು ಅರಿಯಬಹುದು.

ಕಿತ್ತಳೆ ತುಂಬಿದ ಪೆಟ್ಟಿಗೆಯಲ್ಲಿ ಕಿತ್ತಳೆ ಹಣ್ಣುಗಳ ಮಧ್ಯ ಪೊಳ್ಳು ಸ್ಥಳ ಇರುವಂತೆ ಗೋಲಾಕಾರದ ಈ ಅಣುಗಳ ಸಮುದಾಯದಲ್ಲಿ ಸಹ ಪೊಳ್ಳು ಸ್ಥಳ ಉಂಟು. ಈ ಪೊಳ್ಳಿನಲ್ಲಿ ಲೋಹಧಾತುಗಳನ್ನು ಸೇರಿಸುವ ಕಲೆಯನ್ನು ವಿಜ್ಞಾನಿ ಈಗ ಸಾಧಿಸಿದ್ದಾನೆ. ಇಂಥ ಪೊಳ್ಳಿನಲ್ಲಿ ರುಬೀಡಿಯಮ್ ಸೀಜಿಯಮ್ ಸೇರಿಸಿದಾಗ ಅವು ಅತಿವಾಹಕದಂತೆ ವರ್ತಿಸುವದು ಕಂಡುಬಂದಿದೆ. ಗೋಲಾಕಾರದ C–೬೦ ಪರಮಾಣುವಿನ ಪಂಜರದ ಪೊಳ್ಳು ಭಾಗದ ವ್ಯಾಸ ೭ A° ಇರುವುದರಿಂದ ಈ ಸ್ಥಳದಲ್ಲಿ ೫ A° ವ್ಯಾಸ ಇರುವ ಯಾವುದೇ ಲೋಹದ ಪರಮಾಣುವನ್ನು ಸೇರಿಸಲು ಕರಗತ ಮಾಡಿಕೊಂಡಿದ್ದಾರೆ. C-೬೦ ರ ಗರ್ಭದಲ್ಲಿ ರೇಡಾನ್‌ನನ್ನು ಸೇರಿಸಿ ಅದನ್ನು ಕ್ಯಾನ್ಸರ್ ಪೀಡಿತ ಸ್ಥಳಕ್ಕೇನೆ ನೇರವಾಗಿ ಒಯ್ಯುವ ಸಾಧ್ಯತೆ ಇದೆ. ಇದರಿಂದ ವಿಕಿರಣದೋಷ ಕಡಿಮೆ ಮತ್ತು ಕ್ಯಾನ್ಸರ ರೋಗ ಬೇಗ ಗುಣವಾಗಬಲ್ಲದು ಎಂದು ಊಹಿಸಲಾಗಿದೆ.

ಸಾವಯುವ ರಸಾಯನ ಶಾಸ್ತ್ರಜ್ಞರು C–೬೦ ಅನೇಕ ವ್ಯುತ್ಪನ್ನಗಳನ್ನು ತಯಾರಿಸಿದ್ದಾರೆ ಅಷ್ಟೇ ಅಲ್ಲ ೭೦.೮೦ಹೀಗೆ ಬೇರೆ ಬೇರೆ ಸಂಖ್ಯೆಯ ಕಾರ್ಬನ್ನಿನ ಪಂಜರ ಅಣುಗಳನ್ನು ತಯಾರಿಸಿ ಫುಲರೀನ ರಸಾಯನಶಾಸ್ತ್ರ ಎಂಬ ಹೊಸ ವಿಷಯದ ಬಾಗಿಲನ್ನೇ ತೆರೆದು ಬಿಟ್ಟಿದ್ದಾರೆ. ಈಗ ಬಕಮಿನ್‌ಸ್ಟರ ಫುಲರೀನ ಮಾತ್ರ ಫುಲರೀನ್ ಅಲ್ಲ. ಕೇವಲ ಕಾರ್ಬನ್ನುಳ್ಳ ಪಂಜರ ರಚನೆಯ ಎಲ್ಲ ಅಣುಗಳಿಗೂ ಫುಲರೀನುಗಳು ಎಂಬ ಹೆಸರು ಕೊಟ್ಟಿದ್ದಾರೆ. ಫುಲರೀನನ್ನು ಪಾಲಿಮರೀಕರಿಸಿ ಮುತ್ತಿನ ಸರದಂತೆ ಉದ್ದನೆಯ ಹಾಗೂ ಬಂಗಾರದ ಸರದಲ್ಲಿ ಜೋತು ಬಿದ್ದ ಮುತ್ತಿನ ಆಭರಣದಂತಹ ರೂಪದಲ್ಲಿ ಪಾಲಿಮರುಗಳನ್ನು ತಯಾರಿಸಿದ್ದಾರೆ. C-೬೦ ನ್ನೊಳಗೊಂಡ ಔಷಧ ವಸ್ತುಗಳೂ ತಯಾರಾಗಿವೆ. ಕ್ಸೀನಾನ್ ಬದಲಾಗಿ C–೬೦ ನ್ನು ರಾಕೆಟ್ ಇಂಧನ ಆಗಿ ಬಳಸುವ ಪ್ರಯೋಗ ಸಫಲವಾಗುವ ಸಾಧ್ಯತೆ ಇದೆ.

ಈ ಸಂಶೋಧನೆಗೆ ಒಂದು ಕಾಸನ್ನೂ ಕೊಡದೇ ಇದ್ದ ಸಂಘ, ಸಂಸ್ಥೆ, ಆಯೋಗ ಕಂಪನಿಗಳು ಇಂದು ಬಿಲಿಯನ್ ಗಟ್ಟಲೆ ಡಾಲರ್ ತೊಡಗಿಸಿ ಫುಲರೀನುಗಳ ಲಾಭದಾಯಕ ಬಳಕೆಗಾಗಿ ಸಂಶೋಧನೆ ನಡೆಸಿದ್ದಾರೆ. ಇನ್ನೂ ಶೈಶವಾವಸ್ಥೆಯಲ್ಲಿರುವ ಈ ಫುಲರೀನಿನ ಬಾಲ್ಯ ಹಾಗೂ ಪ್ರಬುದ್ಧತೆಯನ್ನು ವಿಜ್ಞಾನಿಗಳು ಕಾತರದಿಂದ ಕಾಯ್ದು ನೋಡುತ್ತಿದ್ದಾರೆ.

ಅಮೆರಿಕೆಯಲ್ಲೊಂದು ಹೊಸ ಬೆಳವಣಿಗೆ

ಗೋಪಾಲ ಆಶ್ರಿತ
೬-೫-೪೨, 'ರಮಾನಿಲಯ'
ಜವಾಹರನಗರ, ರಾಯಚೂರು-೫೮೪೧೦೧

ಈಗಲೂ ಭೇದಗಳಿವೆಯಾದರೂ ಇಲ್ಲಿ ಸಾಕಷ್ಟು ನಾಟಕೀಯ ಬದಲಾವಣೆಗಳಾಗಿವೆ.

ವಾಷಿಂಗ್‌ಟನ್ನಿನ ಹತ್ತಿರದ ಪೆರ್ರಿವುಡ್ಡ ಉಪನಗರ ಮಧ್ಯಮ ವರ್ಗದವರಿಂದ ತುಂಬಿಕೊಂಡಿದೆ. ಹಚ್ಚನೆಯ ಬಯಲಿರುವ ದುಬಾರಿ ಮನೆಗಳ ಜೊತೆಗೆ ಎಲ್ಲ ನಾಗರಿಕ ಸೌಲಭ್ಯಗಳಿರುವುದೇ ಇದರ ಆಕರ್ಷಣೆ. ಇಲ್ಲಿ ಒಂದು ಬಾಸ್ಕೆಟಬಾಲ್ ಕೋರ್ಟ ಕೂಡಾ ಇದೆ.

ವಾಷಿಂಗ್ಟನ್ನಿನ ಬಡ, ಕರಿಯುವಕರು ಇಲ್ಲಿಗೆ ಬರಹತ್ತಿದಾಗ, ಅವರನ್ನು ಯಾರೂ ಸ್ವಾಗತಿಸಲಿಲ್ಲ. ವಸತಿ ಒಡೆಯರ ಸಂಘದವರು ತಮ್ಮ ರಕ್ಷಣೆಗಾಗಿ ಪೋಲೀಸರನ್ನು ನೇಮಿಸಿಕೊಂಡರು. ಈ ಪೋಲೀಸರು ಬಾಸ್ಕೆಟಬಾಲ್ ಆಟಗಾರರು ಆ ಭಾಗಕ್ಕೆ 'ಸೇರಿದ' ಬಗ್ಗೆ ಪ್ರಶ್ನಿಸುತ್ತಿದ್ದರು. ಸಂಘದವರ ಒಂದು ಸಮಾಚಾರ ಪತ್ರದಲ್ಲಿ ತಮ್ಮ ಬಾಸ್ಕೆಟಬಾಲ್ ಕೋರ್ಟನಲ್ಲಿ 'ಕಣ್ಣುರೇಸರು' ಆಗುತ್ತಿರುವ ಬಗ್ಗೆ ಬರೆದರು.

ಆದರೆ ಈ ಕಥೆ ಒಂದು ವಿಸ್ಮಯಕರ ತಿರುವನ್ನು ಪಡೆದಿದೆ. ಇಲ್ಲಿನ ವಸತಿಗಳ ಒಡೆಯರಲ್ಲೂ ಅನೇಕರು ಕರಿಯರಿದ್ದಾರೆ. "ಈ ತರುಣರಿಂದ ನಮಗೆ ಸಮಸ್ಯೆಯಾಗಿದೆ. ಆದರೆ ದುರ್ದೈವದಿಂದ ಅವರು ಕೂಡಾ ನಮ್ಮವರೆ. ಆದ್ದರಿಂದ ಏನುಮಾಡುವುದು ?" ಎಂದು ಒಬ್ಬ ನಿವಾಸಿ ವರದಿಗಾರನಿಗೆ ಹೇಳಿದ.

ವಸತಿ ಒಡೆಯರ ಸಂಘ, ಬಾಸ್ಕೆಟಬಾಲ್ ಆಟಗಾರರ ಜನಾಂಗದ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಈ ಆಟಗಾರರು ಹೊರಗಿನವರು –ಒಳನುಗ್ಗುವವರು–ಎಂಬುದೇ ಮುಖ್ಯ ಅಂಶವಾಗಿತ್ತು. "ಇಲ್ಲಿ ವಾಸಿಸದ ಜನರು ನಾವು ಇಲ್ಲಿ ಹೇಗಿರುತ್ತೇವೆಂಬುದರ ಬಗ್ಗೆ ಗಮನ ಹರಿಸುವದಿಲ್ಲ. ಹೊಸದಾಗಿ ಏಳುತ್ತಿರುವ ಮನೆಗಳನ್ನು ನೋಡಿ ಆಕರ್ಷಿತರಾಗುತ್ತಾರೆ—" ಎಂಬುದು ಇನ್ನೊಬ್ಬ ನಿವಾಸಿಯ ಅಭಿಪ್ರಾಯ.

ಇದೊಂದು ಪರಿಣಾಮಕಾರಿ ಬೆಳವಣಿಗೆ. ಹೆಚ್ಚು ಕಡಿಮೆ ಅಮೆರಿಕೆಯ ಕರಿಯ

ಮೂಲ : ೧೯೯೧ರ ಮೇ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಅಬಿಗೇಲ್ ಮತ್ತು ಥರ್ನ್‌ಸ್ಟ್ರಾಮ್ ಅವರ "ಗುಡ್ ನೀವ್ಸ್ ಎಬೌಟ್ ಅಮೆರಿಕನ್ ರೇಷಿಯಲ್ ಪ್ರೊಗ್ರೆಸ್" ಲೇಖನ.

ರೆಲ್ಲರೂ ಕೊಳಚೆ ಪ್ರದೇಶಗಳಲ್ಲಿರುತ್ತಾರೆಂಬುದು ಅನೇಕರ ಅಭಿಪ್ರಾಯ. ಆದರೆ ಇದು ನಿಜವಲ್ಲ. ಇಂದು ವಾಷಿಂಗ್ಟನ್ ಮಾತ್ರವಲ್ಲದೆ, ಅಮೆರಿಕೆಯ ಬಹಳಷ್ಟು ಪಟ್ಟಣಗಳಲ್ಲಿ ಸುಂದರ ಉಪನಗರಗಳಲ್ಲಿ ಅನೇಕ ಕರಿಯರು ಮನೆಗಳ ಒಡೆಯರಾಗಿದ್ದಾರೆ.

ಅಮೆರಿಕೆಯಲ್ಲಿ ಜನಾಂಗೀಯ ಭೇದದ ಬಗ್ಗೆ ಜನರಿಗೆ ಇರುವ ತಪ್ಪುಕಲ್ಪನೆಗೆ ಮಾಧ್ಯಮಗಳೇ ಕಾರಣ. "ದಿವಾಲ್ ಸ್ಟ್ರೀಟ ಜರ್ನಲ್" ವರದಿಗಾರ, ಕರಿಯರ ಮತ್ತು ಬಿಳಿಯರ ಮಧ್ಯದ ಆರ್ಥಿಕ ಬಿರುಕು ಅಗಲವಾಗಿದೆ ಎಂದು ಬರೆದಿದ್ದಾನೆ. ಆದರೆ ಆದಕ್ಕೆ ಸಾಕ್ಷ್ಯಾಧಾರಗಳಿಲ್ಲ. ಜನಾಂಗೀಯ ಸಂಬಂಧಗಳನ್ನು ಕುರಿತು ಚಿತ್ರಿಸಿದ್ದು ಇನ್ನಷ್ಟು ನಿರಾಶಾದಾಯಕವಾಗಿದೆ. ಉದಾರಣೆಗಾಗಿ ಒಂದು ಅಧ್ಯಯನದ ಪ್ರಕಾರ ಒ.ಜೆ. ಸಿಂಪ್ಸನ್ ಹತ್ಯಾ ಪ್ರಕರಣದಲ್ಲಿ ತೀರ್ಪನ್ನು ಶೇ. ೮೫ ಭಾಗ ಕರಿಯರು ಹಾಗೂ ಕೇವಲ ಶೇ. ೩೫ ಭಾಗ ಬಿಳಿಯರು ಸರಿಯೆಂದರು. ಜನಾಂಗದ ಅಧಾರದ ಮೇಲಿನ ಈ ಭಿನ್ನ ಪ್ರತಿಕ್ರಿಯೆ ಮುಖ್ಯಸಮಾಚಾರವಾಗಿತ್ತು. ಮಾಧ್ಯಮದ ಹೇಳಿಕೆಯ ಪ್ರಕಾರ, ಈಗಲೂ ಬಿಳಿಯರು ಮತ್ತು ಕರಿಯರು ಬೇರೆ ಬೇರೆಯಾಗಿದ್ದು ಅವರ ಮಧ್ಯೆ ವೈಷಮ್ಯವಿದೆ. ಈ ಭಿನ್ನತೆಯೇ ಪತ್ರಿಕೆಯವರಿಗೆ ನಿತ್ಯವಸ್ತು; ಜನಾಂಗೀಯ ಭೇದ ಇನ್ನೊಂದು.

ಜನಾಂಗೀಯ ಭೇದ ಸಂಯುಕ್ತ ಪ್ರಾಂತ್ಯಗಳಿಂದ ಮಾಯವಾಗಿಲ್ಲ. ಎಂಬುದು ಸತ್ಯ ಸಂಗತಿ, ಆದರೆ ಜನಾಂಗೀಯ ಸಂಬಂಧ ಮಾತ್ರ ಸುಧಾರಿಸುವ ಸಾಧ್ಯತೆ ಕಾಣುತ್ತಿದೆ. ಇಲ್ಲಿ ಕಾಣುತ್ತಿರುವ ಗಂಭೀರ ಅಸಮಾನತೆಗೆ ವರ್ಣಭೇದಕ್ಕಿಂತಲೂ, ಇವರ ಶೈಕ್ಷಣಿಕ ಸಾಧನೆಗಳಲ್ಲಿನ ಬಿರುಕು, ಅವಿವಾಹಿತ ಮಾತೃತ್ವ ಮತ್ತು ಅಪರಾಧಗಳೇ ಕಾರಣವಾಗಿವೆ. ಕೆಟ್ಟದ್ದನ್ನು ಉತ್ಪ್ರೇಕ್ಷಿಸಲಾಗುತ್ತಿದೆ, ಒಳ್ಳೆಯದನ್ನು ಕಡೆಗಣಿಸಲಾಗುತ್ತಿದೆ. ಈಗ ಕಂಡುಬರುತ್ತಿರುವ ಮೂರು ಪ್ರವೃತ್ತಿಗಳನ್ನು ಗಮನಿಸೋಣ.

ಕರಿಯ ಮಧ್ಯಮವರ್ಗವೊಂದರ ಆಗಮನ

ನ್ಯೂಯಾರ್ಕಿನ ವಾಲ್ಡೊರ್ಫ್‌–ಅಸ್ಟೋರಿಯಾ ಹೋಟೆಲ್ಲಿನಲ್ಲಿ ಆಂಡ್ರಿವ್ ಯಂಗ್‌ನನ್ನು ಅಲ್ಲಿನ ಕೆಲಸದಾಳೆಂದು ಜನರು ತಪ್ಪಾಗಿ ಗ್ರಹಿಸದ್ದನ್ನು ಅವನು ಮರೆತಿಲ್ಲ. ಸಂಯುಕ್ತರಾಷ್ಟ್ರ ಸಂಸ್ಥೆಗೆ, ಸಂಯುಕ್ತ ಅಮೆರಿಕೆಯ ರಾಜದೂತನಾಗಿದ್ದ ಯಂಗನನ್ನು ಗುರುತಿಸುವಲ್ಲಿ ಈ ರೀತಿ ತಪ್ಪೆಸಗಿದ್ದು ಕೋಪ ತರುವಂಥ ಪ್ರಸಂಗವಲ್ಲವೆ?

ಅದರೆ ಅಮೆರಿಕೆಯ ಅನೇಕ ಕರಿಯರು ಕೆಲಸದಾಳಾಗಿ ಅಥವಾ ಅದಕ್ಕೆ ಸಮನಾಗಿ ದುಡಿಯುತ್ತಿದ್ದುದು ಹಳೆಯ ವಿಷಯವೇನಲ್ಲ. ಎರಡನೇ ಜಾಗತಿಕ ಯುದ್ಧಕ್ಕಿಂತ ಮೊದಲು ಕೇವಲ ಶೇ. ೫ ಭಾಗ ಕರಿಯ ಗಂಡಸರು ಗೌರವಾನ್ವಿತ ಚಾಕರಿ ಮಾಡುತ್ತಿದ್ದರು. ಪ್ರತಿ ಹತ್ತು ಆಫ್ರಿಕೆಯ ಅಮೆರಿಕನ್ ಮಹಿಳೆಯರಲ್ಲಿ ಆರು ಮಹಿಳೆಯರು ಪರಿಚಾರಿಕೆಯರಾಗಿ ದುಡಿಯುತ್ತಿದ್ದರು.

೧೯೪೦ರಲ್ಲಿ ಅಮೆರಿಕೆಯಲ್ಲಿ ನೆಲಸಿದ ಅಫ್ರಿಕನ್ನರಲ್ಲಿ ೧೦೦೦ ಜನರು ನ್ಯಾಯವಾದಿ

ಗಳಾಗಿದ್ದರು. ೧೯೮೫ರ ಸಮಯಕ್ಕೆ ಅವರ ಸಂಖ್ಯೆ ಒಟ್ಟು ನ್ಯಾಯವಾದಿಗಳ ಶೇ. ೪ರಷ್ಟಾಗಿ ೩೨೦೦೦ಕ್ಕೂ ಮೀರಿತ್ತು.

ಕರಿಯರು ಮೊದಲಿಗಿಂತ ಹೆಚ್ಚು ಸಂಪಾದಿಸುತ್ತಿದ್ದಾರೆ

ಇಂದು ಹೆಚ್ಚು ಕಡಿಮೆ ಮುಕ್ಕಾಲರಷ್ಟು ಆಫ್ರಿಕೆಯ ಅಮೆರಿಕನ್ನರ ಆದಾಯ ಬಡತನ ರೇಖೆಗಿಂತ ಮೇಲಿದೆ. ಬಹುತೇಕ ಜನರು ಮಧ್ಯಮ ವರ್ಗದವರು, ೧೯೪೦ರಲ್ಲಿ ಪ್ರತಿ ನೂರು ಕುಟುಂಬಗಳಲ್ಲಿ ಒಂದು ಕುಟುಂಬಕ್ಕೆ ಮಾತ್ರ ಮಧ್ಯಮವರ್ಗದ ಆದಾಯವಿತ್ತು. ಆದರೆ ೧೯೮೫ರಲ್ಲಿ ಪ್ರತಿ ನೂರಕ್ಕೆ ೪೯ ಕುಟುಂಬಗಳು ಈ ಮಟ್ಟಕ್ಕೆ ಏರಿದ್ದವು. ಅದಲ್ಲದೆ ಶೇ. ೪೦ಕ್ಕಿಂತ ಹೆಚ್ಚು ಕುಟುಂಬಗಳು ಈಗ ಸ್ವಂತ ಮನೆ ಹೊಂದಿವೆ. ಇದೊಂದು ದೊಡ್ಡ ಬದಲಾವಣೆ.

ಒಂದು ಮಾದರಿ ಬಿಳಿಯ ಕುಟುಂಬ ಈಗಲೂ ಒಂದು ಕರಿಯ ಕುಟುಂಬಕ್ಕಿಂತ ಹೆಚ್ಚು ಸಂಪಾದಿಸುತ್ತದೆ. ಅವರಲ್ಲಿ ಹೆಚ್ಚಾಗಿ ಎರಡು ವೇತನಗಳ ಸಾಧ್ಯತೆ ಇರುತ್ತದೆ. ಆದರೆ ನಾವು ಕೇವಲ ವಿವಾಹಿತ ಜೋಡಿಗಳನ್ನು ಗಮನಕ್ಕೆ ತೆಗೆದು ಕೊಂಡಾಗ (ಹೆಚ್ಚಾಗಿ ಮಧ್ಯಮ ವರ್ಗದ ಜೋಡಿಗಳು) ಬಿಳಿಯರ ಮತ್ತು ಕರಿಯರ ಆದಾಯದ ಮಧ್ಯದ ವ್ಯತ್ಯಾಸ ಶೇ. ೧೩ಕ್ಕಿಳಿಯುತ್ತದೆ. ಈ ವ್ಯತ್ಯಾಸಕ್ಕೆ ಕಾರಣ ವಿಷ್ಟೆ. ಪದವೀಧರರಿಗೆ ಹೆಚ್ಚಿನ ವೇತನ ದೊರೆಯುತ್ತದೆ. ಕರಿಯರಲ್ಲಿ ಪದವಿಧರರ ಪ್ರಮಾಣ ಬಹಳ ಕಡಿಮೆ ಇದೆ. ಕರಿಯರ ಸಂಖ್ಯೆ ಹೆಚ್ಚಿರುವ ಸಂಯುಕ್ತ ಅಮೆರಿಕೆಯ ದಕ್ಷಿಣ ಭಾಗದಲ್ಲಿ ನೀಡಲಾಗುವ ವೇತನ ಕಡಿಮೆಯಾಗಿದೆ.

೧೯೬೦ರ ದಶಕದ ಮಧ್ಯದಲ್ಲಿ ನಗರಗಳಲ್ಲಾದ ಜನಾಂಗೀಯ ಗಲಭೆಗಳ ಕಾರಣಗಳನ್ನು ಕಂಡುಹಿಡಿಯಲು ಅಮೆರಿಕೆಯ ಸರಕಾರ ಒಂದು ವಿಚಾರಣಾ ಆಯೋಗವನ್ನು ನೇಮಿಸಿತು. ಅಮೆರಿಕೆಯ ಭವಿಷ್ಯ 'ಅತಿ ಹೆಚ್ಚುತ್ತಿರುವ ಪ್ರತ್ಯೇಕತೆ' ಯಿಂದಾಗಿ—ಕರಿಯರ ಕೇಂದ್ರಗಳಾದ ಪಟ್ಟಣಗಳು ಬಿಳಿಯರನ್ನೇ ಹೊರಗಿಡುವ-ವಿಪತ್ತು ಎದುರಿಸಬೇಕಾದೀತು. ಪ್ರತ್ಯೇಕತೆಯ ಬಿರುಗಾಳಿ ದೇಶವನ್ನೇ ಬೇರ್ಪಡಿಸೀತೆಂದು ತನ್ನ ವರದಿಯಲ್ಲಿ ಹೇಳಿತ್ತು. ಬಿಳಿಯರು ಒಳಭಾಗದ ಪಟ್ಟಣಗಳನ್ನು ಬಿಟ್ಟು ಉಪನಗರಗಳ ಕಡೆ ಸಾಗುತ್ತಿರುವುದೇನೊ ನಿಜ. ಆದರೆ ಕರಿಯರು ಇದಕ್ಕೆ ಹೊರತಾಗಿಲ್ಲ. ಉಪನಗರಗಳ ನಿವಾಸಿಗಳಲ್ಲಿ ಹಳೆಯ ಪೀಳಿಗೆಯ ಕರಿಯರ ಜನಸಂಖ್ಯೆ ಸುಮಾರು ಮೂರರಷ್ಟು ಹೆಚ್ಚಾಗಿದೆ. ಉದಾರಣೆಗೆ, ೧೯೭೦ರಲ್ಲಿ ಆಟ್ಲಾಂಟಾ ನಗರದಲ್ಲಿ ಶೇ. ೨೭ ಭಾಗ ಕರಿಯರು ಶೇ. ೮೫ ಭಾಗ ಬಿಳಿಯರ ಜೊತೆಗೆ ಉಪನಗರಗಳಲ್ಲಿ ವಾಸಿಸುತ್ತಿದ್ದರು. ೧೯೯೦ರ ಸಮಯಕ್ಕೆ ಅಲ್ಲಿ ಶೇ. ೬೪ ಭಾಗ ಕರಿಯರು ಶೇ. ೯೪ ಭಾಗ ಬಿಳಿಯರ ಜೊತೆಗೆ ವಾಸಿಸಹತ್ತಿದ್ದರು.

ಎಲ್ಲ ಕರಿಯರ ನೆರೆಹೊರೆ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗಿ ನೆಲೆಸಿದ ತೋರಿಕೆಯ ಐಕ್ಯತೆ ಇದಲ್ಲ. ಈ ಅಲುಗಾಟದಿಂದಾಗಿ ಆಫ್ರಿಕೆಯ ಅಮೆರಿಕನ್ನರು ಕರಿಯರ ಒಂದು ನೆರೆಹೊರೆಯಿಂದ ಇನ್ನೊಂದು ಕಡೆಗೆ ಬಂದಿದ್ದಾರೆ. ಇದ

ರಿಂದಾಗಿ ಭಾವೈಕ್ಯ ಹೆಚ್ಚಾಗಿದೆ. ೧೯೯೪ರ ಸಮಯಕ್ಕೆ ಪ್ರತಿ ಹತ್ತು ಜನರಲ್ಲಿ ೬ ಜನ ಬಿಳಿಯರು ತಾವು ಕರಿಯರ ನೆರೆ ಹೊರೆಯಲ್ಲಿರುವುದಾಗಿ ಹೇಳಿದ್ದುಂಟು.

ವಾಸದ ಮನೆಯ ವಿನ್ಯಾಸಗಳು ಈಗಲೂ ಜನಾಂಗಕ್ಕೆ ಸಂಭಂಧಿಸಿದ್ದು ಕಂಡುಬಂದಿದೆ. ಆದರೂ ನೆರೆ ಹೊರೆಗಳು ಈಗ ಹೆಚ್ಚೆಚ್ಚು ಜನಾಂಗೀಯವಾಗಿ ಮಿಶ್ರಗೊಂಡಿವೆ. ವಾಸದ ಮನೆಯ ಪ್ರತ್ಯೇಕತೆ ಕಡಿಮೆಯಾಗುತ್ತಲಿದೆ.

ಇಳಿಮುಖವಾಗುತ್ತಿರುವ ಮತಾಂಧತೆ

೨ನೇ ಮಹಾಯುದ್ಧಕ್ಕಿಂತ ಮೊದಲು ಸ್ವೀಡನ್ನಿನ ಸಮಾಜಶಾಸ್ತ್ರಜ್ಞ ಗುನ್ನಾರ ಮಿಡರ್ಾಲ್ ಸಂಯುಕ್ತ ಪ್ರಾಂತಗಳಲ್ಲಿ ಓಡಾಡಿ ತಾನು ಬರೆಯಲಿದ್ದ ಆ್ಯನ್ ಅಮೆರಿಕನ್ ಡಿಲಿಮ ಎಂಬ ಗ್ರಂಥಕ್ಕೆ ಸಾಮಗ್ರಿ ಸಂಗ್ರಹಿಸಿದನು. ಅಮೆರಿಕೆಯ ಆದರ್ಶ ಮತ್ತು ಜನಾಂಗೀಯ ಆಚರಣೆಯ ಮಧ್ಯದ ಅಂತರವೇ ಈ ಪುಸ್ತಕದ ವಸ್ತು. ಒಂದು ಸಣ್ಣ ಊರಿನಲ್ಲಿ ಬಿಳಿಯರನ್ನು ಭೇಟಿಮಾಡಿ, ತಾನು ಆಫ್ರಿಕೆಯ--ಅಮೆರಿಕನ್ ಹಾಗೂ ಕರಿಯರ ಪಾಠಶಾಲೆಯ ಪ್ರಿನ್ಸಿಪಾಲನಾಗಿದ್ದ 'ಶ್ರೀಮಾನ್ ಜಿಮ್‌ಸ್ಮಿಥ್'ನನ್ನು ಎಲ್ಲಿ ಕಾಣಬಹುದೆಂದು ಕೇಳಿದಾಗ ಅವರೆಲ್ಲರೂ ತಮಗೆ ಅಂಥ ವ್ಯಕ್ತಿಯ ಪರಿಚಯವಿಲ್ಲವೆಂದರು. ಕೊನೆಗೂ ಮಿಡರ್ಾಲ್‌ಸ್ಮಿಥನನ್ನು ಹುಡುಕಿಕೊಂಡಾಗ ಅವನಿಗೆ ನಿಜಾಂಶ ತಿಳಿಯಿತು. ಕೇವಲ "ಜಿಮ್" ಎಂದು ಕೇಳಿದ್ದರೆ ಯಾರಾದರೂ ಗುರುತಿಸುತ್ತಿದ್ದರಂತೆ. ಆಫ್ರಿಕೆಯ ಅಮೆರಿಕನ್ನರನ್ನು 'ಶ್ರೀಮಾನ್' ಅಥವಾ 'ಶ್ರೀಮತಿ' ಎಂದು ಗೌರವಿಸಿ ಕರೆಯುವುದು ಸರಿಬರುತ್ತಿರಲಿಲ್ಲ.

ಈ ಮತಾಂಧತೆ ಕೇವಲ ಸಂಯುಕ್ತ ಪ್ರಾಂತಗಳ ದಕ್ಷಿಣ ಭಾಗಕ್ಕೆ ಸೀಮಿತವಾಗಿರಲಿಲ್ಲ. ೧೯೪೦ ರಲ್ಲಿ ನಡೆಸಲಾದ ಒಂದು ಅಧ್ಯಯನದಲ್ಲಿ "ನಿಗ್ರೊಗಳಿಗೂ ಬಿಳಿಯರಿಗೆ ದೊರೆಯುವಂತೆ ಯಾವುದಾದರೂ ಕೆಲಸ ದೊರೆಯಲು ಸಾಧ್ಯವೆ?" ಎಂದು ಕೇಳಲಾಗುತ್ತಿತ್ತು. ಬಹುತೇಕ ಬಿಳಿಯರು "ಯಾವುದೇ ತೆರನಾದ ಕೆಲಸವಿರಲಿ, ಬಿಳಿಯರಿಗೆ ಮೊದಲನೇ ಅವಕಾಶವಿರಬೇಕು" ಎಂದು ಉತ್ತರಿಸಿದ್ದರು.

ಆದರೆ ಇಂದು ಸಂಯುಕ್ತ ಪ್ರಾಂತಗಳಲ್ಲಿ ಇಂಥ ಪ್ರಶ್ನೆಯನ್ನು ಕೇಳುವುದೇ ಇಲ್ಲ. ಕೆಲವೊಂದು ಮೂರ್ಖರನ್ನು ಬಿಟ್ಟರೆ ಬಿಳಿಯರಾರೂ ಇಂಥದ್ದನ್ನು ಕಲ್ಪಿಸುವುದೂ ಇಲ್ಲ.

೧೯೬೪ರಲ್ಲಿ ಪ್ರತಿ ೫ ಬಿಳಿಯರಲ್ಲಿ ಒಬ್ಬನಿಗಿಂತಲೂ ಕಡಿಮೆ ಸಂಖ್ಯೆಯಲ್ಲಿ ತನಗೆ ಕರಿಯ ಸ್ನೇಹಿತನೊಬ್ಬನಿದ್ದಾನೆಂದು ಹೇಳಿಕೊಳ್ಳುತ್ತಿದ್ದ. ಆದರೆ ೧೯೮೯ರ ಸಮಯಕ್ಕೆ ಪ್ರತಿ ಮೂವರಲ್ಲಿ ಒಬ್ಬರು ಕರಿಯ ಗೆಳೆಯರನ್ನು ಹೊಂದಿದ್ದರು. ಅಲ್ಲದೆ ೧೦ ರಲ್ಲಿ ೮ ಆಫ್ರಿಕೆಯ ಅಮೆರಿಕನ್ನರಿಗೆ ಒಬ್ಬ ಬಿಳಿಯ ಗೆಳೆಯನಿದ್ದುದು ಕಂಡು ಬಂತು.

ಬಹಿಷ್ಕಾರದ ಬಗ್ಗೆ ಏನು ಹೇಳಬೇಕು? ೧೯೬೩ ರಲ್ಲಿ ಶೇ. ೧೦ ಬಿಳಿಯರು ಮಾತ್ರ ಬಿಳಿಯ ಹಾಗೂ ಕರಿಯರ ಮಧ್ಯೆ ಪ್ರಣಯಾಂಕುರವಾಗುವದನ್ನು ಒಪ್ಪುತ್ತಿದ್ದರು. ಆದರೆ ೧೯೯೪ರ ಸಮಯಕ್ಕೆ

ಈ ಪ್ರಮಾಣ ಶೇ. ೬೫ಕ್ಕೆ ಏರಿತ್ತು. ಅಂತರ ಜನಾಂಗೀಯ ವಿವಾಹ? ೧೯೫೮ ರಲ್ಲಿ ಕೇವಲ ಶೇ. ೪ ಬಿಳಿಯರು ಇದನ್ನು ಸಮ್ಮತಿಸಿದ್ದರು. ಈಗ ಇದು ೧೧ ಪಟ್ಟಿಗಿಂತ ಹೆಚ್ಚಾಗಿ ಶೇ. ೪೫ಕ್ಕೆ ತಲುಪಿದೆ. ಈ ಅಧ್ಯಯನಗಳ ಮೂಲಕ ಅಭಿಪ್ರಾಯವನ್ನು ಮಾತ್ರ ಅಳೆಯ ಬಹುದಾಗಿದೆ. ಆದರೆ ವರ್ತನೆಯಲ್ಲೂ ಬದಲಾವಣೆಯಾಗಿದೆ. ೧೯೬೩ ರಲ್ಲಿ ಆಫ್ರಿಕೆಯ–ಅಮೆರಿಕನ್ನರ ಮತ್ತು ಬಿಳಿಯರ ಮಧ್ಯೆ ಅಂತರ ಜನಾಂಗೀಯ ವಿವಾಹವಾಗುತ್ತಿದ್ದುದು ಶೇ. ೧ ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿತ್ತು. ೩೦ ವರ್ಷದೊಳಗೆ ಇದು ೧೨ಕ್ಕೆ ಏರಿತ್ತು.

ಉಚ್ಚಸ್ಥಾನಕ್ಕೆ ಅವಕಾಶ

ಇಂದು ಕರಿಯರು ಹಂತ ಹಂತವಾಗಿ ಮೇಲೇರಲು ಸಾಧ್ಯವಿದೆ. ಆ್ಯನ್. ಎಮ್. ಫಿಡ್ಜ್ ಈಗಾಗಲೇ ಉಚ್ಚಸ್ಥಾನ ತಲುಪಿದ್ದಾಳೆ. ಅವಳೊಂದು ೨.೭ ಬಿಲಿಯನ್ ಡಾಲರ ವ್ಯವಹಾರದ ದೊಡ್ಡ ಆಹಾರ ತಯಾರಿಕಾ ಕಂಪೆನಿಯಲ್ಲಿ, ಉತ್ಪಾದನೆ, ಅಭಿವೃದ್ಧಿ ಮತ್ತು ಮಾರಾಟ ವಿಭಾಗದ ನಿರ್ವಹಣಾಧಿಕಾರಿಯಾಗಿದ್ದಾಳೆ. ಇದೇ ರೀತಿಯಲ್ಲಿ ಕೆನ್ನೆಥ್ ಚೆನಾಲ್ಟ ಅಮೆರಿಕನ್ ಎಕ್ಸಪ್ರೆಸ್‌ನ ಅಧ್ಯಕ್ಷ ಹಾಗೂ ಮುಖ್ಯ ನಿರ್ವಹಣಾಧಿಕಾರಿಯಾಗಿದ್ದಾನೆ. ಟೈಮ್ ವಾರ್ನರ್‌ನಲ್ಲಿ ಅಧ್ಯಕ್ಷನಾಗಿರುವ ರಿಚರ್ಡ್ ಡಿ ಪಾರ್ಸನ್ಸ್ ಕೂಡಾ ಇದೇ ಪಂಕ್ತಿಗೆ ಸೇರಿದ್ದಾನೆ. ೧೯೮೮ ರಲ್ಲಿ ಪ್ರಮುಖ ಕರಿಯ ರಾಜಕಾರಣಿ ಜೆಸ್ಸಿ ಜ್ಯಾಕ್ಸನ್ ತಾನು ಶ್ವೇತ ಭವನದ ಪೀಠ ಅಲಂಕರಿಸುವ ಬಗ್ಗೆ ಈ ರೀತಿ ಹೇಳಿದ್ದನು "ಅಲ್ಲಿಗೆ ತಲುಪುವುದು ನನಗಾಗಲಿಕ್ಕಿಲ್ಲ. ಆದರೆ ನಮ್ಮ ಮಕ್ಕಳು ಆ ಮಟ್ಟಕ್ಕೆ ಹೋಗಲು ಈಗ ಸಾಧ್ಯವಿದೆ."

ಇದು ಕೂಡಾ ನಿರಾಶಾವಾದ ವೆನಿಸುತ್ತದೆ. "ಒಂದು ಊರಿನ ಮೂಲಕ ಹೋಗುತ್ತಿದ್ದಾಗ, ಆ ಊರಿನ ಪೆಟ್ರೊಲ್ ಸ್ಟೇಶನ್ನಿನ ಬಚ್ಚಲಿನಲ್ಲಿ ಕೂಡಾ ನಾವು ಪ್ರವೇಶಿಸುವಂತಿರಲಿಲ್ಲ"ವೆಂದು ಜೆನರಲ್ ಪಾವೆಲ್ ತನ್ನ ಆತ್ಮ ಚರಿತ್ರೆಯಲ್ಲಿ ಬರೆದಿದ್ದ. ಇದು ೧೯೬೨ರ ಸಂಗತಿ. ಕೊಲಿನ್ ಮತ್ತು ಅಲ್ಮಾಪಾವೆಲ್ ಮಿಲಿಟರಿ ಬಿಡಾರಕ್ಕೆ ಭೇಟಿ ನೀಡಿದಂದಿನಿಂದ ಸಾಕಷ್ಟು ಸುಧಾರಣೆಯಾಗಿದೆ. ಅದೇ ಜೆನರಲ್ ಪಾವೆಲ್ ಅಮೆರಿಕೆಯ ಅಧ್ಯಕ್ಷನಾಗಿ ಆಯ್ಕೆಗೊಳ್ಳುವ ಸಾಧ್ಯತೆಯಿತ್ತೆಂದು, ೧೯೯೬ ರಲ್ಲಿ ನಡೆಸಲಾದ ಒಂದು ಅಧ್ಯಯನದಿಂದ ತಿಳಿದುಬಂದಿದೆ. ಸುಧಾರಣೆಗಳು ಕೌತುಕವುಂಟು ಮಾಡುವಂಥಾದ್ದಾಗಿವೆ. ಯಾವ ಆದರ್ಶಕ್ಕಾಗಿ ತನ್ನ ಪತಿ ಮಾರ್ಟಿನ್ ಲೂಥರ್ ಕಿಂಗ್ ತನ್ನ ಪ್ರಾಣವನ್ನೇ ತೆತ್ತನೋ ಅವು "ಅಮೆರಿಕೆಯ ಜನಜೀವನದಲ್ಲಿ ಭದ್ರವಾಗಿ ನಾಟಿಕೊಂಡಿವೆ" ಎಂದು ಕೊರೆಟಾ ಸ್ಕೊಟ್ ಕಿಂಗ್ ಬರೆದದ್ದು ಹಳೆಯ ಸಂಗತಿಯಲ್ಲ.

ಸಾಲವನು ಕೊಂಬಾಗ

ಜಿ. ಟಿ. ರಾಘವೇಂದ್ರ
'ದ್ವಾರಕಾ' ಶಾಲಾ ರಸ್ತೆ
ಮಡಿಕೇರಿ ೫೭೧ ೨೦೧

ಸಾಲ ಮನುಜಗೆಹೊಲ್ಲ ನಾಲಗೆಗೆಹುಸಿಹೊಲ್ಲ
ಹಾಲಿನ ಕೊಡಕೆ ಹುಳಿಹೊಲ್ಲ—ಬಡವಗೆ
ಬಾಲೆ ತಾನೊಲ್ಲ ಸರ್ವಜ್ಞ

ಭ್ರಷ್ಟಾಚಾರ ಅಂತಾರಾಷ್ಟ್ರೀಯ ಗೌರವ ಪಡೆದಿದೆ ಎಂದಾದ ಮೇಲೆ ಇದರ ತಮ್ಮನಾಗಲು ಸದಾ ತವಕಿಸುತ್ತಿರುವ ಸಾಲ ಎಂಬುದೂ ಅಷ್ಟೇ ಗೌರವ ಪಡೆಯಲು ಪ್ರಯತ್ನಿಸಿದರೆ ತಪ್ಪಾಗಲಾರದು ಅಲ್ಲವೇ ?

ನೋಡಿ, ಭವ್ಯ ಭಾರತದ ಹೆಮ್ಮೆಯ ಪ್ರಜೆಗಳಾದ-ನಾವು ಹೊರುವ ಸಾಲದ ಹೊರೆ ಹೆಚ್ಚೋ, ಭಾರತಾದ್ಯಂತ ಶಾಲೆಗೆ ಹೋಗುವ ಪುಟ್ಟ ಮಕ್ಕಳು ಹೊರುವ ಪುಸ್ತಕದ ಹೊರೆ ಹೆಚ್ಚೋ ಎಂದು ನಿಮ್ಮನ್ನು ಯಾರಾದರೂ ಪ್ರಶ್ನಿಸಿಬಿಟ್ಟರೆ ನಿಮಗೆ ಉತ್ತರಿಸಲು ಕಷ್ಟವಾಗುತ್ತದೆ ಮಾತ್ರವಲ್ಲ ನೀವು ತಡವರಿಸುತ್ತೀರಿ— ಅಲ್ಲವೇ ?

ಒಂದನೇ ಸರ್ತಿ ಸಾಲ ಮಾಡುವಾಗ ಬಹಳ ಕಷ್ಟವಾಗುತ್ತದೆ, ನಮ್ಮ ವ್ಯಕ್ತಿತ್ವವೇ ಹೋದಂತೆನಿಸುತ್ತದೆ. ಆದರೆ ಎರಡನೇ ಸರ್ತಿ ಅಷ್ಟು ಕಷ್ಟವಾಗುವುದಿಲ್ಲ. ಮೂರನೇ ಸರ್ತಿ ಮತ್ತು ಮುಂದಕ್ಕೆ ಮನಸ್ಸಿಗೇನೂ ಅನ್ನಿಸುವುದಿಲ್ಲ. ಮಾತ್ರವಲ್ಲ ಕ್ರಮೇಣ ಅದು ಅನಿವಾರ್ಯವಾಗಿಬಿಡುತ್ತದೆ. ಮರ್ಯಾದೆಯ ಅಂಶವಾಗಿ ಬಿಡುತ್ತದೆ. ಗೌರವದ ಪ್ರತೀಕವಾಗಿ ಬಿಡುತ್ತದೆ.

ಹತ್ತಾದರೆ ಸಾಲ, ನೂರಾದರೆ ಲೋಲ ಸಾವಿರವಾದರೆ ಸಂಪನ್ಮೂಲ ನಾವು ಸಂಪನ್ನರಾಗೇ ದೊಡ್ಡೋತ್ತದ . ಸಾಲ ತರೋದು ನಮ್ಮ ಗೌರವದ ಅಂಶ ಎಂದೆನಿಸುವುದಲ್ಲವೇ ? ಹೇಗೇ ಆದರೂ ದೇಶದ ಗಾತ್ರದಮೇಲಾದರೂ ಸಾಲ ತಂದು ದೇಶದ ಗೌರವವನ್ನು ಕಾಪಾಡೋಣ-ಅಲ್ಲವೇ ? ದೊಡ್ಡನೆ ಕಟ್ಟಿದರೆ ಹೆಡ್ಡನಿಗೂ ಸಾಲ ಸಿಗುವುದಂತೆ !!

'ಗಾತ್ರ' ಎಂದಾಗ ಒಂದು ವಿಚಾರ ಜ್ಞಾಪಕಕ್ಕೆ ಬಂತು. ನನ್ನೊಬ್ಬ ಮಿತ್ರ

ನಡೆದ ಘಟನೆಯೊಂದನ್ನು ಹೇಳಿದ. ಅವನ ಮಿತ್ರ ಪೊನ್ನಪ್ಪ ಒಂದ್ಸಾರಿ ತೋಟದ ಮನೇಲಿ ಕೂತಿದ್ನಂತೆ. ಆಗ ಅವನ ಪರಿಚಯಸ್ಥ ರೇವಣ್ಣ ಬಂದು ಬಹಳ ನಯ ವಿನಯಗಳಿಂದ "ಸಾರ್....ನನಗೆ.... ಅರ್ಜೆಂಟಾಗಿ ಒಂದೈನೂರು ಸಾಲ ಬೇಕಾಗಿತ್ತು....ಹದಿನೈದೇ ದಿನಗಳೊಳಗೆ ಹಿಂದೆ ಕೊಟ್ಟುಬಿಡುತ್ತೇನೆ" ಎಂದು ನಾನಾ ಕಾರಣಗಳೊಂದಿಗೆ ಗೋಗರೆದ.

ಪೊನ್ನಪ್ಪ ಹೆಚ್ಚು ಮಾತನಾಡುವವನಲ್ಲ ಮುನ್ನೂರು ಕೊಟ್ಟ. ಈಗ ರೇವಣ್ಣ ಹಕ್ಕಿನ ಮೇಲೆ "ಸಾರ್!....ನಾನು ಕೇಳಿದ್ದು ಐನೂರು" ಎಂದು ಆಶ್ಚರ್ಯ ಭಾವ ವ್ಯಕ್ತಪಡಿಸಿದ. ಪೊನ್ನಪ್ಪ ಕಣ್ಸನ್ನೆಯಲ್ಲಿ "ಇಲ್ಲ ಇಷ್ಟೇ ಎಂಬುದನ್ನು ಖಂಡಿತ ಪಡಿಸಿದ, ಇನ್ನು ಇಲ್ಲಿ ಸಾಲ ಹುಟ್ಟುವುದಿಲ್ಲ ಎಂಬುದು ರೇವಣ್ಣನಿಗೆ ಸ್ಪಷ್ಟವಾದ ಮೇಲೆ" ಸರಿ ಸರ್, ಆಯ್ತು ಸಾರ್ ಹೇಗೋ ಸಾಕ್ಮಾಡ್ತೇನೆ ಸಾರ್. ಆಯ್ತು ಖಂಡಿತಾ ಎರಡು ವಾರಗಳೊಳಗೆ ಕೊಟ್ಟು ಬಿಡ್ತೇನೆ ಸಾರ್...."ಎಂದು ದೇಹವನ್ನು ಡೊಂಕಿಸಿ ಬಳುಕಿಸಿ ಬಗ್ಗಿ ಧನ್ಯವಾದ ಹೇಳಿ ನಮಸ್ಕಾರ ಮಾಡಿ ಹೊರಟು ಹೋದ.

ಹದಿನೈದು ದಿನಗಳೇನು! ತಿಂಗಳೊಂದು ದಾಟಿತು. ರೇವಣ್ಣ ನಾಪತ್ತೆ! ಸಾಲ ಪಡೆದವನಿಗಿಂತ ಸಾಲ ಕೊಟ್ಟವನಿಗೇ ಚಿಂತೆ ಜಾಸ್ತಿ ಅಲ್ಲವೇ? ಪೊನ್ನಪ್ಪ ಮನಸ್ಸಿನಲ್ಲಿಯೇ ಲೆಕ್ಕಾಚಾರ ಹಾಕಿದ–ಏನೋ ಒಂದು ಯೋಜನೆ ತಯಾರು ಮಾಡಿದ. ಭಂಡನಿಂದ ಹಣ ವಸೂಲ್ಮಾಡುವುದೂ ಹಸುವಿನ ಕೊಂಬಿನಿಂದ ಹಾಲು ಕರೆಯುವುದೂ ಒಂದೇ ಎಂದು ತನ್ನ ತಂದೆಯಿಂದ ಕೇಳಿ ತಿಳಿದಿದ್ದ ಪೊನ್ನಪ್ಪ ಮಾತು ಮನೆ ಹಾಳ್ಮಾಡಿತು ಎಂದೂ ಅರಿತಿದ್ದ–ಅದ್ದರಿಂದಲೇ ಆತ ಮಿತಭಾಷಿಯಾಗಿರುವುದು. ಪೊನ್ನಪ್ಪ ತನ್ನ ಗುಪ್ತ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಸಲುವಾಗಿ ತನ್ನೊಬ್ಬ ಕೆಲಸಗಾರನನ್ನು ಗೋಣಿಚೀಲ ತರಲು ಸೂಚಿಸಿದ. ಬೈಕ್ 'ಸ್ಟಾರ್ಟ್' ಮಾಡಿದ ನಂತರ ಕೆಲಸಗಾರನಿಗೆ ಹಿಂದೆ ಕೂರಲು ಹೇಳಿದ. ಕೆಲಸಗಾರನಿಗೆ ಏಕೆ ಏನು ಎಂದು ಅರ್ಥ ಆಗುವ ಮೊದಲೇ ಕಿಲೋಮೀಟರ್ ದೂರದ ರೇವಣ್ಣನ ಏಲಕ್ಕಿಗೂಡು ತಲುಪಿ ಆಗಿತ್ತು. ಆಗ ಸಮಯ ಮಧ್ಯಾಹ್ನ ೧ ಗಂಟೆ–ಹಸಿ ಏಲಕ್ಕಿ ಬರುವ ಸಮಯ ಆಗ ತಾನೇ ಬಂದಿತ್ತು. ಬೈಕ್‌ನಿಂದ ಇಳಿದ ಪೊನ್ನಪ್ಪ ಕೆಲಸಗಾರನಿಗೆ ಚೀಲಕ್ಕೆ ಹಸಿ ಏಲಕ್ಕಿ ತುಂಬಿಸಲು ಹೇಳಿದ ರೇವಣ್ಣ ಬೆಪ್ಪು ಬೆರಗಾಗಿ ನೋಡುತ್ತಿದ್ದಂತೆಯೇ ತುಂಬಿಸಿದ ಹಸಿ ಏಲಕ್ಕಿಯೊಂದಿಗೆ, ಕೆಲಸಗಾರನೊಂದಿಗೆ ಪೊನ್ನಪ್ಪ ಹೋಗಿಯೇ ಬಿಟ್ಟ. ಘನಾಂದಾರಿ ಪೊನ್ನಪ್ಪ ಏಲಕ್ಕಿಯನ್ನು ತನ್ನ ಗೂಡಿನಲ್ಲಿ ಒಣಗಿಸಿ ಮಾರುಕಟ್ಟೆಯಲ್ಲಿ ಮಾರಿ ತನಗೆ ಬರಬೇಕಾದ ಹಣವನ್ನು ಇಟ್ಟುಕೊಂಡು ಉಳಿದ ಹಣವನ್ನು ರೇವಣ್ಣನಿಗೆ ಒಪ್ಪಿಸಿದ!!

ವಾಗ್ದಾನ ನಿಧಾನ ಮಾಡು. ನಡೆಸುವುದನ್ನು ಆತುರ ಮಾಡು ಎನ್ನುತ್ತಾರೆ ಹಿರಿಯರು. ಸೋಮಣ್ಣ ತಿಮ್ಮಯ್ಯ ಸ್ನೇಹಿತರು. ಸೋಮಣ್ಣ ನೇರ ಮನುಷ್ಯ ಆತನಿಗೆ ಕೊಂಕ್ಮಾತು, ವ್ಯಂಗ್ಯ ಒಂದೂ ತಿಳೀದು. ಆತನ ಮಾತು ಹೇಗೆ ನೇರವೋ ನಡತೆಯೂ ನೇರ. ತಿಮ್ಮಯ್ಯನಾದರೋ

ಮಹಾನಯಸಾಣೆ!, ಧೂರ್ತ ನಡತೆ. ತನ್ನ ಧೂರ್ತತನವನ್ನು ಮುಚ್ಚಲೋ ಎಂಬಂತೆ ದೈವ ಭಕ್ತಿಯ ಗೋಸುಂಬೆತನ. ಒಂದ್ಸಾರಿ ಧೂರ್ತ ತಿಮ್ಮಯ್ಯ ಸಾಚಾ ಸೋಮಣ್ಣನನ್ನು, "....ಸೋಮಣ್ಣಾ....ನಾನು.... ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡು ಬಿಟ್ಟಿದ್ದೇನೆ....ನನ್ನ ಕಷ್ಟ ಪರಿಹರಿಸಲು ನಿನ್ನಂಥ ಆತ್ಮೀಯ ಮಿತ್ರರಿಂದ ಮಾತ್ರ ಸಾಧ್ಯ...." ಎಂದು ಸುತ್ತಿ ಬಳಸಿ ಮಾತಾಡಿ ಕೊನೆಗೆ ೫೦೦೦ ರೂಪಾಯಿ ಸಾಲಕ್ಕೆ ತಂದು ನಿಲ್ಲಿಸಿದ. "ನೋಡು, ಇಂದು ತಾರೀಖು ೧೫. ನೀನು ಸಂಶಯಪಡಲೇ ಬೇಡ. ಇನ್ನು ಒಂದೇ ತಿಂಗಳು! ನಾನು ಬದುಕಿದ್ದರೆ ಅಷ್ಟರೊಳಗೆ ಹಣ ಹಿಂತಿರುಗಿಸುತ್ತೇನೆ–ಇದು ನನ್ನಾಣೆ.... ಎಂದು ಇಲ್ಲದ ಕಣ್ಣೀರು ತರಿಸಿಕೊಂಡು ಓರೆ ಕಣ್ಣಿನಲ್ಲಿ ಸೋಮಣ್ಣನ ಪ್ರತಿಕ್ರಿಯೆ ಗಮನಿಸಿದ. ನೇರ ಮನುಷ್ಯ ಸೋಮಣ್ಣನಿಗೆ ಅಳುವ ಗಂಡಸನ್ನು, ನಗುವ ಹೆಂಗಸನ್ನು ನಂಬಬಾರದು ಎಂಬ ವಿಚಾರ ಗೊತ್ತಿಲ್ಲದೆ ೫೦೦೦ ರೂಪಾಯಿಗಳನ್ನು ಕೊಟ್ಟುಬಿಟ್ಟ! ಋಣ ತಿಂದರೂ ಘನತೆ ಬಿಡದ ತಿಮ್ಮಯ್ಯ ಅಳುತ್ತಳುತ್ತಾ ಸೋಮಣ್ಣನನ್ನು ಕೊಂಡಾಡುತ್ತಾ ಹಾಡಿ ಹೊಗಳುತ್ತಾ ಮೇಲಿಂದ ಮೇಲೆ ಧನ್ಯವಾದ ಹೇಳುತ್ತಾ ನಿಧಾನವಾಗಿ ಹೊರಸಾಗಿದವನು ಸೋಮಣ್ಣನ ಕಣ್ಣು ತಪ್ಪಿದ್ದೇ ಕೊಟ್ಟವ ಕೋಡಂಗಿ ಇದ್ದ್ರೆ ಇಸ್ಕೊಂಡವನು ಈರಭದ್ರನಂತೆ ರಾಜಾರೋಷವಾಗಿ ನಡೆದೇ ಬಿಟ್ಟ–ಏಕೆ ಹೇಳಿ? ತಾನು ಸಾಲ ಪಡೆದದ್ದು ಸೋಮಣ್ಣನಿಗಲ್ಲದೆ ಇನ್ಯಾರಿಗೂ ಗೊತ್ತಿಲ್ಲವಲ್ಲಾ!!

ಸಮಯ ಸರಿಯಲು ಯಾರ ಅಪ್ಪಣೆ ಬೇಡ. ಕೊಡುವ ಮನಸ್ಸಿದ್ದರೆ ತಾನೇ ತೆಗೆದುಕೊಂಡದ್ದು ಜ್ಞಾಪಕದಲ್ಲಿರುವುದು ನೇರ ಮನುಷ್ಯ ಸೋಮಣ್ಣ ಘಟನೆಯನ್ನು ನೇರವಾಗಿಯೇ ನೋಡಿದ.

'ಹೌದೂ, ನಿನ್ನೆ ತಾರೀಖು ೧೫. ತಿಮ್ಮಯ್ಯ ಪಾಪ ಸತ್ತೋಗಿರಬೇಕು. ಬದುಕಿದ್ದಿದ್ದರೆ ಅವ್ನು ಹಣ ತಂದೊಪ್ಪಿಸ್ತಿದ್ದ. ಬಹುಶಃ ಅವನು ಸತ್ತಿದ್ದು ಅವನ ಮನೆಯವರಿಗೆ ಗೊತ್ತಿದ್ಯೋ ಇಲ್ವೋ ಎಂದು ಭಾವಿಸಿ ನೇರವಾಗಿ ತಿಮ್ಮಯ್ಯನ ಮನೆಗೆ ಹೋದ. ಶ್ರೀಮತಿ ತಿಮ್ಮಯ್ಯನಿಗೆ ವಿಷಯ ಗೊತ್ತಿಲ್ಲ ಎಂದು ತಿಳಿದುಕೊಂಡು ಆಕೆಗೆ ತಿಮ್ಮಯ್ಯ ಸತ್ತುಹೋದ ವಿಚಾರ ತಿಳಿಸಿದ. ಸೋಮಣ್ಣನ ವ್ಯಕ್ತಿತ್ವದ ಅರಿವಿದ್ದ ಆಕೆ ಸೋಮಣ್ಣ ಎಂದೂ ಸುಳ್ಳು ಹೇಳುವವನಲ್ಲ ಎಂದು ತಿಳಿದಿದ್ದಳು, ಮಾತ್ರವಲ್ಲ–ಆಕೆ ಎತ್ತು ಈಯಿತು ಎಂದರೆ ಕೊಟ್ಟಿಗೇಲಿ ಕಟ್ಟು ಎನ್ನುವ ಜಾಯಮಾನದವಳು. ಹಾಗಾಗಿ ವಿಷಯ ತಿಳಿದೊಡನೇ ಟಾಪ್ ಗೇರ್‌ನಲ್ಲಿ, "ಅಯ್ಯಯ್ಯೋ, ಹೋದ್ನಲ್ಲಪ್ಪೋ...., ಗಂಡ ಹೋಗ್ಬಿಟ್ಟನಲ್ಲಪ್ಪಾ, ನಮ್ಮನ್ನು ಅನಾಥರನ್ನಾಗಿಸಿ ಹೋಗೇಬಿಟ್ನಲ್ಲಪ್ಪಾ! ನಮಗಿನ್ಯಾರು ಗತಿ ಎಂದು ಕಿರುಚಾಡತೊಡಗಿದಳು, ಬೊಬ್ಬಿಡತೊಡಗಿದಳು!! ಅಷ್ಟರಲ್ಲಿ ಅವಳ ಪುಟಾಣಿ ಮಕ್ಕಳಿಗೆ 'ವಿಷ್ಯ ಏನೆಂದು ಗೊತ್ತಾಗದಿದ್ರೂ' ತಾಯಿ ಅಳುವಾಗ ಅವರಿಗೂ ತನ್ನಿಂದ ತಾನೇ ಅಳು ಬಂದು ಬಿಟ್ಟಿತು. ಅವರೂ ಸಹ ತಾಯಿ ಸೀರೆ ಸೆರಗು ಹಿಡಿದುಕೊಂಡು ಅಳತೊಡಗಿದರು. ತಾಯಿ ಮಕ್ಕಳ ಬೊಬ್ಬೆ

ಕಿರುಚಾಟ ಕೇಳಿ ಅಕ್ಕಪಕ್ಕದವರು ಬಂದು ವಿಷಯ ತಿಳಿದು ಅವರೂ ಸಂತಾಪ ಸೂಚಿಸ ತೊಡಗಿದರು. ಯಾರೋ ಸಂಪ್ರದಾಯ ವಾದಿಗಳು ತತ್‌ಕ್ಷಣ ವಾದ್ಯದವರನ್ನು ಕರೆಸಿದರು. ಅವರು ತೋಡಿ ರಾಗದಲ್ಲಿ ರ್‍ರೊಂಯ್ಯೋ ಎಂದು ವಾದ್ಯ ನುಡಿಸ ತೊಡಗಿದರು. ಅತಿ ಬುದ್ಧಿವಂತನೊಬ್ಬ ಕೋವಿ ತಂದು ಆಕಾಶಕ್ಕೆ ಗುಂಡು ಹೊಡೆದೇ ಬಿಟ್ಟ!!

ಸರಿ ಜನವೋ ಜನ! ಕೆಲವೇ ಕ್ಷಣಗಳಲ್ಲಿ ತಿಮ್ಮಯ್ಯನ ಮನೆ ಶವದ ಮನೆಯಾಗಿ ಹೋಯಿತು! ಜನರ ಬೊಬ್ಬೆ, ದುಃಖ, ಅಳು, ಒಬ್ಬರನ್ನೊಬ್ಬರು ವಿಚಾರಿಸುವುದು.. ಯಾರಿಗೂ ವಿಷಯ ಗೊತ್ತಿಲ್ಲ!! '.... ಅಯ್ಯೋ ಹೋಗ್ಬಿಟ್ಟನಂತೆ....' '.... ಹಾ ಹೋಗಿಬಿಟ್ಟನಂತಾ?....' '..ಏನಾಗಿತ್ತಂತೆ?' '...ಕಾಯಿಲೆಯೂ.. ,...ಏನು ಹಾವು ಕಚ್ಚಿಬಿಟ್ಟಿತಂತಾ? ಎಲ್ಲಿಯಂತೆ?' 'ಯಾವಾಗ ಅಂತೆ?' 'ಹೆಣ' ಎಷ್ಟೊತ್ತಿಗೆ ಬರುತ್ತಂತೆ?' 'ಪಾಪ ಒಳ್ಳೆ ಕಲ್ಗುಂಡಿನ್ಹಾಗಿದ್ದ! ಎಲ್ಲಾ ವಿಧಿ. ಅವನ ಕರೆ ಬರುವಾಗ ಎಲ್ಲರೂ ಹೋಗಬೇಕು!!

ಸಾಲ ಮಾಡಿ ಮಜಾ ಉಡಾಯ್ಸಿ ಕೈಲಿದ್ದದ್ದೆಲ್ಲಾ ಖಾಲಿ ಆದ್ಮೇಲೆ ಮನೆ ಯೋಚನೆ ಆಗಿ ತಿಮ್ಮಯ್ಯ ಬರೀ ಕೈನಲ್ಲಿ ಸಂಜೆ ಮಂಪರು ಬೆಳಕಿನಲ್ಲಿ ಮನೆಕಡೆ ಬರ್ತಿದ್ದಾಗ....'ದೂರದಲ್ಲಿ....ಮನೆಕಡೆ ಅದೇನು ಭಾರೀ ಜನ ಕಾಣ್ತಿದೆಯಲ್ಲಾ.... ಬೊಬ್ಬೆ, ಕಿರುಚಾಟ ಅಳು ಕೇಳ್ತಿದೆಯಲ್ಲಾ....ಹಾಂ....ವಾದ್ಯ? ಯಾರಿಗೇನಾಯ್ತಪ್ಪಾ! ಅಯ್ಯೋ,..ಅಯ್ಯಯ್ಯೋ ಹೆಂಡ್ತಿ ಹೋಗ್ಬಿಟ್ಟಳೇ....'ಎಂದುಕೊಂಡ್ಯ ಎದ್ನೋ ಬಿದ್ನೋ ಎಂದು ಓಡೋಡಿ ಬಂದ. ದುಃಖ ಉಮ್ಮಳಿಸಿ ಬರ್ತಿತ್ತು. ತಿಮ್ಮಯ್ಯ ಮನೆ ಹತ್ರ ಬರ್ತಿದ್ದಂತೆ ಹೆಂಗಸ್ರೂ ಮಕ್ಳೂ ತಿಮ್ಮಯ್ಯನನ್ನು ಕಾಣ್ತಿದ್ದಂತೆ '....ಅಯ್ಯೋ ಭೂತ ಬಂತು....ಪಿಶಾಚಿ ಬಂತು....ಅಲ್ನೋಡಿ ತಿಮ್ಮಯ್ಯನ ಭೂತ ನೋಡಿ,....ಪ್ರೇತ ನೋಡಿ....ಪಾದ ಹೇಗೆ ತಿರುಚಿದೆ...." ಎಂದ್ಕೊಂಡು ಚೆಲ್ಲಾಪಿಲ್ಲಿ ಯಾಗಿ ಓಡತೊಡಗಿದರು. ಇದೇನು ಗದ್ದಲವೆಂದು ಹೆಂಡ್ತಿ ಗಾಬರಿಯಾಗಿ ಬೋಳು ಕುತ್ತಿಗೆ ಬರೀ ಹಣೆ ಹರಡಿದ ತಲೆಗೂದಲಿಂದ ಬಂದು ನೋಡ್ತಾಳೆ—ಗಂಡನನ್ನು ಕಂಡ ತತ್‌ಕ್ಷಣ ಕಿಟಾರನೆ ಕಿರುಚಿಕೊಂಡು ಮೂರ್ಛೆ ಹೋಗಿ ಬಿದ್ದುಬಿಟ್ಟಳು!

ತಿಮ್ಮಯ್ಯನಿಗೇನೂ ಅರ್ಥವೇ ಆಗ್ಲಿಲ್ಲ! ಅಸಾಧ್ಯ ಕೋಪದಿಂದ 'ಇದೇನು ಹುಚ್ಚಾಟ!!' ಎಂದು ಅರಚಿದ. ಎಲ್ಲರೂ ಸ್ತಬ್ಧ. ಯಾರೋ ಒಬ್ಬರು ಧೈರ್ಯವಹಿಸಿ '....ಆಂ! ನೀನೂ....ಸತ್ಹೋದ್ಯಂತೆ? ನೀನು ಸಾಯ್ಲಿಲ್ವಾ....? ನೀನು ಪ್ರೇತ ಅಲ್ವಾ....' ಎಂದು ಪ್ರಶ್ನಿಸಿದ 'ಸಾಕು ನಿಮ್ಮ ಹುಚ್ಚಾಟ. ಯಾರು ಹೇಳಿದ್ದು ನಾನು ಸತ್ತಿದ್ದೇನೇಂತ? ನಾನು ಕಲ್ಗುಂಡಿನ ತರಾ ಇರಾದು ಕಾಣ್ಸಾಕ್ಕಿಲ್ವಾ....?' ಎಂದು ಅಬ್ಬರಿಸಿದ. ಅಷ್ಟರಲ್ಲಿ ಅವನ ಕಣ್ಣಿಗೆ ಸೋಮಣ್ಣ ಕಂಡ. ಸೋಮಣ್ಣ ಮಾತನಾಡ್ಲಿಲ್ಲ. ತಿಮ್ಮಯ್ಯನಿಗೆ ಪರಿಸ್ಥಿತಿ ಅರ್ಥವಾಯ್ತು. ಸೋಮಣ್ಣನನ್ನು ಒಂದು ಮೂಲೆಗೆ ಕರಕೊಂಡು ಹೋಗಿ ಅವನ ಕಾಲು ಹಿಡಿದುಕೊಂಡು ಒಂದುವಾರ ಅವಧಿ ಕೇಳಿಕೊಂಡ. ತಿಮ್ಮಯ್ಯ ಸೋಮಣ್ಣನ

ಕಾಲು ಹಿಡಿದುವನ್ನು ಯಾರೂ ನೋಡ್ಲಿಲ್ಲ ಸದ್ಯ

ನೋಡಿ, ನೋಡಿ ಪೇಟೆ ಮಧ್ಯದಲ್ಲಿ ಆ ಮನುಷ್ಯನ ಮಾತು ಕೇಳಿ.

"ನಮಸ್ಕಾರ ಸ್ವಾಮಿ, ಚೆನ್ನಾಗಿದ್ದೀರಾ ಸ್ವಾಮಿ?" "ಹೂಂ"

"ದೂರ ಹೊರಟ್ರಿ ಸ್ವಾಮಿ ಸಂತೆಗಾ?" "ಹೂಂ"

"ಸ್ವಾಮಿ ಮನೇಲೆಲ್ಲಾ ಚೆನ್ನಾಗಿದ್ದಾರಾ?" "ಹೂಂ ಹೂಂ"

"ಸ್ವಾಮಿ, ಒಂದ್ವಿಷ್ಯ—ನಿಮ್ಹತ್ರಾನೇ ಬಂದೆ...."

ಎಷ್ಟು ಹಸಿಸುಳ್ಳು! ಪೇಟೆ ಮಧ್ಯದಲ್ಲಿ ಎಲ್ಲೋ ಉಂಡಾಡಿಗುಂಡನಂತೆ ಅಲೆಯುವವನು ನನ್ಹತ್ರ ಬರ್ತಾನಾ? "ಏನುವಿಷ್ಯ?" ಮುಖ ಸಿಂಡರಿಸಿಕೊಂಡು ಪ್ರಶ್ನಿಸಿದ.

"ಸಾರ್ ಒಂದೈವತ್ತು ರೂಪಾಯಿ ಬೇಕಿತ್ತು...." ಎಂದು ತಲೆ ಕೆರೆದುಕೊಳ್ಳುತ್ತಾ ವಿನಂತಿಸಿಕೊಂಡ. ಈ ಭಯೋತ್ಪಾದಕನಿಂದ ತಪ್ಪಿಸಿಕೊಂಡರೆ ಸಾಕೆಂದು ೨೦ ರೂಪಾಯಿ ನೋಟನ್ನು ಕೊಟ್ಟು "ನೀನೇ ಇಟ್ಕೋ ವಾಪಾಸ್ ಕೊಡ್ಬೇಡಾ...." ಎಂದ. ನೋಟ್ ಪಡೆದಾತ ಮತ್ತೆ ತಲೆ ಕೆರೆದುಕೊಳ್ಳುತ್ತಾ ಒಂದು ತರದ ಹಕ್ಕಿನ ಮೇಲೆ "....ಸಾರ್ ನಾನು ಕೇಳಿದ್ದು ೫೦....ಈಗೇನೋ ೨೦ ಕೊಟ್ರಿ ಇನ್ನು ಮೂವತ್ತು?" ಸಾಲ ಕೊಟ್ಟವನು ಗಂಭೀರವಾಗಿ ೨೦ ರೂಪಾಯಿ ಹಿಂತಿರುಗಿಸಲು ಸೂಚಿಸಿದ. ಸಾಲ ಪಡೆಯುವಾತ 'ಬಹುಶಃ ೫೦ ರೂ. ನೋಟು ಕೊಡ್ತಾರೆಂದು ಭಾವಿಸಿ' ೨೦ ರೂ. ನೋಟು ಹಿಂತಿರುಗಿಸಿದ ಸಾಲ ಕೊಡಬೇಕಾದಾತ ೨೦ ರೂ. ಪಡೆದು ಹೋಗಿಯೇ ಬಿಟ್ಟ!!

ಲಿಂಗಣ್ಣನಿಗೆ ಜೀವನಕ್ಕೇನೂ ಕೊರತೆ ಇಲ್ಲ. ಅವನ ಹವ್ಯಾಸ ಏನು ಎಂದು ಯಾರಾದರೂ ಕೇಳಿದರೆ ಯಾವ ಅಳುಕು ಅಂಜಿಕೆಯೂ ಇಲ್ಲದೆ ನಿರ್ಲಜ್ಜೆಯಿಂದ ಸಾಲ ಕೇಳುವುದು ಎನ್ನುತ್ತಾನೆ.

"ಏಕೆ ಲಿಂಗಣ್ಣ ನಿನಗೇಕೆ ಸಾಲ? ಹೆಬ್ಬೆಟ್ಟೊತ್ತಿ ಒಬ್ಬಟ್ಟು ತಿನ್ನೋಂತ ಗೊತ್ತಿಲ್ವೇನೋ ಎಂದು ಕೇಳಿದರೆ— "ನೋಡೋ ನೀನೊಬ್ಬ ಎಳೆನಿಂಬೆ!! ಆಕಾರಕ್ಕೆ ಬಹಿರ್ರೂಪ, ಬಹಿರ್ರೂಪಕ್ಕೆ ತಕ್ಕ ಸಾಲ ಎಂಬ ಮಾತು ಕೇಳಿದ್ದೀಯ? ನೋಡು, ನನ್ನ ರೂಪ ನೋಡು. ಈ ರೂಪ ನೋಡಿ ಯಾರೂ ಸಾಲ ಕೊಡ್ತಾರೆ ಗೊತ್ತಾ! ಇನ್ನೊಂದು ವಿಚಾರವಿದೆ— ನಾನೂ ಸಾಲ ಕೇಳುವ ವಿಚಾರದಲ್ಲಿ ರಿಸರ್ಚ್ ಮಾಡ್ತಿದ್ದೇನೆ ಸದ್ಯದಲ್ಲಿಯೇ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪಡೀತೇನೆ ಗೊತ್ತಾ ಎಂದು ಏನೋ ಮಹತ್ಸಾಧನೆ ಮಾಡುವಂತೆ ಬೀಗಿದ. ನಾನು ಆಶ್ಚರ್ಯ ಚಕಿತನಾಗಿ 'ಅದ್ಹೇಗಪ್ಪಾ?' ಎಂದು ಪ್ರಶ್ನಿಸಿದೆ. ಅದಕ್ಕೆ ಅವನು ಏನು ಹೇಳಿದ ಗೊತ್ತಾ?—ಸಾಲ ಕೇಳಿದಾಗ ಮನುಷ್ಯನ ನಿಜಗುಣ ಗೊತ್ತಾಗಿಬಿಡುತ್ತೆ. ಮುಖ್ಯವಾಗಿ ವ್ಯಕ್ತಿ ಜಿಪುಣನೇ, ಧಾರಾಳಿಯೇ? ದೈವಭಕ್ತನೇ ನಾಸ್ತಿಕನೇ. ಆತನ ಹಣದ ಆಳ ಎಷ್ಟು? ಗಂಡ ಹೆಂಡಿರು ಹೇಗಿದ್ದಾರೆ? ಬೆಳೆದ ಮಕ್ಕಳೊಡನೆ ಬಾಂಧವ್ಯ ಹೇಗಿದೆ? ವ್ಯಕ್ತಿಗೆ ಸ್ಟೆಪ್ನಿಗಿಪ್ನಿ ಇದ್ರ್ಯೋ ಒಂದೋ ಎರಡೋ....ಎಲ್ಲಾ ಗೊತ್ತಾಗಿಬಿಡುತ್ತೆ" ಎಂದಾಗ 'ಇವನಿಗೆ ಡಾಕ್ಟರೇಟ್ ಸಿಗುವುದು ಖಂಡಿತಾ' ಎನ್ನಿಸ್ತು.

ಒಂದ್ಸಾರಿ ಇದೇ ಲಿಂಗಣ್ಣನನ್ನು ಮಹಾನುಭಾವನೊಬ್ಬ ಸಾವಿರ ರೂಪಾಯಿ ಸಾಲ ಕೇಳ್ದ, ತುಂಬಾ ಗೋಗರೆದ ಲಿಂಗಣ್ಣ ಮನೆಗೆ ಬಂದು ಸಾಲ ಕೇಳಿದವನನ್ನು ಸೌಜನ್ಯಕ್ಕಾಗಿಯಾದರೂ ಕೂತುಕೊಳ್ಳಲು ಹೇಳದೆ, ಮಧ್ಯದಲ್ಲಿ ಮಾತನಾಡಲೂ ಆಸ್ಪದ ಕೊಡದೆ ಒಂದೇಸಮನೆ ತನ್ನ ತಾಪತ್ರಯಗಳು, ಕಷ್ಟಕೋಟಲೆಗಳು, ಮುಂದಿನ ಯೋಜನೆಗಳು, ಉದ್ದೇಶ, ಇಂದಿನ ರಾಜಕಾರಣ, ದೇಶದ ಪರಿಸ್ಥಿತಿ ಇತ್ಯಾದಿ ಇತ್ಯಾದಿ ತಡೆ ಇಲ್ಲದೆ ಕೊರೆಯುತ್ತಿರುವಾಗ ಸಾಲ ಕೇಳಿದಾತ ತಾನು ಬಂದ ಉದ್ದೇಶವಮರೆತು ಈ ಮಹಾ ಭೈರಿಗೆಯಿಂದ ಬಿಡುಗಡೆಗೊಂಡರೆ ಸಾಕೆಂದು ಲಿಂಗಣ್ಣನಿಗೆ ಹೇಳದೆ ಕೇಳದೆ ಹೊರಟೇ ಹೋದ.ಬಹುಶಃ ದಾರಿಯಲ್ಲಿ ತಾನೇಕೆ ಹೋಗಿದ್ದೆ ಎಂದು ಯೋಚನೆ ಆಗಿರಬಹುದು.

ಎಲಿಯಣ್ಣ ನನ್ನ ಹಳೇ ಸ್ನೇಹಿತ. ಅವನೊಬ್ಬ ಒಳ್ಳೆಯ ಡ್ರೈವರ್ ಆಗಿದ್ದ. ಹಳೇಪರಿಚಯದ ಮೇಲೆ ಇತ್ತೀಚೆಗೆ ಮನೆಗೆ ಬಂದ. ದೇಹವನ್ನು ಬಗ್ಗಿಸಿ ನಮಸ್ಕಾರ ಮಾಡಿ ನನ್ನ ಕುಶಲ ವಿಚಾರಿಸಿದ, ಮನೆಯವರ ಬಗ್ಗೆ ಕೇಳಿಕೊಂಡ. ಇವನ ಈ ಪೀಠಿಕೆಯಲ್ಲಿಯೇ ನನ್ನನ್ನು ಖೆಡ್ಡಕ್ಕೆ ನೂಕುತ್ತಿದ್ದಾನೆಂದು ಗೊತ್ತಾಗಿ ಹೋಯಿತು. ಸುತ್ತಿಬಳಸಿ ಮಾತಾಡಿ, "....ಸ್ವಾಮಿ! ಮಗಳಿಗೆ ಸಣ್ಣಪ್ರಾಯ, ಮೊನ್ನೆ ತಾನೇ ೧೮ ಆಯಿತಪ್ಪ. ಒಳ್ಳೇ ವರ ಸಿಕ್ಕಿದ್ದಾನೆ.... ಒಳ್ಳೇ ಉದ್ಯೋಗದಲ್ಲಿದ್ದಾನೆ ಸ್ವಾಮೀ ಹುಡುಗನ ಕಡೆಯವರು ಅವರಾಗಿಯೇ ಮನೆಬಾಗಿಲಿಗೆ ಬಂದು ಕೇಳ್ತಿದ್ದಾರೆ .. ಬಿಡ್ಲಿಕ್ಕಾಗುತ್ತಾ! ನಾವೂ ನಮ್ಮ ಅಂತಸ್ತಿಗೆ ತಕ್ಕ ಹಾಗೆ ಮದುವೆಮಾಡಿ ಕೊಡಬೇಡವೇ ಬರುವ ತಿಂಗಳು ೧೦ನೇ ತಾರೀಕಿಗೆ ಮದುವೆ ನೀವು ಬರ್ಲೇಬೇಕು ಸ್ವಾಮಿ, ನಾವೆಷ್ಟಾದರೂ ಹಳೇಸ್ನೇಹಿತರಲ್ವಾ! ಸ್ವಾಮೀ!! ಒಂದು ವಿಷ್ಯ! ಒಂದು ವಿಷ್ಯ ಎಂದಾಗಲೇ ಗೊತ್ತಾಗಿ ಹೋಯಿತು. ಇದುವೇ ಅಸಲೀ ವಿಷಯ ಎಂದು ನನಗೆ....ಸ್ವಲ್ಪ ಹಣ ಕಮ್ಮಿ ಬಂದು ಬಿಟ್ಟದೆ. ಎಲ್ಲಾ ಜೋಡಿಸಿಕೊಂಡೆ. ಕಾಳಪ್ಪನವರು ; ಅದೇ ಇಂಜಿನಿಯರ್ ಕಾಳಪ್ಪನವರು ನಿಮಗೆ ಅವರು ಚೆನ್ನಾಗಿ ಗೊತ್ತುಂಟು. ಅವರು, ನಾನು ಕೇಳುವ ಮೊದಲೇ ಹತ್ತು ಸಾವಿರ ಕೊಟ್ಟರು. ನನಗೀಗ ಬೇಕಾಗಿರುವುದು ಬರೇ ೫೦೦೦. ಕಾಳಪ್ಪನವರನ್ನು ಕೇಳಿದರೆ ಖಂಡಿತಾ ಕೊಡ್ತಾರೆ. ಆದರೆ, ಕೊಡ್ತಾರೇಂತ ಮತ್ತೆ ಮತ್ತೆ ಕೇಳುವುದು ಚೆನ್ನಾಗಿರುತ್ತಾ ಸ್ವಾಮಿ? ನೀವು ಎಷ್ಟಾದರೂ ಹಳೇ ಪರಿಚಯಸ್ತರು ನೀವು ನನ್ನನ್ನು ಆದೂ ಮದುವೆಯಂತಹ ಪುಣ್ಯ ಕಾರ್ಯಕ್ರಮದಲ್ಲಿ ಖಂಡಿತವಾಗಿ ಸಹಕಾರ ಕೊಡ್ತೀರಿ ಎಂದು ನನಗೆ ಗೊತ್ತಿದೆ. ನೀವು ದೊಡ್ಡಮನಸ್ಸುಮಾಡಿ ಹಣ ಒದಗಿಸಿ ಕೊಟ್ಟರೆ ಮದುವೆ ಮಾರಣೇ ದಿನವೇ ಹಣ ವಾಪಸ್ ಸ್ವಾಮೀ ಇದು ನನ್ನಾಣೆ ಎಂದು ಹೇಳಿದಾಗ ನಾನು ಸಂಪೂರ್ಣವಾಗಿ ಖೆಡ್ಡದೊಳಗೆ ನನಗೆ ಗೊತ್ತಿಲ್ಲದೆ ಬಿದ್ದಿದ್ದೆ—ನಾಳೆ ಬನ್ನಿ ಎಂದು ಹೇಳಿದೆ.

ಬೆಳಗ್ಗೆ ೮ಕ್ಕೆ ಎಲಿಯಣ್ಣ ಮನೆ ಮುಂದೆ ಹಾಜರ್. ೧೦೦೦ ಕೊಟ್ಟೆ. ಧನ್ಯವಾದ ಹೇಳಿ ಹೋಗಿಯೇಬಿಟ್ಟ ಮಹಾರಾಯಾ, ಎಲಾ ಇವ್ನಾ! ಕೇಳಿದ್ದು ೫ ಸಾವಿರ ಒಂದು ಸಿಕ್ಕಿದ್ದೆ ಹೋಗೇ ಬಿಟ್ನಲ್ಲಾ ಎಂದ್ಕೊಳ್ಳುತ್ತಾ

ಜೇಬಿನೊಳಗಿದ್ದ ನಾಲ್ಕು ಸಾವಿರವನ್ನು ಸವರಿಕೊಂಡು ಸಂತೋಷಪಟ್ಟೆ.

ಮಾರನೆ ದಿನ ನನ್ನ ಸ್ನೇಹಿತನೊಬ್ಬ ಬಂದು, "ಏನಪ್ಪಾ, ಎಲಿಯಣ್ಣನಿಗೆ ಹಣ ಕೊಟ್ಟ?" ಎಂದು ವ್ಯಂಗ್ಯವಾಗಿ ಕೇಳಿದ. ನಾನು "ಹೂಂ" ಎಂದೆ. ಅದೇ ಎಲಿಯಣ್ಣ ಹೇಳ್ಕೊಂಡ "ನಾನು ಇನ್ನೂರೋ ಮುನ್ನೂರೋ ಸಿಗಬಹುದು ಎಂದ್ಕೊಂಡ್ರೆ ಸ್ವಾಮಿಯೋರು ದೊಡ್ಮನಸ್ಸು ಮಾಡಿ ಒಂದ್ಸಾವಿರ ಕೊಟ್ಟರು" ಎಂದಾಗ ನಾನು ಇಂಗು ತಿಂದ ಮಂಗನಂತಾಗಿದ್ದೆ. ಎಲಿಯಣ್ಣ ಮರಿಯದೆ ಮಗಳ ಮದುವೆ ಕಾಗದ ಕೊಟ್ಟ—ನಾನು ಮದುವೆಗೆ ಹೋಗಲಿಲ್ಲ.

ಮದುವೆ ಕಳೆದು ೬ ತಿಂಗಳು ಕಳೆದು ಹೋಯಿತು. ಮದುವೆ ಆದ ಮಾರಣೇ ದಿನವೇ ಹಣ ಕೊಡ್ತೇನೆ ಎಂದು 'ಆಣೆ' ಹಾಕಿದವನು ಮತ್ತೆ ಕಾಣ್ಸಿಕೊಳ್ಳೇ ಇಲ್ವಲ್ಲಾ ಎಂದು ಯೋಚಿಸುತ್ತಿದ್ದೆ. ಒಂದು ದಿನ ಎಲಿಯಣ್ಣ ಆಕಸ್ಮಿಕವಾಗಿ ರಸ್ತೆ ಮಧ್ಯದಲ್ಲಿಯೇ ಕಾಣಿಸಿಕೊಂಡ. 'ಏನು ಎಲಿಯಣ್ಣನವರೇ ಹೇಗಿದ್ದೀರಿ? ಎಂದು ವಿಚಾರಿಸಿದೆ. 'ಹೂಂ, ಹೂಂ ಚೆನ್ನಾಗಿದ್ದೇನೆ....' ಎಂದು ನನ್ನಿಂದ ತಪ್ಪಿಸಿಕೊಳ್ಳಲು ಚಡಪಡಿಸಿದ.

'ಮಗಳ ಮದುವೆ ಚೆನ್ನಾಗಾಯ್ತಾ?' ನಾನು ಪ್ರಶ್ನಿಸಿದೆ.

"ಆಯ್ತು, ಆಯ್ತು" ಎಂದು ಹೋಗಲು ಪ್ರಯತ್ನಿಸಿದ.

"ಅದ್ಸರಿ ಎಲಿಯಣ್ಣನವರೇ ನನ್ನ ಹಣ ಸಿಗಲಿಲ್ವಲ್ಲಾ?" ಎಂದು ಪ್ರಶ್ನಿಸಿದೆ. ಆ ಕ್ಷಣ ಎಲಿಯಣ್ಣ ಕಣ್ಣೀರುಗರೆಯುತ್ತಾ "ಸ್ವಾಮಿ, ಅದೇನ್ಹೇಳ್ಲಿ....ಎಲ್ಲಾ ನನ ಗ್ರಹಚಾರಸ್ವಾಮಿ; ಮಗನಿಗೆ ಆಕ್ಸಿಡೆಂಟ್ ಆಗ್ಹೋಯ್ತುಸ್ವಾಮಿ....ನಾನೀಗ ಬಹಳ ಕಷ್ಟದಲ್ಲಿದ್ದೇನೆ...." ಎಂದು ಹೇಳುತ್ತಿದ್ದಂತೆಯೇ ನಾನು ಆತನ ಮಾತನ್ನು ತುಂಡರಿಸಿ" ನೋಡಿ ಎಲಿಯಣ್ಣನವರೇ, ನಿಮ್ಮ ಮಗಳ ಮದುವೆ ಆಗಿ ೬ ತಿಂಗಳಾಯಿತು ನಿಮ್ಮ ಮಗನ ಆಕ್ಸಿಡೆಂಟ್ ಆದದ್ದು ಕಳೆದವಾರ. ನೀವು ಹಣ ತೆಗೆದುಕೊಳ್ಳುವಾಗ ಹೇಳಿದ್ದೇನು? ಮದುವೆ ಮಾರಣೆ ದಿನವೇ ಹಣ ಹಿಂತಿರುಗಿಸುತ್ತೇನೆಂದು. ನಿಮಗೆ ಮೋಸಮಾಡುವುದೇ ಉದ್ದೇಶ. ಹಾಗಿಲ್ಲದಿದ್ದರೆ ನೀವು ಎಂದೋ ಹಣ ಹಿಂತಿರುಗಿಸುತ್ತಿದ್ದಿರಿ. ನೀವು ಮೋಸಗಾರರು ಅಲ್ಲವೇ ಎಲಿಯಣ್ಣನವರೇ, ಏಕೆ ಅನಾವಶ್ಯವಾಗಿ ಮಗಳ ಮದುವೆಗೂ ಮಗನ ಆಕ್ಸಿಡೆಂಟ್‌ಗೂ ತಾಳೆ ಹಾಕ್ತೀರಿ ಎಂದಾಗ ಎಲಿಯಣ್ಣನವರಿಗೆ.

ಸಾಲವನು ಕೊಂಬಾಗ ಹಾಲೋಗರ ಉಂಡಂತೆ
ಸಾಲಿಗರು ಬಂದೆಳೆವಾಗ ಕಿಬ್ಬದಿಯ
ಕೀಲು ಮುರಿದಂತೆ ಸರ್ವಜ್ಞ

ಎಂದೆನಿಸಿರಬಹುದಲ್ಲವೇ?

ಜೀವಸತ್ತ್ವ 'ಇ' ನಿಮಗೇಕೆ ಬೇಕು?

ಡಿ. ವಿ. ಶಾಮಣ್ಣ

ನಂ. ೧೯೮೧, 'ಆರಭಿ'
೧ನೇ ಮೇನ್, ೩ನೇ ಕ್ರಾಸ್
ಶ್ರೀರಾಂಪುರ ೨ನೇ ಹಂತ, ಮೈಸೂರು-೨೩

ನ್ಯೂಯಾರ್ಕ್ ಪಟ್ಟಣದಲ್ಲಿ ಕಾರ್ಯ ನಿರ್ವಾಹಕರಾಗಿರುವ ಮೂವತ್ತಾರು ವರ್ಷ ವಯಸ್ಸಿನ ಅಲೆಕ್ಸಾಂಡ್ರ ಓವೆನ್ಸ್ ಪ್ರತಿದಿನ ಜೀವಸತ್ತ್ವ 'ಇ'ಯನ್ನು ಸೇವಿಸುತ್ತಾಳೆ. ಹಾಗೆಯೇ ನಲವತ್ತಾರು ವರ್ಷ ವಯಸ್ಸಿನ ಆಕೆಯ ಪತಿ ಮೈಕೇಲ್ ಕೂಡ. ಈ ಸಂಪೂರಕ ಜೀವಸತ್ತ್ವದ ಬಗ್ಗೆ ಅಲೆಕ್ಸಾಂಡ್ರ ಓದಿರುವುದೆಲ್ಲವೂ ಇದು ಬಹಳಷ್ಟು ಖಾಯಿಲೆಗಳಿಂದ ರಕ್ಷಣೆ ನೀಡಬಹುದೆಂಬುದನ್ನು ಸೂಚಿಸಿತ್ತು.

ವರದಿಗಳನ್ನು ಓದುವುದಕ್ಕೆ ಮುನ್ನವೇ, ತನ್ನ ೫೦ನೇ ವಯಸ್ಸಿನಿಂದ ೯೩ನೇ ವಯಸ್ಸಿನಲ್ಲಿ ತಾನು ಸಾಯುವ ತನಕವೂ 'ಇ' ಜೀವಸತ್ತ್ವವನ್ನು ಸೇವಿಸಿದ್ದ ಅಲೆಕ್ಸಾಂಡ್ರಳ ಅಜ್ಜಿ ಥೆಲ್ಮಾ ವಾನ್ ಆರ್ಸ್‌ಡೆಲ್‌ನಿಂದ ಅಲೆಕ್ಸಾಂಡ್ರ ಈ ಜೀವಸತ್ತ್ವದ ಬಗ್ಗೆ ದೃಢ ಪುರಾವೆ ಕೇಳಿದ್ದಳು. ತನ್ನ ಅರುವತ್ತರ ಕೊನೆಯಲ್ಲಿ ಇದರ ಸೇವನೆಯನ್ನು ಒಮ್ಮೆ ನಿಲ್ಲಿಸಿದಾಗ, ಆಗ ಕಾಣಿಸಿಕೊಂಡನ ನೋವುಗಳನ್ನು ತಾನು ಹೇಗೆ ಅನುಭವಿಸಿದಳೆನ್ನುವುದನ್ನು ಅಲೆಕ್ಸಾಂಡ್ರಳಿಗೆ ವಾನ್ ಆರ್ಸ್‌ಡೆಲ್ ತಿಳಿಸಿದ್ದಳು. ಆದರೆ 'ಇ' ಜೀವಸತ್ತ್ವ ಸೇವಿಸುವುದನ್ನು ಆರಂಭಿಸುತ್ತಿದ್ದಂತೆಯೇ ಆಕೆಗೆ ಲಘುತ್ವ ಹಿಂದಿರುಗಿತು ಮತ್ತು ಆಕೆ ಸಾಯುವ ತನಕವೂ ಅಸಾಮಾನ್ಯ ಜಾಗರೂಕತೆ ಮತ್ತು ಚುರುಕಿನಿಂದಿದ್ದಳು. ಅಲೆಕ್ಸಾಂಡ್ರಾಳ ಅಜ್ಜಿಯನ್ನಿಟ್ಟಷ್ಟೇ ಆರೋಗ್ಯವಾಗಿ ತಮ್ಮನ್ನು ಕೂಡ ಜೀವಸತ್ತ್ವ 'ಇ' ಇಡುತ್ತದೆಂದು ಅಲೆಕ್ಸಾಂಡ್ರ ಮತ್ತು ಆಕೆಯ ಪತಿ ಆಶಿಸುತ್ತಾರೆ.

ಇದನ್ನು ನಂಬುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಈ ಜೀವಸತ್ತ್ವದಿಂದ ಸಿಗಬಹುದಾದ ಲಾಭಗಳನ್ನು ಒಂದು ಸಂಶೋಧನಾ ಸಂಪತ್ತೇ ತಿಳಿಸುತ್ತದೆ. ಉದಾಹರಣೆಗೆ ೬೫ ವರ್ಷಕ್ಕೆ ಮೇಲ್ಪಟ್ಟ ೧೧ ಸಾವಿರ ಜನರ ಬಗ್ಗೆ ಅಮೆರಿಕಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಏಜಿಂಗ್ ನಡೆಸಿದ ಒಂದು ಅಧ್ಯಯನ 'ಇ' ಜೀವಸತ್ತ್ವವನ್ನು ತಪ್ಪದೇ ಸೇವಿಸಿದ್ದವರಲ್ಲಿ ಹೃದಯದ ಖಾಯಿಲೆಯಿಂದ ಸಾಯುವ ಸಂಭವ ಶೇ. ೪೧ರಷ್ಟು ಕಡಿಮೆ ಇರುತ್ತದೆಂಬುದನ್ನು ಪತ್ತೆ ಮಾಡಿದೆ. ಇದಲ್ಲದೆಯೆ,

ಮೂಲ: ಅನಿತಾ ಬಾರ್ತಲೋಮ್ಯೂ ಅವರ "ವೈ ಯು ನೀಡ್ ವಿಟಮಿನ್ ಇ" ಲೇಖನ.

ಈ ಸಂಪೂರಕವನ್ನು ಸೇವಿಸುವವರಲ್ಲಿ ಯಾವುದೇ ಕಾರಣದಿಂದ ಸಾಯುವ ಸಂಭವನೂ ಶೇ. ೨೭ರಷ್ಟು ಕಡಿಮೆ ಇರುತ್ತದೆ. ಇದರ ಅಧ್ಯಯನಗಳು, 'ಇ' ಜೀವಸತ್ತ್ವ ರಕ್ತನಾಳಗಳು ಗಡಸಾಗುವುದನ್ನು (ಏಥಿರೋಸ್ಕಿರೋಸಿಸ್) ತಡೆಗಟ್ಟುವುದರ ಮೂಲಕ ಹೃದಯಾಘಾತವನ್ನು ನಿವಾರಿಸುವುದರಲ್ಲಿ ಸಹಾಯ ಮಾಡುತ್ತದೆ; ಧೂಮಪಾನದಿಂದ ಆಗುವ ಹಾನಿಯನ್ನು ಮಿತಿಗೊಳಿಸುತ್ತವೆ: ದೇಹದ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ; ಎಲುಬು ಕೀಲು ನೋವುಗಳನ್ನು ಕಡಿಮೆ ಮಾಡುತ್ತದೆ ಹಾಗೂ ಬುದ್ಧಿಮಾಂದ್ಯದಿಂದಾಗುವ ಹಾನಿಯನ್ನು (ಅಲ್‌ಜೈಮರ್ಸ್ ಖಾಯಿಲೆ) ಕಡಿಮೆ ಮಾಡುತ್ತದೆ ಎಂಬುದನ್ನು ಸೂಚಿಸುತ್ತದೆ.

ಆದರೆ ನಮ್ಮಲ್ಲಿ ಹೆಚ್ಚಿನವರಿಗೆ ದಿನನಿತ್ಯದ ಆಹಾರದಲ್ಲಿಯೇ 'ಇ' ಜೀವಸತ್ತ್ವ ಸಿಕ್ಕುವುದಿಲ್ಲವೆ? "ಯೋಗ್ಯವಾದ ದಿನನಿತ್ಯದ ಆಹಾರವನ್ನು ಸೇವಿಸಿದರೆ ಸಾಕು —ಎಂದು ನಾನೂ ನಂಬಿದೆ" ಎನ್ನುತ್ತಾ ಡಾ॥ ನಾನ್ಸಿ ಸೈಡರ್ಮನ್ ಹೀಗೆ ಮುಂದುವರಿದರು "ಆದರೆ ನಿಜವಾಗಿಯೂ ಸಾಕಷ್ಟು 'ಇ' ಜೀವಸತ್ತ್ವ ನಮಗೆ ಸಿಕ್ಕುವುದಿಲ್ಲ." ದೇಹದ ರಕ್ಷಣೆಗೆ ಬೇಕಾಗುವ 'ಇ' ಜೀವಸತ್ತ್ವದ ಮಟ್ಟ ಅದು ಅತ್ಯಂತ ಕೇಂದ್ರೀಕೃತವಾಗಿರುವ ಆಹಾರ ಪದಾರ್ಥಗಳಾದ ಕಾಯಿ ಮತ್ತು ಬೀಜಗಳಿಂದ ದೊರೆಯುವುದಕ್ಕಿಂತಲೂ ಜಾಸ್ತಿ ಇರುತ್ತದೆ. ಕೇವಲ ೧೦೦ (ಅಂತಾರಾಷ್ಟ್ರೀಯ ಏಕಮಾನ) ಜೀವಸತ್ವಗಳಷ್ಟು 'ಇ' ಜೀವಸತ್ತ್ವವನ್ನು ಪಡೆಯಲು ಎರಡೂಕಾಲು ಕೆ.ಜಿ.ಗಳಷ್ಟು ಬಸಳೆ ಸೊಪ್ಪನ್ನೋ ನಾಲ್ಕು ಬಟ್ಟಲುಗಳಷ್ಟು ಕಡಲೆಕಾಯಿ ಬೀಜವನ್ನೋ ತಿನಬೇಕಾದೀತು!

'ಇ' ಜೀವಸತ್ತ್ವ ನಿಮ್ಮ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ:

ಬಾಸ್ಟನ್‌ನ ಟಫ್ಟ್ ವಿಶ್ವವಿದ್ಯಾಲಯದಲ್ಲಿ ಮಾನವ ಪೌಷ್ಟಿಕ ಆಹಾರದ ಬಗ್ಗೆ ಸಂಶೋಧಕರಾಗಿರುವ ಜೆಫ್ರಿ ಬ್ಲೂಮ್‌ಬರ್ಗ್‌ರವರ ಪ್ರಕಾರ, ದಿನನಿತ್ಯದ ಹಿತಕರ ಆಹಾರದ ಜೊತೆಗೆ 'ಇ' ಜೀವಸತ್ತ್ವ ಸೇರಿಸುವುದರಿಂದ ಹಲವಾರು ಪ್ರಯೋಜನಗಳು ದೊರೆಯಬಹುದು. "ನೆಗಡಿ, ಜ್ವರ, ಕ್ಷಯ ಮತ್ತು ಇತರ ಅಂಟುರೋಗಗಳಿಂದ ನೀವು ಹೆಚ್ಚು ಸುರಕ್ಷಿತರಾಗಿರಬಹುದೆಂದು ನಮ್ಮ ನಂಬಿಕೆ."

ಆರೋಗ್ಯಕರ ವೃದ್ಧರ ರೋಗನಿರೋಧಕ ವ್ಯವಸ್ಥೆಯ ಮೇಲೆ 'ಇ' ಜೀವಸತ್ತ್ವ ಪ್ರಭಾವವನ್ನು ನಾಲ್ಕು ತಿಂಗಳ ಒಂದು ಅಧ್ಯಯನದಲ್ಲಿ ಪರೀಕ್ಷಿಸಿದ ಟಫ್ಟ್ ವಿಶ್ವವಿದ್ಯಾಲಯದ ಸಂಶೋಧಕರು ಅದು ವ್ಯಕ್ತಿಗಳ ರೋಗನಿರೋಧಕ ಶಕ್ತಿಯನ್ನು ಹೆಚ್ಚು ಪರಿಣಾಮಕಾರಿ ಮಟ್ಟಕ್ಕೆ ಕೊಂಡೊಯ್ಯಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಸ್ವಯಂಪ್ರೇರಣೆಯಿಂದ ಪರೀಕ್ಷೆಗೆ ಒಳಪಟ್ಟಿದ್ದ ವಯಸ್ಸು ೬೫ ಮತ್ತು ಮೇಲ್ಪಟ್ಟ ೮೮ ವೃದ್ಧರನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಿ, ಮೊದಲನೆಯ ಗುಂಪಿನವರಿಗೆ ದಿನವಹಿ ೬೦ ಅಂತಾರಾಷ್ಟ್ರೀಯ ಏಕಮಾನಗಳಷ್ಟು 'ಇ' ಜೀವಸತ್ತ್ವವನ್ನೂ, ಎರಡನೆಯ ಗುಂಪಿನವರಿಗೆ ೨೦೦ ಅಂತಾರಾಷ್ಟ್ರೀಯ ಏಕಮಾನಗಳಷ್ಟನ್ನೂ, ಮೂರ

ನೆಯ ಗುಂಪಿನವರಿಗೆ ೮೦೦ ಅಂತಾರಾಷ್ಟ್ರೀಯ ಏಕಮಾನದಷ್ಟನ್ನೂ, ನಾಲ್ಕನೆಯ ಗುಂಪಿನವರಿಗೆ ಕೇವಲ ಪ್ಲಾಸಿಬೋವನ್ನೂ (‘ಇ’ ಜೀವಸತ್ತ್ವರಹಿತ ನಿರಪಾಯಕಾರಿ ವಸ್ತು—ಇದು ಪರೀಕ್ಷೆಗೆ ಒಳಪಟ್ಟಿರುವವರಿಗೆ ತಿಳಿದಿರುವುದಿಲ್ಲ) ಕೊಡಲಾಯಿತು.

ಈ ಅಧ್ಯಯನ ಹೊರಗೆಡಹಿದ ಸಂಗತಿಯು ಚಕಿತಗೊಳಿಸುವಂತಿತ್ತು. ಸಾಮಾನ್ಯವಾಗಿ ನಮಗೆ ವಯಸ್ಸಾಗುತ್ತಿದ್ದಂತೆ, ನಮ್ಮ ದೇಹದ ರೋಗನಿರೋಧಕ ಕೋಶಗಳು ಕಡಿಮೆ ಪರಿಣಾಮಕಾರಿಯಾಗುತ್ತವೆ ಮತ್ತು ರೋಗಗಳಿಂದ ಹೆಚ್ಚು ರಕ್ಷಣೆ ನೀಡುವುದಿಲ್ಲ. ಆದರೆ ‘ಇ’ ಜೀವಸತ್ತ್ವವನ್ನು ತೆಗೆದುಕೊಳ್ಳುತ್ತಿದ್ದ ಗುಂಪಿನವರ ರೋಗನಿರೋಧಕ ಕೋಶಗಳು ಈ ರೀತಿ ವರ್ತಿಸಲಿಲ್ಲ. “೬೫ ಮತ್ತು ೭೫ ವರ್ಷದವರ ಪ್ರತಿಕ್ರಿಯೆಯು ೪೦ ವರ್ಷ ವಯಸ್ಸಿನವರದಂತಿತ್ತು.”

೨೦೦ ಅಂತಾರಾಷ್ಟ್ರೀಯ ಏಕಮಾನಗಳಷ್ಟು ‘ಇ’ ಜೀವಸತ್ತ್ವವನ್ನು ಸೇವಿಸುತ್ತಿದ್ದವರು ೬೦ ಅಂತಾರಾಷ್ಟ್ರೀಯ ಏಕಮಾನಗಳಷ್ಟು ಸೇವಿಸುತ್ತಿದ್ದವರಿಗಿಂತ ಅಧಿಕ ರೋಗನಿರೋಧಕ ವ್ಯವಸ್ಥೆಯ ಬಲವೃದ್ಧಿ ಪಡೆದರು. ಹಾಗೆಯೇ ಇವರು ೮೦೦ ಅಂತಾರಾಷ್ಟ್ರೀಯ ಏಕಮಾನಗಳಷ್ಟು ಸೇವಿಸುತ್ತಿದ್ದವರಿಗಿಂತಲೂ ಹೆಚ್ಚು ರೋಗ ನಿರೋಧಕ ವ್ಯವಸ್ಥೆಯ ಬಲವೃದ್ಧಿಯನ್ನು ಪಡೆದರು. ಏಕೆ? ಸಂಶೋಧಕರು, ರೋಗ ನಿರೋಧಕ ವ್ಯವಸ್ಥೆಯ ಲಾಭಕ್ಕೆ ೨೦೦ ಅಂತಾರಾಷ್ಟ್ರೀಯ ಏಕಮಾನಗಳು ಅತ್ಯಂತ ಅನುಕೂಲ ಪ್ರಮಾಣವೆಂದು ಭಾವಿಸುತ್ತಾರೆ. ಸಂಪೂರಕಗಳನ್ನು ಕೊಳ್ಳುವಾಗ ಈ ಅಂಶವನ್ನು ನೆನಪಿನಲ್ಲಿಡುವುದು ಮುಖ್ಯ: ಹೆಚ್ಚು ಪ್ರಮಾಣ ಹೆಚ್ಚು ಒಳ್ಳೆಯದಲ್ಲದಿರಬಹುದು.

‘ಇ’ ಜೀವಸತ್ತ್ವ ಹೃದ್ರೋಗಗಳ ಅಪಾಯವನ್ನು ಕಡಿಮೆ ಮಾಡುತ್ತದೆ:

ದಲ್ಲಾಸ್‌ನ ಟೆಕ್ಸಾಸ್ ನೈಋತ್ಯ ವೈದ್ಯಕೀಯ ಕೇಂದ್ರದ ಡಾ|| ಈಶ್ವರಲಾಲ್ ಜಿಯೊಲಾಲ್‌ರವರು ‘ಇ’ ಜೀವಸತ್ತ್ವದ ಮೇಲಿನ ತಮ್ಮ ಸಂಶೋಧನೆಯಲ್ಲಿ, ಅದರ ಹೃದಯ ರಕ್ಷಣಾ ಪರಿಣಾಮಗಳನ್ನು ಕಂಡುಕೊಂಡಿದ್ದಾರೆ. ಇವರಿಗೆ ದೊರೆತಿರುವ ಫಲಿತಾಂಶಗಳು ಇವರ ಪರೀಕ್ಷೆಗೆ ಬೆಂಬಲ ನೀಡಿವೆ.

ಇವರು ೨೧ ಆರೋಗ್ಯವಂತ ವ್ಯಕ್ತಿಗಳಿಗೆ ಸಾಮಾನ್ಯವಾಗಿ ಬೇಕಾಗುವುದಕ್ಕಿಂತಲೂ ಅತಿ ಹೆಚ್ಚು ಪ್ರಮಾಣದಲ್ಲಿ: ೧೨೦೦ ಅಂತಾರಾಷ್ಟ್ರೀಯ ಏಕಮಾನಗಳಷ್ಟು ‘ಇ’ ಜೀವಸತ್ತ್ವವನ್ನು ಎಂಟು ವಾರಗಳ ಕಾಲ ನೀಡಿದರು. ಹೃದಯಕ್ಕೆ ಹಾನಿಕರವಾದ ಕೊಲೆಸ್ಟ್ರಾಲ್ ಆಮ್ಲಜನಕದೊಡನೆ ಸಂಯುಕ್ತವಾಗುವುದನ್ನು ‘ಇ’ ಜೀವಸತ್ತ್ವ ಕಡಿಮೆ ಮಾಡಿ, ಹೃದಯದ ಶುದ್ಧ ರಕ್ತನಾಳಗಳಲ್ಲಿ ಗುಳ್ಳೆ ಬೆಳವಣಿಗೆಯಲ್ಲಿ ಪಾಲ್ಗೊಳ್ಳುವ ಕೋಶಗಳ ಚಟುವಟಿಕೆಯನ್ನು ದುರ್ಬಲಗೊಳಿಸಿತು. ಅಂದರೆ ‘ಇ’ ಜೀವಸತ್ತ್ವ, ಏಥಿರೋಸ್ಕ್ಲೆರೋಸಿಸ್ ಎಂಬ ಶುದ್ಧ ರಕ್ತನಾಳಗಳನ್ನು ಗಡಸು ಮಾಡುವ ರೋಗವನ್ನು ತಡೆಗಟ್ಟುತ್ತದೆಂಬುದನ್ನು ತೋರಿಸಿದಂತಾಗುತ್ತದೆ. ಹೀಗೆ ಇದು ಇಬ್ಬಗೆಯ ರಕ್ಷಣೆ ಒದಗಿಸುತ್ತದೆ.

ದಿ ಅಮೆರಿಕನ್ ಹಾರ್ಟ್ ಅಸೋಸಿಯೇಷನ್ ಇದನ್ನು ಒಪ್ಪಿದೆ: "ಹೃದ್ರೋಗಗಳನ್ನು ತಡೆಯಲು ೧೯೯೬ರಲ್ಲಿ ಮಾಡಿದ ಹತ್ತು ಅಗ್ರಗಣ್ಯ ಸಂಶೋಧನೆಗಳಲ್ಲಿ ಇದು ಒಂದೆಂದು" ಸಾರಿದೆ.

ಕ್ಯಾನ್ಸರ್ ವಿರುದ್ಧ 'ಇ' ಜೀವಸತ್ತ್ವವನ್ನು ಪರೀಕ್ಷಿಸಿದಾಗ ವಿರುದ್ಧ ಪುರಾವೆಗಳು ದೊರೆತವು. ಕ್ಯಾನ್ಸರ್ ಸಂಭವದಲ್ಲಿ ಯಾವ ಬದಲಾವಣೆಯೂ ಕಂಡುಬರದಿದ್ದ ಅಧ್ಯಯನಗಳು ಹಲವಾದರೆ ಮತ್ತೆ ಹಲವು ಇದನ್ನು ಸೇವಿಸುವವರಲ್ಲಿ ಕ್ಯಾನ್ಸರ್ ಸಂಭವ ಕಡಿಮೆ ಇರುತ್ತದೆಂದು ತೋರಿಸಿದುವು.

ಯು. ಎಸ್. ರಾಷ್ಟ್ರೀಯ ಕ್ಯಾನ್ಸರ್ ಸಂಸ್ಥೆಯ ಆಶ್ರಯದಲ್ಲಿ ಚೀನಾದಲ್ಲಿ ೨೯,೦೦೦ಕ್ಕೂ ಹೆಚ್ಚು ವಯಸ್ಕರ ಮೇಲೆ ನಡೆದ ಒಂದು ಅಧ್ಯಯನದಲ್ಲಿ, ಒಂದು ಗುಂಪಿಗೆ 'ಇ' ಜೀವಸತ್ತ್ವ, ಬೀಟಾ ಕ್ಯಾರೋಟಿನ್ ಮತ್ತು ಸೆಲೆನಿಯಂಗಳ ಸಂಯೋಜನೆಯನ್ನು ಕೊಡಲಾಯಿತು. ಈ ಗುಂಪಿನವರಲ್ಲಿ "ಕ್ಯಾನ್ಸರ್ ಹಾಗೂ ಕ್ಯಾನ್ಸರ್‌ನಿಂದ ಸಾವು ಗಮನಾರ್ಹವಾಗಿ ಕಡಿಮೆಯಿತ್ತು" ಎಂದು ಪೇನ್ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಔಷಧಶಾಸ್ತ್ರ ಪ್ರಾಧ್ಯಾಪಕರಾಗಿರುವ ಡಾ. ಓಮರ್ ಕುಸುಕ್ ಹೇಳುತ್ತಾರೆ.

ಹಿಂದೆ, ಇರ್‌ವೈನ್‌ನಲ್ಲಿರುವ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಕಾರ್ಲ್ ಕಾಟ್‌ಮನ್‌ರವರು, ವೈದ್ಯಕೀಯ ಸಮ್ಮೇಳನಗಳಲ್ಲಿ, ತಮ್ಮಂಥಹ ಸಂಶೋಧಕರು ಆಲ್‌ಜೀಮರ್ಸ್ ಖಾಯಿಲೆಯ (ಮಾನಸಿಕ ಸಾಮರ್ಥ್ಯ ಮತ್ತು ನೆನಪನ್ನು ಕ್ಷೀಣಿಸುವ ಒಂದು ರೋಗ) ಭಯಾನಕ ಮುನ್ನಡೆಯನ್ನು ತಡೆಯುವುದಕ್ಕೆ ಇನ್ನೂ ಯಾವ ಬಗೆಯ ಉಪಾಯವನ್ನೂ ಕಂಡುಹಿಡಿಯುವುದಕ್ಕಾಗದಿರುವ ಬಗ್ಗೆ ಖೇದ ವ್ಯಕ್ತಪಡಿಸುತ್ತಿದ್ದರು. ಮುಂದೊಂದು ದಿನ, ಅವರು ತಮ್ಮ ಪ್ರಯೋಗಾಲಯದಲ್ಲಿ, ಸೂಕ್ಷ್ಮದರ್ಶಕದ ಕೆಳಗೆ, ಈ ಸಮಸ್ಯೆಗೆ ಉತ್ತರವಾಗಬಹುದಾದ ಸಂಗತಿಯೊಂದನ್ನು ಕಂಡರು. ನರದ ಕೋಶಗಳಿಗೆ ಬೀಟಾ ಅಮೈಲಾಯ್ಡನ್ನು (ಆಲ್‌ಜೀಮರ್ಸ್ ರೋಗದಿಂದ ನರಳುತ್ತಿರುವವರ ಮಿದುಳಿನಲ್ಲಿ ಶೇಖರವಾಗುವ ವಸ್ತು) ಸೇರಿಸಿದಾಗ, ಮಿದುಳಿನ ಕೋಶಗಳು ಶಿಥಿಲಗೊಂಡು, 'ಆತ್ಮಹತ್ಯೆ'ಯನ್ನು ಮಾಡಿಕೊಂಡುವು. ಆದರೆ 'ಇ' ಜೀವಸತ್ತ್ವವನ್ನು ಸೇರಿಸಿದಾಗ ಈ ಕೋಶಗಳ 'ಆತ್ಮಹತ್ಯೆ'ಯು ಆಗಲಿಲ್ಲ. ಕೋಶಗಳು ಆರೋಗ್ಯಕರವಾಗಿಯೇ ಉಳಿದುವು. 'ಇ' ಜೀವಸತ್ತ್ವ ಈ ರಕ್ಷಣಾ ಪರಿಣಾಮವನ್ನು ಜೀವಂತ ಮಿದುಳಿನಲ್ಲಿಯೂ ಪುನರಾವೃತ್ತಿ ಪಡಿಸಬಹುದೆ ?

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಏಜಿಂಗ್‌ನ ಹಣ ಸಹಾಯದಿಂದ ನಡೆಸಿದ ಎರಡು ವರ್ಷದ ಒಂದು ಅಧ್ಯಯನವು ಆಲ್‌ಜೀಮರ್ಸ್ ರೋಗದಿಂದ ಸಾಧಾರಣ ಮಾನಸಿಕ ಸಾಮರ್ಥ್ಯವನ್ನು ಕಳೆದುಕೊಂಡಿರುವ ೩೪೧ ಜನರ ಮೇಲೆ, ೨೩ ಕೇಂದ್ರಗಳಲ್ಲಿ, ಪಾರ್ಕಿನ್‌ಸನ್ ರೋಗಕ್ಕೆ ಕೊಡುವ ಮದ್ದು ಸೆಲಿಜಿಲೀನ್ ಅಥವಾ 'ಇ' ಜೀವಸತ್ತ್ವ—ಇವೆರಡರಲ್ಲಿ ಯಾವುದು ಆಲ್‌ಜೀಮರ್ಸ್ ರೋಗದ ಈ ಕೆಳಗಿನ ನಾಲ್ಕು ಅಂಶಗಳ ದಾಳಿಯನ್ನು

ಮುಂದೂಡುತ್ತದೆ ಎನ್ನುವುದನ್ನು ವಿಚಾರ ಮಾಡಿತು:

ಸ್ನಾನ, ಬಟ್ಟೆ ಹಾಕಿಕೊಳ್ಳುವುದು ಮುಂತಾದ ಮೂಲ ಚಟುವಟಿಕೆಗಳನ್ನು ಮಾಡಲೂ ಸಾಮರ್ಥ್ಯವಿಲ್ಲದಿರುವುದು; ಉಗ್ರವಾದ ಮಾನಸಿಕ ಕ್ಷೀಣತೆ; ಪೂರ್ಣ ಪಾಲನೆ ಅಗತ್ಯವೆನಿಸಿ ಆಸ್ಪತ್ರೆಗೆ ದಾಖಲಾಗುವುದು; ಅಥವಾ ಸಾವು. 'ಇ' ಜೀವಸತ್ತ್ವವನ್ನು ಸೇವಿಸದೆ ರೋಗಿಗಳಿಗೆ ಮೇಲಿನ ಯಾವುದಾದರೂ ಒಂದು ಸ್ಥಿತಿಯನ್ನು ತಲಪಲು ಹದಿನಾಲ್ಕುವರೆ ತಿಂಗಳು ಬೇಕಾದರೆ, ಸೇವಿಸಿದವರಿಗೆ ಸರಾಸರಿ ೨೨ ತಿಂಗಳು ಬೇಕಾದುವು—ಅಂದರೆ ರೋಗದಿಂದಾಗುವ ಅನಿವಾರ್ಯ ಅವನತಿಯನ್ನು ಏಳೂವರೆ ತಿಂಗಳುಗಳಷ್ಟು ಮುಂದೂಡಿದಂತಾಗುತ್ತದೆ. ಸೆಲೆಜಿಲೀನ್ ಕೂಡ ಇಂತಹುದೇ ಪರಿಣಾಮವನ್ನು ಬೀರಿತ್ತು.

ಜೀವಸತ್ತ್ವ 'ಇ' ಯಾವಾಗಲೂ ಸುರಕ್ಷಿತವೆ?

ಈ ಸೂಕ್ಷ್ಮ ಪೋಷಕ ಆಹಾರದ ಸಂಪೂರಕಗಳು ಹೆಚ್ಚಿನ ಜನರಿಗೆ (೧೦೦೦ ಅಂತಾರಾಷ್ಟ್ರೀಯ ಏಕಮಾನಗಳವರೆಗೂ) ಸುರಕ್ಷಿತವೆನಿಸಿದರೂ ಹಲವು ಷರತ್ತುಗಳಿವೆ. ಹೃದಯ ರೋಗದಿಂದ ರಕ್ಷಣೆಗೆ ನೀವೇನಾದರೂ ಆ್ಯಸ್ಪಿರಿನ್ ತೆಗೆದುಕೊಳ್ಳುತ್ತಿದ್ದರೆ, ವೈದ್ಯರ ಸಲಹೆ ಪಡೆಯಿರಿ. ಆ್ಯಸ್ಪಿರಿನ್‌ನಂತೆಯೇ, 'ಇ' ಜೀವಸತ್ತ್ವ ಕೂಡ ರಕ್ತನಾಳಗಳನ್ನು ತೆಳುಮಾಡುವುದರಿಂದ, ವೈದ್ಯರು ನೀವು ಇವನ್ನು ಎಷ್ಟು ತೆಗೆದುಕೊಳ್ಳಬೇಕೆಂಬುದನ್ನು ಸರಿಹೊಂದಿಸಲು ಇಚ್ಛಿಸಬಹುದು. 'ಇ' ಜೀವಸತ್ತ್ವವು ರಕ್ತಸ್ರಾವವನ್ನು ಚುರುಕುಗೊಳಿಸುವುದರಿಂದ, ಇದನ್ನು ಶಸ್ತ್ರಚಿಕಿತ್ಸೆಗೆ ಮುನ್ನ ತೆಗೆದುಕೊಳ್ಳಬೇಡಿ, ಅಥವಾ ರಕ್ತ ಹೆಪ್ಪುಗಟ್ಟುವುದನ್ನು ತಡೆಯುವ ಔಷಧಿಗಳನ್ನು ಉಪಯೋಗಿಸುತ್ತಿದ್ದರೂ ಸೇವಿಸಬೇಡಿ.

'ಇ' ಜೀವಸತ್ತ್ವದ ಗುಣಗಳನ್ನು ಕಳೆದ ೩೦ ವರ್ಷಗಳಿಂದಲೂ ಕೊಂಡಾಡುತ್ತಿರುವ ಜನಪ್ರಿಯ ಪುಸ್ತಕ 'ವೈಟಮಿನ್ ಬೈಬಲ್'ನ ಲೇಖಕ ಔಷಧತಜ್ಞ ಅರ್ಲ್ ಮಿಂಡೆಲ್ 'ಇ' ಜೀವಸತ್ತ್ವವನ್ನು 'ಅದ್ಭುತ ಸಂಪೂರಕ'ವೆಂದು ಕರೆದಿದ್ದಾರೆ. ಆದರೆ ಈತ ಕೂಡ, ನಿಮಗೆ ಥೈರಾಯಿಡ್‌ನ ತೊಂದರೆಯಾಗಲೀ, ಸಂಧಿವಾತ ಹೃದ್ರೋಗವಾಗಲೀ ಇದ್ದರೆ, ಈ ಸಂಪೂರಕವನ್ನು ಜಾಗರೂಕತೆಯಿಂದ ಸೇವಿಸಬೇಕೆಂದು ಸೂಚಿಸುತ್ತಾರೆ.

ಭಕ್ತಿ ಗೌರವಗಳಿರುವಲ್ಲಿ ಪರಮಾತ್ಮನ ಸಾಕ್ಷಾತ್ಕಾರವಿದ್ದೇ ಇರುತ್ತದೆ. ಉತ್ತಮ ಗುಣ ನಡತೆಯಿರುವಲ್ಲಿ ಮಾತ್ರ ಭಕ್ತಿ ಗೌರವಗಳ ಸಾಕ್ಷಾತ್ಕಾರವಿರುತ್ತದೆ.

—ರಾಮದಾಸ

ಅಂತಕನ ದೂತರಿಂದ ಪಾರಾದದ್ದು

ಭಾರತಿ ಭಟ್

೫೩೩, ೧೫ ನೇ ಮೈನ್
೫ ನೇ ಕ್ರಾಸ್, ಸರಸ್ವತೀಪುರ
ಮೈಸೂರು-೫೭೦ ೦೦೯

ಪಾಶ್ಚಲ್ ಶೋ ಥ್ವೇ ಬರ್ಮಾದ ಒಬ್ಬ ವಿದ್ಯಾರ್ಥಿ. ೧೯೮೭ರಲ್ಲಿ ಮಂಡಲೈಗೆ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಹಳ್ಳಿಯಿಂದ ಬಂದಿದ್ದ. ಅಲ್ಲಿ ಆತನಿಗೆ ಮೋ ಎಂಬ ಹುಡುಗಿಯ ಪರಿಚಯವಾಯಿತು. ಸ್ವಲ್ಪ ಸಮಯದಲ್ಲೇ ಪರಿಚಯ ಪ್ರೇಮಕ್ಕೆ ತಿರುಗಿತು.

ಮೋಳ ತಂದೆ ಸೈನ್ಯದಲ್ಲಿ ಒಬ್ಬ ಪ್ರಮುಖ ಅಧಿಕಾರಿ, ಜನರಲ್ ಆಗಿದ್ದ. ಆದರೆ ಎರಡು ವರ್ಷಗಳ ಹಿಂದೆ ದಂಗೆಕೋರರನ್ನು ಮಣಿಸುವ ಪ್ರಯತ್ನದಲ್ಲಿದ್ದಾಗ ಆತನನ್ನು ಅವನ ಕಡೆಯವರೇ ಯಾರೋ ಗುಂಡು ಹಾಕಿ ಕೊಂದಿದ್ದರು. ಅವನನ್ನು ಕೊಲ್ಲಿಸಿದ್ದು ಯಾರು ಎಂಬುದನ್ನು ಕಂಡುಹಿಡಿಯಬೇಕೆಂಬುದು ಮೋಳನ ನಿರ್ಧಾರವಾಗಿತ್ತು. ಆದರೆ ಆ ಸಮಯದಲ್ಲಿ ಸರಕಾರದವರು ಏನು ಮಾಡಿದರೂ ಅವನ್ನು ಪ್ರಶ್ನಿಸುವಹಾಗಿರಲಿಲ್ಲ. ಯಾಕೆಂದರೆ, ಪ್ರಶ್ನಿಸಿದವರು ಹಾಗೆಯೇ ಕಾಣೆಯಾಗುತ್ತಿದ್ದರು.

ಸಮಯವಿದ್ದಾಗಲೆಲ್ಲಾ ಪಾಶ್ಚಲ್ ಮೋಳ ಜೊತೆ ಇರುತ್ತಿದ್ದ. ಅವರಿಬ್ಬರು ಹಲವಾರು ವಿಷಯಗಳನ್ನು ಚರ್ಚಿಸುತ್ತಿದ್ದರು. ಅವರಿಗಿಂತ ದೊಡ್ಡವರು ಉಸಿರೆತ್ತಲೂ ಅಂಜುತ್ತಿದ್ದ ವಿಷಯಗಳನ್ನು ಕೂಡ ಅವರು ತಮ್ಮೊಳಗೆ ಚರ್ಚಿಸುತ್ತಿದ್ದರು. ಬರ್ಮಾದ ಸರಕಾರ ಎಂಥ ದೌರ್ಜನ್ಯಗಳನ್ನು ನಡೆಸುತ್ತಿದೆ ಎಂಬ ವಿಷಯದಲ್ಲಿ ಆಕೆ ಆತನ ಕಣ್ಣು ತೆರೆಸಿದಳು. ಅಂಥ ಕೃತ್ಯಗಳನ್ನು ನಿಲ್ಲಿಸುವಂತೆ ಸರಕಾರದ ಮೇಲೆ ಒತ್ತಡ ಹೇರಲು ಎಲ್ಲರನ್ನೂ ಒಟ್ಟು ಸೇರಿಸುವುದು ಅವಶ್ಯ ಎಂಬುದನ್ನೂ ಆಕೆ ಆತನಿಗೆ ವಿವರಿಸಿ ಹೇಳಿದಳು. "ಇದಕ್ಕಾಗಿ ನಾವು ಮೆರವಣಿಗೆ ನಡೆಸಿ ಶಾಂತ ರೀತಿಯಲ್ಲಿ ಪ್ರತಿಭಟನೆ ನಡೆಸಬೇಕು" ಎಂದು ಯಾವಾಗಲೂ ಆಕೆ ಆತನನ್ನು ಒತ್ತಾಯಿಸುತ್ತಿದ್ದಳು.

ಇತರ ವಿದ್ಯಾರ್ಥಿಗಳೂ ಈ ಅಭಿಪ್ರಾಯದಲ್ಲೇ ಇದ್ದರಾದ ಕಾರಣ, ೧೯೮೮ನೇ ಮಾರ್ಚ್ ರಂದು ಮೊದಲನೆಯ ಬಾರಿಗೆ ವಿದ್ಯಾರ್ಥಿಗಳ ಪ್ರತಿಭಟನೆ ನಡೆಯಿತು. ಆದರೆ ಸರಕಾರ ಒಡನೆಯೇ ಕಾಲೇಜು ಮತ್ತು ಯುನಿವರ್ಸಿಟಿಗಳನ್ನು ಮುಚ್ಚಿ ಪ್ರತಿಭಟನೆಯನ್ನು ಚಿವುಟಿ ಹಾಕಿತು. ಪಾಶ್ಚಲ್ ಮತ್ತು ಆತನ ಸ್ನೇಹಿತರು ಉಪಾಧ್ಯಾಯರಿಲ್ಲದಿರುವಾಗಲೂ ತಮ್ಮ ಅಭ್ಯಾಸಗಳನ್ನು ಮುಂದುವರಿಸಲು ಪ್ರಯತ್ನಿಸಿದರು.

ಮೂಲ : ಡಿಸೆಂಬರ್ ೯೮೮ ರ ರೀಡರ್ಸ್ ಡೈಜೆಸ್ಟ್‌ನಲ್ಲಿನ ಮೈಕೆಲ್ ಅವರ ಲೇಖನ.

ಅನಂತರ ಏಪ್ರಿಲ್ ತಿಂಗಳ ಸಾಯಂಕಾಲದ ಒಂದು ದಿವಸ ಅವರಿಬ್ಬರ ಮಾತು ಕತೆಗೆ ಮೋ ಎಂದಿನಂತೆ ಬಂದಿರಲಿಲ್ಲ. ಅವಳಿಗಾಗಿ ಬಹಳ ಹೊತ್ತು ಕಾದಿದ್ದ ಪಾಶ್ಚಾಲ್ ಅನಂತರ ಅವಳನ್ನು ಎಲ್ಲಾ ಕಡೆಯೂ ಹುಡುಕಾಡಿದ. ಆದರೆ ಅವಳು ಎಲ್ಲೂ ಸಿಗಲಿಲ್ಲ. ಅವನ ಇತರ ಸ್ನೇಹಿತರಿಗೂ ಆಕೆ ಕಾಣಸಿಕ್ಕಿರಲಿಲ್ಲ. ಬಹುಶಃ ಆಕೆ ಊರಿಗೆ ಹೋಗಿರಬಹುದೆಂದು ಅವನ ಸ್ನೇಹಿತರು ಹೇಳಿದರು.

ಹೀಗೆ ಒಂದು ವಾರ ಕಳೆಯಿತು. ಪಾಶ್ಚಲ್ ತನ್ನ ಕೋಣೆಯಲ್ಲಿ ಅಭ್ಯಾಸ ಮಾಡಲು ಪ್ರಯತ್ನಿಸುತ್ತಿದ್ದ. ಆದರೆ ಆತನ ಮನಸ್ಸು ಅದರಲ್ಲಿ ನಿಲ್ಲುತ್ತಿರಲಿಲ್ಲ. ಅಷ್ಟರಲ್ಲಿ ಗಾಯಗೊಂಡ ಮತ್ತು ನಿಶ್ಯಕ್ತಿಯಿಂದ ನಡುಗುತ್ತಿದ್ದ ಮೋ ಅವನ ಕೋಣೆಯೊಳಕ್ಕೆ ಬಂದಳು. ಪಾಶ್ಚಲ್ ಓಡಿ ಹೋಗಿ ಆಕೆ ಕೆಳಗೆ ಬೀಳದಂತೆ ಹಿಡಿದುಕೊಂಡ. ಆಕೆಯ ಶರೀರದ ಎಲುವುಗಳೆಲ್ಲ ಮುರಿದ ಕೋಲುಗಳಂತೆ ಅವನ ಕೈಗಳಿಗೆ ತೊಡರಿದುವು.

"ನೀನು ಎಲ್ಲಿಗೆ ಹೋಗಿದ್ದೆ?"

"ಜೈಲಿಗೆ" ಆಕೆ ಒಡೆದ ಸ್ವರದಲ್ಲಿ ಉಸುರಿದಳು. "ಅವರು ನನ್ನ ತಲೆಗೆ ಹೊಡೆದರು, ಮತ್ತು ಕೋಲಿನಿಂದ ಬಹಳ ಹೊಡೆದರು". ಹೀಗೆ ಹೇಳುತ್ತಾ ಆಕೆ ಬಿಕ್ಕಿ ಬಿಕ್ಕಿ ಅತ್ತಳು.

"ನನ್ನನ್ನು ಜೈಲಿನಿಂದ ಹೊರಗೆ ಹೋಗಲು ಬಿಡುವ ಮೊದಲು ಮೂವರು ಅಧಿಕಾರಿಗಳು ನನ್ನ ಕೋಣೆಗೆ ಬಂದು ನನ್ನನ್ನು ಕಾಲ್ಚೆಂಡನ್ನು ತುಳಿಯುವ ಹಾಗೆ ಮೂರು ಬದಿಗಳಲ್ಲಿ ನಿಂತುಕೊಂಡು ತುಳಿದರು. ನನಗೆ ಎಚ್ಚರ ತಪ್ಪುತ್ತಿದ್ದಂತೆ ಮೂವರೂ ನನ್ನನ್ನು ಒಬ್ಬೊಬ್ಬರಾಗಿ ರೇಪ್ ಮಾಡಿದರು.

"ಅನಂತರ ಅವರು ಕೇಕೆಹಾಕಿ ಹೇಳಿದರು: ಪ್ರಜಾಪ್ರಭುತ್ವ ಬೇಕೆಂದು ಹೇಳುವವರಿಗೆ ಇದೇ ಗತಿ ಎಂಬುದನ್ನು ಮರೆಯಬೇಡ."

ಎರಡು ವಾರಗಳ ಅನಂತರ ಮೋ ಇನ್ನೊಮ್ಮೆ ಕಾಣೆಯಾದಳು. ಅವಳನ್ನು ಜೈಲಿನಿಂದ ಹೊರಗೆ ಹೋಗಲು ಬಿಟ್ಟಿದ್ದು ಉಳಿದವರಿಗೆ ಹೆದರಿಕೆ ಹುಟ್ಟಿಸುವುದಕ್ಕಾಗಿ ಮಾತ್ರ ಎಂದು ಪಾಶ್ಚಲನಿಗೆ ಅರ್ಥವಾಯಿತು. ಇದಾಗಿ ಒಂದು ತಿಂಗಳು ಕಳೆಯುವುದರೊಳಗೆ ಅಲ್ಲಿಂದ ೮೦ ಕಿಲೋಮಿಟರ್ ದೂರ ಶ್ವೆಬೋ ಎಂಬಲ್ಲಿರುವ ಅವಳ ತಾಯಿಯಿಂದ ಅವನಿಗೆ ಒಂದು ಕಾಗದ ಬಂತು. ಮೋ ಜೈಲಿನಲ್ಲಿ ಸತ್ತುಹೋಗಿದ್ದಾಳೆಂದು ಆಕೆಗೆ ಜೈಲಿನವರು ತಿಳಿಸಿದ್ದರು. ಆದರೆ ಯಾಕೆ ಮತ್ತು ಹೇಗೆ ಸತ್ತಳೆಂಬುದನ್ನು ಅವರು ತಿಳಿಸಿರಲಿಲ್ಲ.

ಇದನ್ನು ತಿಳಿದು ಪಾಶ್ಚಾಲನ ಹೃದಯ ಹಿಂಡಿದಂತಾಯಿತು. ನೋವಿನಿಂದ ಅವನ ಮನಸ್ಸು ಕುರುಡಾಯಿತು. ಆದರೂ ಮೋಳ ಧೈರ್ಯ ಮತ್ತು ಆಕೆಯ ಕೊನೆಯ ಮಾತು ಆತ ತನ್ನ ಸ್ತಿಮಿತವನ್ನು ಕಳೆದುಕೊಳ್ಳದಂತೆ ಮಾಡಿತು. "ಈಗ ನಾವು ನಿದ್ರಿಸೋಣ. ಕಾದಾಡಲು ನಮಗೆ ಇನ್ನೊಂದು ದಿವಸ ಇದೆ" ಎಂದು ಆಕೆ ಹೇಳಿದ್ದಳು.

ಸರಕಾರಕ್ಕೆ ವಿರುದ್ಧವಾದ ಪ್ರತಿಭಟನೆಗಳು ಊರಿಂದೂರಿಗೆ ಹಬ್ಬತೊಡಗಿದುವು. ಯುನಿವರ್ಸಿಟಿ ಮುಚ್ಚಿಯೇ ಇರುವುದೆಂಬ ವಿಷಯ ಸ್ಪಷ್ಟವಾಗಿತ್ತು. ಆಗಸ್ಟ್ ಮೊದಲ

ಸಾರದಲ್ಲಿ ೪೧ ಜನ ವಿದ್ಯಾರ್ಥಿಗಳನ್ನು ಬಂಧಿಸಿ ಒಂದು ಲಾರಿಯಲ್ಲಿ ಕೂಡಹಾಕಿ ಆ ಲಾರಿಯನ್ನು ಮಧ್ಯಾಹ್ನದ ಉರಿಬಿಸಿಲಿನಲ್ಲಿ ನಿಲ್ಲಿಸಲಾಯಿತು. ಲಾರಿಯೊಳಗೆ ವಿದ್ಯಾರ್ಥಿಗಳು ಉಸಿರುಗಟ್ಟಿ ಸಾಯುತ್ತಿದ್ದರು. ಇದನ್ನು ನೋಡಿ ಸಾಮಾನ್ಯ ಜನರೂ ದಂಗೆಯೆದ್ದರು.

ಈ ರೀತಿ ದಂಗೆಯೆದ್ದವರ ಮೇಲೆ ಗುಂಡು ಹಾರಿಸಿ, ಒಂದು ಸಾವಿರಕ್ಕೂ ಹೆಚ್ಚು ಜನರನ್ನು ಕೊಂದರು. ಪ್ರತಿಭಟಿಸುವವರು ಮೆರವಣಿಗೆಯಲ್ಲಿ ಹೋದುದಲ್ಲದೆ ಬೇರೇನನ್ನೂ ಮಾಡಿರಲಿಲ್ಲ. ನೆವಿನ್ ನ ಚಿತ್ರವನ್ನು ಬಿಟ್ಟು ಬೇರೇನನ್ನೂ ಸುಟ್ಟಿರಲಿಲ್ಲ. ಆದರೂ ರಕ್ತದ ಓಕುಳಿ ಹರಿಯಿತು. ಇದರಿಂದ ಪೂರ್ಣ ನಿರಾಶೆಗೊಂಡ ಪಾಶ್ಚಲ್ ತನ್ನ ಹಳ್ಳಿಗೆ ಹಿಂದಿರುಗಿದ.

ಆತನ ಹಳ್ಳಿ ಪರ್ವತಗಳ ನಡುವೆ ಇತ್ತು. ಸುತ್ತಲೂ ದಟ್ಟವಾದ ಕಾಡು. ಗುಡ್ಡದ ಮೇಲೆ ನಿಂತು ನೋಡಿದರೆ ದೂರದಲ್ಲಿ ಮೋಬಿ ಕೊಳ ಕಾಣಿಸುತ್ತಿತ್ತು. ಬಿಸಿಲಿಗೆ ಅದು ಫಳಫಳನೆ ಹೊಳೆಯುತ್ತಿತ್ತು. ಹಲವಾರು ಮೀನುಹಿಡಿಯುವ ದೋಣಿಗಳು ಅದರಲ್ಲಿ ಅತ್ತಿಂದಿತ್ತ ಚಲಿಸುತ್ತಿದ್ದುವು. ಪಾಶ್ಚಲನ ನಾಲ್ಕು ಮಂದಿ ಸಹೋದರರು ಆ ದೋಣಿಗಳಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಅವನ ಐವರು ಸಹೋದರಿಯರು ಅವನ ತಾಯಿಗೆ ಬಟ್ಟೆ ಒಗೆಯುವಲ್ಲಿ ಇಲ್ಲವೇ ಸಂತೆಯಿಂದ ಸಾಮಾನು ತರುವುದರಲ್ಲಿ ಸಹಾಯ ಮಾಡುತ್ತಿದ್ದರು. ಅವನ ತಂದೆ ಆ ಹಳ್ಳಿಯ ಪಶುವೈದ್ಯನಾಗಿದ್ದ. ಪಾಶ್ಚಲ್ ಮಾತ್ರ ಮನೆಯಲ್ಲಿ ಒಬ್ಬನೇ ಬೇರೇನೂ ಕೆಲಸವಿಲ್ಲದೆ ರೇಡಿಯೋ ತಿರುಗಿಸುತ್ತಾ ಕುಳಿತಿದ್ದ.

ಮೂರು ವಾರಗಳ ಹಿಂದೆ ಪಾಶ್ಚಲ್ ತನ್ನ ಹಳ್ಳಿಯ ಜನರನ್ನು ಸೇರಿಸಿ ಸರಕಾರದೆದುರು ಪ್ರತಿಭಟನೆ ನಡೆಸುವಂತೆ ಪ್ರೇರೇಪಿಸಿದ್ದ. ರಂಗೂನಿನಲ್ಲಿ ಆ ರೀತಿ ಪ್ರತಿಭಟನೆ ಮಾಡಿದವರಲ್ಲಿ ೧೫೦೦ ರಷ್ಟು ಜನರನ್ನು ಪೋಲೀಸರು ಗುಂಡಿಕ್ಕಿ ಕೊಂದಿದ್ದರೆಂದು ಆತನಿಗೆ ಸುದ್ದಿ ಸಿಕ್ಕಿತ್ತು. ಸದ್ಯ ಏನಾಗುತ್ತಿದೆಯೆಂಬುದನ್ನು ತಿಳಿಯಲು ಆತ ರೇಡಿಯೋ ತಿರುಗಿಸುತ್ತಿದ್ದ.

ಬಿಬಿಸಿ ವಾರ್ತೆಯಲ್ಲಿ ಆತನಿಗೆ ಹೊಸ ವಿಷಯವೇನೂ ಗೊತ್ತಾಗಲಿಲ್ಲ. ಆದರೆ ಇದ್ದಕ್ಕಿದ್ದಂತೆ ಗುಪ್ತಭಾಷೆಯಲ್ಲಿ ಇಬ್ಬರು ಮಾತನಾಡಿಕೊಳ್ಳುವುದು ಕೇಳಿಸಿತು. ಅವನಿಗೆ ಸರಿಯಾಗಿ ಅರ್ಥವಾಗದಿದ್ದರೂ ಅದು ಪೋಲೀಸರ ಗುಪ್ತ ಸಂಭಾಷಣೆಯೆಂಬುದು ಸ್ಪಷ್ಟವಾಗಿತ್ತು. ಅದನ್ನು ಕೇಳಿ ಅವರಿಗೆ ಬಹಳ ಹೆದರಿಕೆಯಾಯಿತು. ರಂಗೂನಿನ ಸ್ವರ ಕೇಳಿತು: "ಏ ಕಂದು ಬಣ್ಣ! ಅಲ್ಲೇನು ನಡೆಯುತ್ತಾ ಇದೆ?" ಇದು ನಿಜಕ್ಕೂ ಗುಪ್ತದಳದವರ ಸಂಭಾಷಣೆಯಾಗಿತ್ತು. ಬೇರೆ ಬೇರೆ ಪ್ರದೇಶಗಳನ್ನು ಅವರು ಬಣ್ಣಗಳ ಹೆಸರಿನಿಂದ ಕರೆಯುತ್ತಿದ್ದರು.

"ನಮ್ಮ ಕೊಟ್ಟಿಗೆಯಲ್ಲಿ ನಾಲ್ಕು ಕುರಿಗಳನ್ನು ಕೂಡಿಹಾಕಿದ್ದೇವೆ" ಎಂದಿತು, ಹತ್ತಿರದಲ್ಲೇ ಇರುವ ಪದುವಾಂಗಿನ ಸ್ವರ. ಆ ಉತ್ತರ ಬಹಳ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಅದು ಬಹಳ ಹತ್ತಿರದಿಂದಲೇ ಬರುತ್ತಿತ್ತೆಂಬುದರಲ್ಲಿ ಸಂಶಯವಿರಲಿಲ್ಲ.

"ಇನ್ನು ಎಷ್ಟು ಕುರಿಗುಳು ಬಾಕಿ ಇವೆ ?" ಮೊದಲಿನ ಸ್ವರ ಕೇಳಿತು.

"ಎರಡು ಅಥವಾ ಮೂರು ಲೊಯ್ಯಾವ್ ಮತ್ತು ಫೆಕೊನ್ ವಿಭಾಗಗಳಲ್ಲಿವೆ. ಆದರೆ ಚಿಂತೆ ಮಾಡಬೇಡಿ. ನಾವು ಬೇಗನೇ ಆ ಕೆಲಸ ಮುಗಿಸಿಬಿಡುತ್ತೇವೆ".

ಪಾಶ್ಚಲ್ ಕೂಡಲೇ ಎದ್ದು ಕುಳಿತು ಆಲೋಚಿಸತೊಡಗಿದ. ಕುರಿಗಳೇ? ಆ ಊರಲ್ಲಿ ಹಂದಿಗಳು ಮತ್ತು ಎಮ್ಮೆಗಳು ಬೇಕಾದಷ್ಟಿದ್ದುವು, ಆದರೆ ಕುರಿಗಳು ೧೬೦ ಕಿಲೋಮೀಟರಿನ ಒಳಗೆ ಎಲ್ಲೂ ಇರಲಿಲ್ಲ. ಅವನು ಉಸಿರು ಬಿಗಿಹಿಡಿದು ರೇಡಿಯೋ ಹತ್ತಿರ ಕಿವಿ ತಂದು ಕೇಳತೊಡಗಿದ. ಆಗ ಹತ್ತಿರದಿಂದ ಮಾತನಾಡಿದವ ಕೆಲವು ಹೆಸರುಗಳನ್ನು ಓದಿ ಹೇಳುತ್ತಿದ್ದ. ಅವುಗಳಲ್ಲಿ ಮೊದಲನೆಯದು ಪಾಶ್ಚಲನಿಗೆ ಚೆನ್ನಾಗಿ ಗೊತ್ತಿದ್ದ ಹೆಸರು. ಅದು ಹತ್ತಿರದ ಊರಿನಲ್ಲಿ ಪ್ರತಿಭಟನೆ ನಡೆಸುತ್ತಿದ್ದವರ ಮುಖಂಡ ಮತ್ತು ಪಾಶ್ಚಲನ ಸ್ನೇಹಿತ ಎಡ್ವರ್ಡನದಾಗಿತ್ತು. ಅವನು ಒಂದೊಂದಾಗಿ ಹೆಸರುಗಳನ್ನು ಓದಿ ಹೇಳುತ್ತಿದ್ದಂತೆ ಪಾಶ್ಚಲನಿಗೆ ತನ್ನ ಹೆಸರನ್ನೂ ಓದಿ ಹೇಳಿದುದು ಕೇಳಿಸಿತು.

ಪಾಶ್ಚಲನಿಗೆ ತಾನು ಕೇಳಿದುದನ್ನು ನಂಬುವುದೇ ಕಷ್ಟವಾಯಿತು. ಗುಪ್ತದಳದವರು ಅಷ್ಟೊಂದು ದೂರ ಕಾಡಿನಲ್ಲಿರುವ ಮುಖಂಡರನ್ನೂ ಸೆರೆಹಿಡಿಯಲು ಸಿದ್ಧತೆ ನಡೆಸುತ್ತಿದ್ದಾರೆಂಬುದು ಸ್ಪಷ್ಟ. ಈ ವಿಷಯ ಅವನಿಗೆ ತಿಳಿದಿದೆಯೆಂಬುದಾಗಿ ಗುಪ್ತದಳದವರಿಗೆ ಸಂಶಯ ಹುಟ್ಟಿದರೂ ಕೂಡ ಅವನ ಮನೆಯವರಿಗೆ ಅಪಾಯ ಮೊದಗಿತು. ಹಾಗಾಗಿ, ಕೂಡಲೇ, ಆತ ಕಾಡಿನೊಳಗೆ ಕಣ್ಮರೆಯಾಗಬೇಕಾಗಿತ್ತು.

ಪಾಶ್ಚಲ್ ಒಂದು ಟಾರ್ಚ್, ಹರಿತವಾದ ಕತ್ತಿ ಮತ್ತು ಒಂದು ಹಳೇ ಕೋವಿ ಇವಿಷ್ಟನ್ನು ಹಿಡಿದುಕೊಂಡು ಮನೆಯಿಂದ ಹೊರಬಿದ್ದು ಹಿಂಬಾಗಿಲನ ಮೂಲಕ ಹೋದ. ಹೋಗುವಾಗ ಅವಲಕ್ಕಿಯನ್ನು ಸ್ವಲ್ಪ ತಿಂದು, ಅಜ್ಜಿಯ ಆಶೀರ್ವಾದ ಪಡೆದ. ಅನಂತರ ಅಲ್ಲೇ ಹತ್ತಿರವಿರುವ ಶ್ಮಶಾನದಲ್ಲಿ ಅಡಗಿ ಕುಳಿತು ಪೋಲೀಸರು ಸತ್ತವರ ಸಮಾಧಿಯ ಬಳಿ ಬರಲು ಹೆದರುತ್ತಿದ್ದರು ಎಂದು ಆತ ಯೋಚಿಸಿದ್ದ.

ಕಾಡಿನೊಳಗೆ ಸ್ವಲ್ಪ ದೂರ ಹೋದರೆ ಅಲ್ಲಿ ಒಂದು ಸುರಕ್ಷಿತವಾದ ಸ್ಥಳದಲ್ಲಿ ಗುಡಿಸಲು ಇದೆಯೆಂದು ಅವನಿಗೆಗೊತ್ತಿತ್ತು. ಆದರೆ ರಾತ್ರಿ ವೇಳೆ ಒಮ್ಮೆಯೂ ಆತ ಅಲ್ಲಿಗೆ ಹೋಗಿರಲಿಲ್ಲ. ಹಾಗಾಗಿ ಅಲ್ಲಿಗೆ ಹೋಗಬೇಕೆಂಬ ಆಲೋಚನೆಯಿಂದ ಅವನಿಗೆ ಒಮ್ಮೆ ಭಯವಾಯಿತು. ಅಲ್ಲಿಗೆ ಹುಲಿ, ಚಿರತೆ, ಹಾವು, ಚೇಳು ಬರುವ ಸಾಧ್ಯತೆಯಿತ್ತು.

ಮುಸ್ಸಂಜೆಯಾಗುತ್ತಾ ಬಂದಾಗ ಪಾಶ್ಚಲ್ ಸಮಾಧಿಯಲ್ಲಿದ್ದ ತನ್ನ ಪೂರ್ವಜರಿಂದ ಬೀಳ್ಕೊಂಡು. ಅವರು ತನ್ನನ್ನು ರಕ್ಷಿಸಬೇಕೆಂದು ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾ ಅಲ್ಲಿಂದ ಹೊರಟ, ಮಳೆ ಬೀಳತೊಡಗಿ, ನೀರು ನಿಂತು ಕೊಚ್ಚೆಯಾಯಿತು.

ಕಾಡಿನೊಳಗೆ ಆತ ಸುಮಾರು ೪೦ ಮೀಟರ್ ದೂರ ಕತ್ತಲೆಯಲ್ಲಿ ಹೋಗಿರಬಹುದಷ್ಟೆ. ಅಷ್ಟು ಹೊತ್ತಿಗೆ ಹಳ್ಳಿಯ ಕಡೆಯಿಂದ ನಾಯಿಗಳು ಜೋರಾಗಿ ಬೊಗಳು

ವುದು ಕೇಳಿಸಿತು. ಅದರೊಂದಿಗೇನೇ ಒಂದು ದೊಡ್ಡ ಸೈನ್ಯದ ವಾಹನ ಅವನ ತಂದೆಯ ಮನೆಯ ಹತ್ತಿರ ಬಂದು ನಿಂತುದು ಕೇಳಿಸಿತು. ಗುಪ್ತದಳದವರು ಅಲ್ಲಿಗೆ ಬಂದು ತಲಪಿರಬೇಕು.

ಪಾಶ್ಚಲ್ ಕಾಡಿನೊಳಗೆ ಕಲ್ಲುಮುಳ್ಳುಗಳನ್ನು ಲೆಕ್ಕಿಸದೆ ಗುಡಿಸಲು ಇರುವ ದಿಕ್ಕಿನಲ್ಲಿ ಓಡಲು ಪ್ರಾರಂಭಿಸಿದ. ಕಾಡಿನ ದಾರಿ ಕೆಸರು ಮಣ್ಣಿನಿಂದ ಅಂಟಂಟಾಗಿತ್ತು. ಅವನ ಚಪ್ಪಲಿಗಳೆರಡೂ ಒಂದೊಂದಾಗಿ ಕೆಸರಿನಲ್ಲಿ ಹೂತುಹೋದುವು. ಹಳ್ಳಿಯಿಂದ ಶಬ್ದ ಕೇಳಿಸದಷ್ಟು ದೂರ ಅವನು ಬರಿಕಾಲಿನಲ್ಲಿ ಓಡುತ್ತಾಹೋದ.

ಮುಳ್ಳು ಮತ್ತು ಹರಿತವಾದ ಹುಲ್ಲುಗಳಿಂದಾಗಿ ಆತನ ಪಾದಗಳಿಂದ ರಕ್ತ ಸೋರುತ್ತಿತ್ತು. ಮಳೆ ಸ್ವಲ್ಪ ಕಡಿಮೆಯಾಗತೊಡಗಿದ್ದು, ಆಕಾಶದಲ್ಲಿ ಚಂದ್ರ ಕಾಣಿಸತೊಡಗಿದ. ಇದನ್ನು ನೋಡಿ ಅವನಿಗೆ ಸಂತೋಷವಾಯಿತು. ಯಾಕೆಂದರೆ ಕತ್ತಲೆಯಲ್ಲಿ ಟಾರ್ಚನ್ನು ಬಳಸುವ ಧೈರ್ಯ ಆತನಿಗಿರಲಿಲ್ಲ.

ಕಡೆಗೆ ಪಾಶ್ಚಲ್ ಆ ಗುಡಿಸಲಿನ ಹತ್ತಿರ ಬಂದ. ಕೋವಿಯನ್ನು ಹಿಡಿದುಕೊಂಡು ಬಹಳ ಜಾಗ್ರತೆಯಿಂದ ಅದರ ಒಳಗೆ ಹೋದ. ಹಳ್ಳಿಯ ಜನರು ಅಲ್ಲಿ ಒಂದು ಬಿದಿರಿನ ಸ್ಟ್ರೆಚರ್ ಮೇಲೆ ದಾರಿಹೋಕರಿಗೆ ಸಹಾಯವಾಗಲೆಂದು ಸ್ವಲ್ಪ ಅವಲಕ್ಕಿ ಮೆಣಸಿನಕಾಯಿ ಮತ್ತು ಸೌತೆಕಾಯಿಗಳನ್ನು ಇರಿಸಿದ್ದರು. ಅವನಿಗೆ ತುಂಬಾ ಹಸಿವಾಗಿದ್ದರೂ ಅವರಲ್ಲಿ ಅರ್ಧದಷ್ಟನ್ನು ಮಾತ್ರ ತಿಂದ. ಮಾರನೆಯ ದಿವಸ ಹೋಗುವ ಮೊದಲು ತಿನ್ನುವುದಕ್ಕಾಗಿ ಉಳಿದರ್ಧವನ್ನು ಹಾಗೆಯೇ ಇರಿಸಿದ. ತನ್ನ ಅಜ್ಜಿ ಹೇಳಿಕೊಟ್ಟ ಮಂತ್ರವನ್ನು ಉಚ್ಚರಿಸುತ್ತಾ ಮಲಗಿ ನಿದ್ರಿಸಿದ.

ರಾತ್ರಿ ಇದ್ದಕ್ಕಿದ್ದಂತೆ ಪಾಶ್ಚಲನಿಗೆ ಎಚ್ಚರವಾಯಿತು. ಅವನು ಮಲಗಿ ಒಂದು ಗಂಟೆಗಿಂತ ಜಾಸ್ತಿಯಾಗಿರಲಾರದು. ಹಾಗೆ ಎಚ್ಚರವಾಗಲು ಏನು ಕಾರಣವಿರಬಹುದೆಂದು ಆತ ಮಲಗಿದಲ್ಲಿಂದಲೇ ಯೋಚಿಸಿದ. ಸ್ವಲ್ಪವೂ ಸದ್ದು ಮಾಡದೆ ಕೋವಿಯನ್ನು ಕೈಯಲ್ಲಿ ಹಿಡಿದುಕೊಂಡ.

ಅಷ್ಟರಲ್ಲಿ ಯಾರೋ ತನ್ನ ಹೆಸರು ಹಿಡಿದು ಕರೆದ ಹಾಗೆ ಕೇಳಿಸಿತು. ಅದು ತನಗೆ ಹಳ್ಳಿಯಲ್ಲಿ ಪ್ರತಿಭಟನೆ ನಡೆಸಲು ಸಹಾಯ ಮಾಡುತ್ತಿದ್ದ ಯುವಕನ ಸ್ವರದ ಹಾಗಿತ್ತು. ಹೊರಗೆ ಕೆಲವರು ಪಿಸುಗುಟ್ಟುತ್ತಿರುವುದೂ ಕೇಳಿಸಿತು. ಬಹುಶಃ ತನ್ನ ಸ್ನೇಹಿತ ಮತ್ತು ಆತನೊಂದಿಗೆ ಬೇರೆ ಕೆಲವರು ಯುವಕರೂ ಬಂದಿರಬಹುದೆಂದು ಆತ ಯೋಚಿಸಿದ. ಬಾಗಿಲು ತೆರೆಯುತ್ತಾ "ಯಾರದು ?" ಎಂದು ಕೇಳಿದ.

"ನಾನು, ಲೋನ್ ಟೋನ್" ಹೊರಗಿದ್ದವ ಪಿಸುಗುಟ್ಟಿದ. "ನಾನು ಸ್ನೇಹಿತರೊಂದಿಗೆ ಇದ್ದೇನೆ. ಗುಪ್ತದಳದವರು ನಮ್ಮನ್ನು ಮತ್ತು ನಿನ್ನನ್ನು ಹಿಂಬಾಲಿಸುತ್ತಿದ್ದಾರೆ."

ಮೂವರು ಗಿಡಗಳ ಮರೆಯಿಂದ ಹೊರಗೆ ಬಂದರು. ಪಾಶ್ಚಲನು ಟಾರ್ಚಿನ ಬೆಳಕಿನಲ್ಲಿ ಅವರನ್ನು ಗುರುತಿಸಿದ. ಮೂವರೂ ಫೆಕೋನಿನವರಾಗಿದ್ದರು, ಮತ್ತು ಮೂವರೂ ಬಹಳ ದಣಿದಿದ್ದರು ಮತ್ತು ಬಹಳ ಹೆದರಿದ್ದರು. ಅವರನ್ನು "ಬೇಗನೆ ಒಳಗೆ ಬನ್ನಿ" ಎಂದು ಕರೆದ.

ಅವರು ತನ್ನ ಜೊತೆ ಸೇರಿದುದು ಪಾಶ್ಚಲನಿಗೆ ಬಹಳ ಸಂತೋಷವಾಯಿತು. ಎಲ್ಲರೂ ಸೇರಿ ಥಾಯ್ಲೆಂಡ್ ಕಡೆಗಾಗಿ ಮುಂದುವರಿಯುವುದೆಂದು ನಿರ್ಧರಿಸಿದರು. ಆದರೆ ಅಲ್ಲಿಗೆ ತಲುಪಲು ಹಲವಾರು ಕಿಲೋಮೀಟರುಗಳಷ್ಟು ದೂರು ದಟ್ಟ ಕಾಡಿನಲ್ಲಿ ಹೋಗಬೇಕಾಗಿತ್ತು. ಮುಂದೆ ಸಿಗುವ ಸಾಲ್ವೀನ್ ನದಿ ದಾಟಿಬಿಟ್ಟರೆ ಅನಂತರ ಗುಪ್ತದಳದವರ ತೊಂದರೆಯಿರದು. ನದಿಯ ಆಚೆ ಬದಿ ಕರೆನ್ನಿ ಪಂಗಡದವರ ಅಧೀನದಲ್ಲಿತ್ತು. ನೆವಿನ್ ಅಧಿಕಾರಕ್ಕೆ ಬಂದಂದಿನಿಂದಲೂ ಆ ಪಂಗಡದವರು ಬರ್ಮೀಸ್ ಸರಕಾರದೊಂದಿಗೆ ಯುದ್ಧ ಹೂಡುತ್ತಿದ್ದರು.

ಮೂರು ವಾರಗಳಲ್ಲಿ ಪಾಶ್ಚಲನ ನಾಲ್ಕು ಮಂದಿಯ ಗುಂಪು ೫೦ ಜನರ ಗುಂಪಾಗಿತ್ತು. ಹೇಗಾದರೂ ಮಾಡಿ ಸಾಲ್ವೀನ್ ನದಿಯನ್ನು ದಾಟಿಬಿಡಬೇಕೆಂದು ಅವರೆಲ್ಲ ರಾತ್ರಿ ಹಗಲೆನ್ನದೆ ಪ್ರಯಾಣಿಸುತ್ತಿದ್ದರು. ಸೈನಿಕ ಪಡೆ ಅವರ ಹಿಂದೆಯೇ ಇತ್ತು. ಪಾಶ್ಚಲನ ಕೋವಿ, ಕೈಗುಂಡು ಮತ್ತು ಕೆಲವು ಕತ್ತಿಗಳನ್ನು ಬಿಟ್ಟರೆ, ಅವರ ಹತ್ತಿರ ತಮ್ಮನ್ನು ರಕ್ಷಿಸಿಕೊಳ್ಳಲು ಬೇರೆ ಯಾವ ಆಯುಧಗಳೂ ಇರಲಿಲ್ಲ. ಅವರು ಒಟ್ಟಿಗೆ ಹೋಗುವ ಬದಲು ಸ್ವಲ್ಪ ಸ್ವಲ್ಪ ಅಂತರ ಬಿಟ್ಟು, ಹಿಂಬಾಲಿಸುವವರಿಗೆ ತಮ್ಮ ಸುಳಿವು ಸಿಗದಂತೆ ಮುಂದುವರಿಯಲು ಪ್ರಯತ್ನಿಸುತ್ತಿದ್ದರು. ಕೈ ಸನ್ನೆಯಿಂದ ಮತ್ತು ಹಕ್ಕಿಗಳ ಕೂಗಿನಂತಹ ಕರೆಗಳಿಂದ ಅವರು ತಮ್ಮ ಇರವನ್ನು ಇತರರಿಗೆ ತಿಳಿಸುತ್ತಿದ್ದರು.

ಹೀಗೆ ಮುಂದೆ ಹೋಗುತ್ತಿರುವಾಗ ಅವರಿಗೆ ಒಂದು ಹಳ್ಳಿ ಕಾಣಸಿಕ್ಕಿತು. ಆದರೆ ಆ ಹಳ್ಳಿ ಪೂರ್ತಿ ನಿಃಶ್ಯಬ್ದವಾಗಿತ್ತು. ಹತ್ತಿರ ಹೋದಂತೆ ಭೀಕರವಾದ ವಾಸನೆಯೊಂದು ಅವರನ್ನು ಆವರಿಸಿತು. ದಾರಿಯಲ್ಲೆಲ್ಲ ಕೊಲೆಯಾದ ಹಳ್ಳಿಗರ ಹೆಣಗಳು ಉದ್ದಕ್ಕೂ ಬಿದ್ದಿದ್ದುವು. ಆ ಕೊಳೆತ ಹೆಣಗಳಲ್ಲಿ ಗಂಡಸರು, ಹೆಂಗಸರು ಮತ್ತು ಮಕ್ಕಳು ಇದ್ದರು. ಅವರನ್ನೆಲ್ಲಾ ಕೊಂದು ಹದ್ದುಗಳಿಗೆ ತಿನ್ನಲು ಆಹಾರವಾಗಿ ಕೊಟ್ಟಂತಿತ್ತು. ಜನರ ಪ್ರತಿಭಟನೆಯನ್ನು ನಿಲ್ಲಿಸಲು ಸರಕಾರ ಎಂತಹ ಕೃತ್ಯಗಳನ್ನೆಲ್ಲ ಮಾಡಲು ಸಿದ್ಧವಿತ್ತು ಎಂಬುದನ್ನು ಅದು ಸಾರಿ ಹೇಳುವಂತಿತ್ತು.

ಹೀಗೆ ಮುಂದುವರಿಯುತ್ತಿದ್ದಾಗ ಒಂದು ರಾತ್ರಿ ಲೋನ್ ಟೋನ್ ಹೇಳಿದ: "ಇನ್ನು ಜಾಸ್ತಿ ದೂರವಿಲ್ಲ. ಗುಡ್ಡಗಳ ದಾರಿ ಮುಗಿಯುತ್ತಾ ಬಂತು."

ಕಾಡಿನ ದಟ್ಟವಾದ ಮರಗಳ ಎಡೆಯಿಂದ ನಕ್ಷತ್ರಗಳು ಕಾಣಿಸುತ್ತಿತ್ತು. ಪಾಶ್ಚಲನಿಗೆ ತನ್ನ ಮನೆಯವರ ಮತ್ತು ಮೋಳ ನೆನಪಾಗುತ್ತಿತ್ತು. ಹೊಟ್ಟೆ ಹಸಿವಿನಿಂದ ಹಿಂಡುತ್ತಿತ್ತು.

ಇದ್ದಕ್ಕಿದ್ದಂತೆ ಎಲ್ಲಾ ಕಡೆಗಳಿಂದಲೂ ಗುಂಡಿನ ಸುರಿಮಳೆ ಹರಿಯತೊಡಗಿತು. ಪಾಶ್ಚಲ್ ಕೂಡಲೇ ನೆಲದಲ್ಲಿ ಅಂಗಾತ ಮಲಗಿದ. ಅವರು ಬರ್ಮೀಸ್ ಸೈನ್ಯ ಮತ್ತು ಕರೆನ್ನಿ ಪಂಗಡವ ಕಾದಾಟವ ನಡುವೆ ಸಿಕ್ಕಿ ಹಾಕಿಕೊಂಡಿದ್ದರು. ಹೀಗೆ ಕಾದಾಡುವವರು ತಮ್ಮ ದೇಶದೊಳಕ್ಕೆ ನುಗ್ಗಬಾರದೆಂದು ಇನ್ನೊಂದು ಕಡೆಯಿಂದ ಥಾಯ್ಲೆಂಡಿನ ಸೈನ್ಯದವರೂ ಗುಂಡು ಹಾರಿಸುತ್ತಿದ್ದರು. ಈ ಗುಂಡಿನ ಸುರಿಮಳೆಯಲ್ಲಿ ಪಾಶ್ಚಲನಿಗೆ ಏನು ಮಾಡುವುದೆಂದೇ ತೋರಲಿಲ್ಲ. ದಟ್ಟವಾದ ಕಾಡಿನಲ್ಲಿ ಏನೂ ಕಾಣಿಸುತ್ತಿರಲಿಲ್ಲ.

ಗುಂಡುಗಳು ಮಾತ್ರ ಎಲ್ಲಾ ಕಡೆಗಳಿಂದಲೂ ಹಾರಿ ಬರುತ್ತಿದ್ದುವು.

ಮಲಗಿದ್ದಲ್ಲಿಗೇ ಒಂದು ಗುಂಡು ಪಾಶ್ಚಲನ ಬಲತೊಡೆಯನ್ನು ಹೊಕ್ಕಿತು. ಅದರ ನೋವು ತಡೆಯಲಾರದಂತಹದಾಗಿತ್ತು. ಮುಟ್ಟಿ ನೋಡಿದಾಗ ಗುಂಡಿನ ಗಾಯದಿಂದ ಬೆಚ್ಚಗಿನ ರಕ್ತ ಹೊರ ಹೊಮ್ಮುತ್ತಿತ್ತು. ಸ್ವಲ್ಪ ಹೊತ್ತಿನಲ್ಲಿ ಇನ್ನೊಂದು ಗುಂಡು ಅವನ ಎಡಪಾದವನ್ನು ಹೊಕ್ಕಿತು. ಇನ್ನು ಇಲ್ಲಿ ಸುಮ್ಮಗಿದ್ದರೆ ಆಗದೆಂದು ಆತ ಎದ್ದು ಓಡತೊಡಗಿದ.

ಓಡುತ್ತಿರುವವನಿಗೆ ಕಾಲಿನ ನೋವು ಸ್ವಲ್ಪವೂ ಗೊತ್ತಾಗಲಿಲ್ಲ. ಹೇಗಾದರೂ ಮಾಡಿ ಜೀವ ಉಳಿಸಿಕೊಳ್ಳಬೇಕೆಂದಷ್ಟೇ ಆತನ ಮನಸ್ಸಿನಲ್ಲಿದ್ದುದು. ಸಾಲ್ವೀನ್ ನದಿ ಹತ್ತಿರ ಬಂದಾಗ ನೆಲ ಇಳಿಜಾರಾಯಿತು. ಕೆಸರು ಮಣ್ಣಿನಲ್ಲಿ ಜಾರುತ್ತಾ ಹೋಗಿ ಆತ ನದಿಯೊಳಗೆ ಬಿದ್ದ. ಮಳೆಯಿಂದಾಗಿ ನದಿಯಲ್ಲಿ ನೀರು ತುಂಬಿ ಹರಿಯುತ್ತಿತ್ತು. ಪಾಶ್ಚಲ್ ತನ್ನ ಎಲ್ಲಾ ಶಕ್ತಿಯನ್ನೂ ಉಪಯೋಗಿಸಿ ನದಿಯಲ್ಲಿ ಈಜತೊಡಗಿದ. ಹೇಗೋ ನದಿಯ ಆಚೆ ದಡದಲ್ಲಿರುವ ಸುರಕ್ಷಿತವಾದ ಸ್ಥಳವನ್ನು ಸೇರಿ ಅಲ್ಲಿ ಬಸವಳಿದು ಬಿದ್ದ.

ಅನಂತರ ಅವನನ್ನು ಅಲ್ಲಿನ ಜನರು ಒಂದು ನಿರಾಶ್ರಿತರ ನೆಲೆಗೆ ಕರೆದುಕೊಂಡು ಹೋದರು. ಮಲೇರಿಯಾ ಜ್ವರ ಅವನನ್ನು ಕಾಡಿತು. ಆದರೂ ಕೊನೆಗೆ ಆರೋಗ್ಯವಂತನಾಗಿ ತನ್ನ ದೇಶವನ್ನು ಸೈನ್ಯದಿಂದ ಬಿಡಿಸಲು ಯತ್ನಿಸುವ ಪಡೆಯಲ್ಲಿ ಸೇರಿಕೊಂಡ.



ಅಧಿಕಾರದಿಂದಲೇ ದರ್ಪಕ್ಕೆ ಬೆಲೆ ಬರುವುದು. ಅಧಿಕಾರ ಮಾಯವಾದೊಡನೆ ದರ್ಪವೂ ಅದರೊಂದಿಗೆ ಬೆಲೆ ಕಳೆದುಕೊಳ್ಳುವುದು. ಆದರೆ ಪ್ರೀತಿ ಮಾತ್ರ ಎಂದೂ ನಶಿಸದೆ ಬೆಲೆಯನ್ನು ಹೊಂದಿರುವುದು. ದರ್ಪವನ್ನು ಕೂಡಾ ಸೋಲಿಸಿ ಕರಗಿಸಬಲ್ಲದು.

—ಡಾ॥ ರಾಧಾಕೃಷ್ಣನ್

ಪಾರ್ಶ್ವವಾಯುವಿನ ಮುನ್ಸೂಚನೆಗಳು

ಜಿ. ವೈದೇಹಿ
೩೫೮ ನವಿಲು ಮುಖ್ಯ ರಸ್ತೆ
ಕುವೆಂಪುನಗರ, ಮೈಸೂರು–೫೭೦೦೨೩

"ಮಿದುಳು ಘಾತದ ಸೂಕ್ಷ್ಮ ಸೂಚನೆಗಳನ್ನು ಕಡೆಗಣಿಸುವುದು ಸುಲಭ. ಆದರೆ ಎಲ್ಲಿಯವರೆಗೆ? ಸ್ಥಿತಿ ಮಿತಿ ಮೀರುವವರೆಗೆ" ನಲವತ್ತೊಂದು ವರ್ಷದ ರಮೇಶ್ ಷಾರಿಗೆ ಅಲ್ಪ ಪ್ರಮಾಣದ ಮಿದುಳಿನ ಘಾತವಾಯಿತೆನ್ನುವುದು ತೀರ ಅನಿರೀಕ್ಷಿತ. ಗುಜರಾತಿನ ವಾಪಿಯಲ್ಲಿ ಇಂಜಿನಿಯರ್ ಆಗಿರುವ ಇವರು ಶುದ್ಧ ಸಸ್ಯಾಹಾರಿ, ಮದ್ಯಪಾನ ವರ್ಜಿತ ವ್ಯಕ್ತಿ, ತಪ್ಪದೆ ವ್ಯಾಯಾಮ ಮಾಡುವವರು. ಅದರೂ ಡಿಸೆಂಬರ್ ೧೯೯೪ರ ಒಂದು ಮಧ್ಯಾಹ್ನ ಊಟ ಮಾಡಿದನಂತರ ಷಾ ನೀರು ಕುಡಿಯಲು ಲೋಟವನ್ನೆತ್ತಿಕೊಳ್ಳಲು ಪ್ರಯತ್ನಿಸಿದರು. ಆದರೆ ಅವರ ಬಲಗೈಗೆ ಜೋಮು ಹಿಡಿದಿದ್ದರ ಅನುಭವವಾಯಿತು. ಗಲಿಬಿಲಿಗೊಂಡ ಅವರ ಬಂಧು ಲೋಟವನ್ನು ಅವರ ಬಾಯಿಯ ಬಳಿ ಹಿಡಿದರು. ಆದರೆ ನೀರು ಬಾಯಿಯ ಒಂದು ಕೊನೆಯಿಂದ ಸುರಿಯ ತೊಡಗಿತು. ಇಷ್ಟರಲ್ಲಿ ಷಾರ ಕನ್ನಡಕ ಮೂಗಿನಿಂದ ಜಾರಿ ಕೆಳಕ್ಕೆ ಬಿತ್ತು. ಅವನ್ನು ತೆಗೆದುಕೊಳ್ಳಲು ಪ್ರಯತ್ನಿಸಿದಾಗ ತನ್ನ ದೇಹದ ಬಲಭಾಗದಲ್ಲಿ ಚಲನೆ ಇಲ್ಲದಿರುವುದು ಮತ್ತು ಸ್ಪಷ್ಟವಾಗಿ ಮಾತನಾಡಲು ಆಗದಿರುವುದೂ ತಿಳಿಯಿತು.

ಡಾ|| ನಿರ್ಮಲ್ ಸೂರ್ಯ ಎಂಬ ನರತಜ್ಞರನ್ನು ಷಾ ಭೇಟಿ ಮಾಡಿದರು. ಅಯಸ್ಕಾಂತೀಯ ಪ್ರತಿಧ್ವನಿತ ಪ್ರತಿಬಿಂಬ ಪರೀಕ್ಷೆಯೂ (ಎಂ. ಆರ್. ಐ.) ಸೇರಿದಂತೆ ಇತರ ತಪಾಸಣೆಗಳೂ ನಡೆದುವು. ಷಾರ ಕುತ್ತಿಗೆಯ ಒಂದು ಧಮನಿಯಲ್ಲಿ ರಕ್ತ ಸಂಚಾರಕ್ಕೆ ತಡೆಯುಂಟಾದುದು ಕ್ಷಣಿಕ ಹೃದಯಾಘಾತ ಅಥವಾ ಸಣ್ಣ ಪ್ರಮಾಣದ ಪಾರ್ಶ್ವವಾಯುವಿಗೆ ಕಾರಣ ಎಂದು ಸ್ಪಷ್ಟವಾಯಿತು.

ಪ್ರತಿದಿನವೂ ಅವರಿಗೆ ಅಭಿಧಮನಿ (ವೆಯಿನ್) ಮೂಲಕ ರಕ್ತ ತೆಳುವು ಮಾಡುವ ಔಷಧವನ್ನು ಚುಚ್ಚಲಾಯಿತು. ಹದಿನೈದು ದಿನಗಳನಂತರ ಅವರು ಮತ್ತೆ ಆಫೀಸಿಗೆ ಬಂದು ತಮ್ಮ ದಿನನಿತ್ಯದ ಕಾರ್ಯಕ್ರಮಗಳಲ್ಲಿ ತೊಡಗಿದರು.

ಅಷ್ಟು ಚೂಟಿಯಲ್ಲದ ೬೫ ವರ್ಷದ ಒಬ್ಬ ಹೆಂಗಸು ಶೌಚಕ್ಕೋಸ್ಕರ ಒಂದು ರಾತ್ರಿ ಆಕೆ ಎದ್ದಾಗ ಅವಳ ಬಲಗೈ ದುರ್ಬಲವಾದಂತೆಯೂ ಜೋಮು ಹಿಡಿದಂತೆಯೂ ಅನುಭವವಾಯಿತು. ಎದ್ದು

ಮೂಲ : ಫೆಬ್ರವರಿ ೧೯೯೬ ರ ರೀಡರ್ಸ್ ಡೈಜೆಸ್ಟ್‌ನಲ್ಲಿನ 'ಶಿವಾನಿ ಮಹೇಶ್ವರಿ' ಅವರ "ಲಿಟ್ಲ್ ಸೈನ್ಸ್ ಆಫ್ ಎ ಸ್ಟ್ರೋಕ್" ಲೇಖನ.

ಕುಳಿತು ಸ್ವಲ್ಪ ಹೊತ್ತು ಕೈಯನ್ನು ತಿಕ್ಕಿದಳು. ಆದರೂ ಸರಿಯಾಗಲಿಲ್ಲ. ಕೈ ಮೇಲೆಯೇ ಮಲಗಿದ್ದೆನೆಂದು ಕಾಣುತ್ತದೆ ಎಂದುಕೊಳ್ಳುತ್ತಾ ಮನೆಯವರನ್ನು ಆ ಹೊತ್ತಿನಲ್ಲಿ ಎಬ್ಬಿಸುವುದು ಸರಿಯಲ್ಲವೆಂದು ದೀಪವಾರಿಸಿ ಹಾಗೆಯೇ ಮಲಗಿದಳು. ಬೆಳಗಿನ ಹೊತ್ತಿಗೆ ಆಕೆಯ ಬಲಭಾಗಕ್ಕೆ ಪೂರ್ತಿಯಾಗಿ ಪಾರ್ಶ್ವವಾಯು ಹೊಡೆದಿತ್ತು.

ತ್ವರಿತ ತಪಾಸಣೆ—ಪಾರ್ಶ್ವ ವಾಯುವಿನ ಗಂಭೀರತೆ ತತ್‌ಕ್ಷಣ ತಿಳಿಯಲೆಂದು ಕೆಲವು ವೈದ್ಯರು ಇದನ್ನು ಮಿದುಳಿನ ಘಾತ ಎಂದೂ ಕರೆಯುವರು. ಕರಾರುವಾಕ್ಕಾಗಿ ತಿಳಿಯದಿದ್ದರೂ ಸಾವಿರಾರು ಭಾರತೀಯರು ಅದರಲ್ಲೂ ಮಧ್ಯವಯಸ್ಕರು ಈ ರೋಗಕ್ಕೆ ಬಲಿಯಾಗುತ್ತಿದ್ದಾರೆಂದು ಅನೇಕ ವೈದ್ಯರ ಅಭಿಪ್ರಾಯ. ಕೆಲವು ರೋಗಿಗಳು ಮರಣವನ್ನಪ್ಪುವರು. ಲೆಕ್ಕವಿಲ್ಲದಷ್ಟು ಜನ ಅಂಗವಿಕಲರಾಗುವರು. ಆದರೆ ಈಗ ರೋಗಿಗಳ ಪಾರ್ಶ್ವವಾಯುವಿನ ಎಚ್ಚರಿಕೆಯ ಮುನ್ಸೂಚನೆಗಳನ್ನು ಗಮನಿಸಿಕೊಂಡು ಆದಷ್ಟು ಜಾಗ್ರತೆಗೆ ಒಳಗಾದರೆ ಅನೇಕ ಜೀವಗಳನ್ನು ಕಾಪಾಡಬಹುದು.

"ಮೊದಲ ಆರುಗಂಟೆಗಳು ಯಶಸ್ವೀ ಚಿಕಿತ್ಸೆಯ ನಿರ್ಣಾಯಕ ಅವಧಿ" ನವದೆಹಲಿಯ ಆಲ್ ಇಂಡಿಯ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನ ಪ್ರಾಧ್ಯಾಪಕರಾದ ಡಾ॥ ಮಹಾಪಾತ್ರ ಹೇಳುತ್ತಾರೆ. "ಆದರೆ ಕೇವಲ ಒಂದಂಶದಷ್ಟು ರೋಗಿಗಳು ಮಾತ್ರ ಈ ಅವಧಿಯಲ್ಲಿ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುವುದು ಬಹಳ ವಿಷಾದದ ಸಂಗತಿ" ಎಂದು ತಮ್ಮ ವ್ಯಾಕುಲತೆಯನ್ನು ವ್ಯಕ್ತಪಡಿಸಿದ್ದಾರೆ.

ಇತ್ತೀಚಿನವರೆಗೂ ತುರ್ತು ಚಿಕಿತ್ಸೆಯ ಮಹತ್ವದ ಬಗ್ಗೆ ವೈದ್ಯರಿಗೇ ತಿಳಿದಿರಲಿಲ್ಲ. ಹತ್ತು ವರ್ಷಗಳ ಹಿಂದೆ ಪಾರ್ಶ್ವವಾಯುವಿಗೆ ತುರ್ತಾಗಿಯಾಗಲಿ ಅನಂತರವಾಗಲೀ ಮಾಡುವ ಯಾವ ಯಶಸ್ವೀ ಶಸ್ತ್ರಚಿಕಿತ್ಸೆಯೂ ಇಲ್ಲವೆಂದೇ ವೈದ್ಯರ ಅಭಿಪ್ರಾಯವಾಗಿತ್ತು. ಆದರೆ ೧೯೯೦ ರಿಂದ ಈ ನಕಾರಾತ್ಮಕ ದೃಷ್ಟಿಕೋನ ಪರಿಣಾಮಕಾರಿಯಾಗಿ ಪರಿಷ್ಕೃತವಾಯಿತು. ಹೊಸ ಔಷಧಗಳಿಂದ, ಅದ್ಭುತ ಶಸ್ತ್ರಚಿಕಿತ್ಸೆಗಳಿಂದ ಮತ್ತು ಅತ್ಯಾಧುನಿಕ ರೋಗ ನಿಧಾನ ತಂತ್ರ ವಿದ್ಯೆಯಿಂದ ಯುಕ್ತ ಸಮಯಕ್ಕೆ ಚಿಕಿತ್ಸೆ ಮಾಡಿದರೆ ಪಾರ್ಶ್ವವಾಯುವನ್ನು ಗುಣಪಡಿಸಬಹುದಲ್ಲದೇ ಮುಂದಾಗುವ ಆಘಾತಗಳನ್ನು ತಪ್ಪಿಸಬಹುದು ಕೂಡ.ಆದರೂ ಕೆಲವು ವೈದ್ಯರು ತುರ್ತು ಚಿಕಿತ್ಸೆಗೆ ಒತ್ತು ನೀಡುತ್ತಿಲ್ಲವೆಂದು ಮುಂಬಯಿಯ ಸರ್ ಹರ್‌ಕಿಶನ್‌ದಾಸ್ ನರೋತ್ತಮದಾಸ್ ನರ್ಸಿಂಗ್ ಹೋಂನ ನರವಿಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ॥ ಪ್ರಫುಲ್ಲ ಎಂ. ದಲಾಲ್ ಹೇಳಿದ್ದಾರೆ.

ಪಾರ್ಶ್ವವಾಯುವಿನಲ್ಲಿ ಎರಡು ಬಗೆಗಳಿವೆ. ರಕ್ತಪಾತ ಪಾರ್ಶ್ವವಾಯುವಿನಲ್ಲಿ ಮಿದುಳಿನಒಂದು ರಕ್ತನಾಳ ಒಡೆದು ಮಿದುಳಿನಲ್ಲಿ ಅಥವಾ ತಲೆಬುರುಡೆಗೂ ಮಿದುಳಿಗೂ ನಡುವೆ ಇರುವ ಜಾಗದಲ್ಲಿ ರಕ್ತ ಸ್ರಾವವಾಗುತ್ತದೆ. ಇದರಿಂದ ಮಿದುಳಿನ ಅಂಗಾಂಶಗಳು ಒತ್ತಲ್ಪಡುತ್ತವೆ. ಶೇಕಡ

೨೦ ರಷ್ಟು ರೋಗಿಗಳಲ್ಲಿ ರಕ್ತಸ್ರಾವವಾಗಿ ಸಾವಿನಲ್ಲಿ ಪರ್ಯವಸಾನವಾಗುತ್ತದೆ.

ಎಚ್ಚರಿಕೆಯ ಸೂಚನೆಗಳು—ಶೇಕಡ ೬೦ ರಷ್ಟು ರೋಗಿಗಳಲ್ಲಿ ಮೆದುಳಿಗೆ ಹೋಗುವ ರಕ್ತನಾಳದಲ್ಲಿ ತಡೆಯುಂಟಾಗಿ ರಕ್ತಸಂಚಾರಕ್ಕೆ ಅಡ್ಡಿಯಾಗಿ ಟಿ. ಐ. ಎ. ಉಂಟಾಗುತ್ತದೆ. ಮಿದುಳಿಗೆ ಆಮ್ಲಜನಕ ಸಹಿತ ರಕ್ತ ಸಾಗಿಸುವ ನಾಲ್ಕು ರಕ್ತನಾಳಗಳಲ್ಲಿ ಯಾವುದಾದರೂ ಒಂದು ರಕ್ತನಾಳ ಅಥವಾ ಅದರ ಕವಲು ನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿ ತಡೆಯುಂಟಾಗಬಹುದು. ಅಥವಾ ದೇಹದ ಯಾವುದಾದರೂ ರಕ್ತನಾಳದಲ್ಲಿ ರಕ್ತ ಹೆಪ್ಪುಗಟ್ಟಿ ಆ ಗೆಡ್ಡೆ ಮಿದುಳಿನಲ್ಲಿರುವ ರಕ್ತನಾಳಕ್ಕೆ ಸಾಗಬಹುದು. ಮಿದುಳಿನ ಅಂಗಾಂಶ ಕ್ರಿಯೆಗಳಿಗೆ ಅವಶ್ಯವಾದ ಆಮ್ಲಜನಕ ಸಹಿತ ರಕ್ತದ ಕೋಶಗಳು ನಾಶವಾಗತೊಡಗುತ್ತವೆ. ಘಾಸಿಗೊಂಡ ಮಿದುಳಿನ ಪ್ರಮಾಣದ ಆಧಾರದ ಮೇಲೆ ದೇಹದ ಯಾವುದಾದರೂ ಕ್ರಿಯೆಗೆ ಧಕ್ಕೆಯುಂಟಾಗಬಹುದು. ಕೈಕಾಲುಗಳಲ್ಲಿ ದುರ್ಬಲತೆ ಮತ್ತು ದೃಷ್ಟಿದೋಷದಂಥ ಸೂಚನೆಗಳು ಕಂಡುಬರುತ್ತವೆ. ಶಾಶ್ವತ ಪಾರ್ಶ್ವವಾಯು ಅಥವಾ ಸಾವು ಸಂಭವಿಸುತ್ತದೆ.

ಅರ್ಧಕ್ಕಿಂತಲೂ ಹೆಚ್ಚು ಪಾರ್ಶ್ವವಾಯು ಅಥವಾ ಪಕ್ಷವಾತಗಳು ಮುನ್ನೆಚ್ಚರಿಕೆಯ ಸೂಚನೆ ಕೊಡುತ್ತವೆ. ಹೆಪ್ಪುಗಟ್ಟಿದ ಒಂದು ಗೆಡ್ಡೆ ರಕ್ತನಾಳದಲ್ಲಿ ತಾತ್ಕಾಲಿಕವಾಗಿ ತಡೆ ಉಂಟುಮಾಡಿದುದರ ಪರಿಣಾಮವಾಗಿ ಟಿ. ಐ. ಎ. ಘಟಿಸುತ್ತದೆ. ಅನಂತರ ಈ ಗೆಡ್ಡೆ ಸಣ್ಣ ಸಣ್ಣ ತುಣುಕುಗಳಾಗಿ ಕವಲು ರಕ್ತನಾಳಕ್ಕೆ ಸಾಗುತ್ತವೆ. ಟಿ. ಐ. ಎ. ೨೪ ಗಂಟೆಗಳ ಕಾಲ ಮುಂದುವರೆದಿದ್ದರೂ ಮೂರನೇ ಎರಡು ಭಾಗದಷ್ಟು ಹೃದಯಾಘಾತಗಳು ಐದು ನಿಮಿಷಗಳು ಮಾತ್ರವಿರುತ್ತವೆ. ಹೀಗಾಗಿ ರೋಗಿ ಇದನ್ನು ಉದಾಸೀನ ಮಾಡುವನು ಇಲ್ಲವೆ ಇದಕ್ಕೆ ಬೇರೊಂದು ಕಾರಣ ಕಲ್ಪಿಸಿಕೊಳ್ಳುವನು. ಇದು ದುರದೃಷ್ಟಕರ ಸಂಗತಿ. ಹತ್ತರಲ್ಲಿ ಕನಿಷ್ಠ ಮೂರು ಟಿ. ಐ. ಎ. ರೋಗಿಗಳು ಮೂರು ಅಥವಾ ಐದು ವರ್ಷಗಳೊಳಗೆ ಶಾಶ್ವತ ಆಘಾತಕ್ಕೆ ಒಳಗಾಗುವರು.

“ಅಷ್ಟಾಗಿ ಗಂಭೀರವಾದ ಲಕ್ಷಣವಿಲ್ಲದಿರುವ ಕೆಲವು ಟಿ. ಐ. ಎ. ರೋಗಿಗಳು ಉದಾಸೀನ ಮಾಡುವುದೇ ಹೆಚ್ಚು. ಈ ಲಕ್ಷಣಗಳು ಮುಂದಾಗಲಿರುವ ಶಾಶ್ವತ ಪಾರ್ಶ್ವವಾಯುವಿನ ಎಚ್ಚರಿಕೆ ಗಂಟೆಯೆಂದು ಈ ರೋಗಿಗಳು ತಿಳಿದಿರುವುದಿಲ್ಲ” ಎಂದು ಬಾಂಬೆ ಹಾಸ್ಪಿಟಲ್ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಮುಂಬಯಿಯ ನರವಿಜ್ಞಾನ ವಿಭಾಗದ ಮುಖ್ಯಸ್ಥ ಡಾ|| ಬಿ. ಎಸ್. ಸಿಂಘಾಲ್ ಹೇಳುತ್ತಾರೆ.

ರೋಗದ ಯಾವುದೇ ಒಂದು ಸೂಕ್ಷ್ಮ ಸೂಚನೆಯನ್ನು ಉದಾಸೀನಮಾಡದೆ ಗಮನಿಸಿಕೊಳ್ಳಬೇಕಾದ್ದು ರೋಗಿಯ ಮುಖ್ಯ ಕರ್ತವ್ಯ. ಶೇಕಡ ೬೦ ರಷ್ಟು ಪಾರ್ಶ್ವವಾಯುವಿಗೆ ಕಾರಣ ಅಧಿಕ ರಕ್ತದ ಒತ್ತಡ. “ನಮ್ಮಲ್ಲಿ ಅನೇಕ ಜನರು ರಕ್ತದ ಒತ್ತಡವನ್ನು ಹತೋಟಿಯಲ್ಲಿಟ್ಟುಕೊಳ್ಳುವುದಿಲ್ಲ. ಚಿಕಿತ್ಸೆಗೊಳಗಾಗದ ಅಧಿಕ ರಕ್ತದ ಒತ್ತಡವಿರುವವರು ಪಾರ್ಶ್ವವಾಯುವಿಗೆ

ತುತ್ತಾಗುವರು" ಎಂದು ಡಾ|| ಸಿಂಘಾಲ್ ಹೇಳುತ್ತಾರೆ. ಧೂಮ ಪಾನಿಗಳು, ಮಧು ಮೇಹಿಗಳು, ಹೆಚ್ಚು ಪ್ರಮಾಣದಲ್ಲಿ ಈಸ್ಟ್ರೊಜೆನ್ ಇರುವ ಗರ್ಭನಿರೋಧಕ ಮಾತ್ರೆ ತೆಗೆದುಕೊಳ್ಳುವ ಹೆಂಗಸರು ಮತ್ತು ಹೃದಯದ ಆಸಮ ಬಡಿತ ಇರುವ ವ್ಯಕ್ತಿಗಳು ಈ ರೋಗಕ್ಕೆ ಬಲಿಯಾಗುವ ಸಾಧ್ಯತೆ ಹೆಚ್ಚು. ಸ್ಥೂಲ ಶರೀರವುಳ್ಳವರು ವ್ಯಾಯಾಮ ಮಾಡದೆ ಇರುವವರು ಅಥವಾ ರಕ್ತದಲ್ಲಿ ಕೊಲೆಸ್ಟರಾಲ್ ಅಂಶ ಅಧಿಕವಾಗಿ ಉಳ್ಳವರೂ ಈ ರೋಗಕ್ಕೆ ಪೀಡಿತರಾಗುವ ಸಂಭವ ಹೆಚ್ಚಾಗಿರುತ್ತದೆ. ಸಾಮಾನ್ಯವಾಗಿ ಹೆಂಗಸರಿಗಿಂತ ಗಂಡಸರು ಹೆಚ್ಚಾಗಿ ಈ ರೋಗಕ್ಕೆ ತುತ್ತಾಗುವರು.

ವಯಸ್ಸು ಪ್ರತಿವರ್ಷ ಹೆಚ್ಚಾದಂತೆ ಈ ರೋಗ ಬರುವ ಸಾಧ್ಯತೆ ಹೆಚ್ಚಾಗುತ್ತದೆ. ಆದರೂ ಕೆಲವು ಯುವಕರು ಆದರಲ್ಲೂ ಹದಿಹರೆಯದವರು ಇದಕ್ಕೆ ಹೊರತಾಗಿಲ್ಲ.

ಕಂಪ್ಯೂಟರ್ ಸಾಫ್ಟ್‌ವೇರ್ (ಗಣಕ ತತ್ರಾಂಶ) ವೃತ್ತಿಯಲ್ಲಿರುವ ೨೯ ವಯಸ್ಸಿನ ನ್ಯೈರ್‌ರಾಜ್ ಹೆಚ್ಚಾಗಿ ಹೊರ ಊರುಗಳಿಗೆ ಸುತ್ತಾಡುತ್ತಿರುವವನು. ಒಂದೇ ಸಮನೆ ಧೂಮಪಾನ ಮಾಡುತ್ತಾನೆ. ಒಂದು ದಿನ ಬೆಳಗ್ಗೆ ಕೆಲಸಕ್ಕೆಂದು ಹೋಗುವಾಗ ತಲೆ ತಿರುಗಿದ ಅನುಭವವಾಯಿತು. ಹಿಂದಿನ ದಿನ ಖಂಡಾಲದಲ್ಲಿ ಬೆಟ್ಟ ಹತ್ತಿದ್ದರೆ ಫಲವಿರಬಹುದೆಂದು ಯೋಚಿಸುತ್ತಿರುವಂತೆಯೇ ಜ್ಞಾನ ತಪ್ಪಿ ಕೆಳಕ್ಕೆ ಬಿದ್ದ ರಾಜ್‌ಗೆ ದೇಹದ ಎಡಭಾಗಕ್ಕೆ ಲಕ್ವ ಬಡಿದಿತ್ತು. ಆವನ ಕುತ್ತಿಗೆಯ ಕೆಳಗಿರುವ ಒಂದು ಧಮನಿಯಲ್ಲಿ ರಕ್ತ ಸಂಚಾರಕ್ಕೆ ತಡೆಯುಂಟಾಗಿರುವುದು ತಪಾಸಣೆಯ ಆನಂತರ ತಿಳಿಯಿತು. ಕ್ರಮವಾದ ಚಿಕಿತ್ಸೆ, ದೈಹಿಕ ಕಸರತ್ತು ಮತ್ತು ಧೂಮಪಾನ ಕಡಿಮೆ ಮಾಡುವ ಒಂದು ದೃಢ ನಿರ್ಧಾರ ಕ್ರಮೇಣವಾಗಿ ಆವನು ಮತ್ತೆ ವೃತ್ತಿಗೆ ಹಿಂತಿರುಗುವಂತೆ ಮಾಡಿದುವು. ರಾಜ್ ಮೊದಲಿನಷ್ಟೇ ಚೂಟಿ ಇಲ್ಲದಿದ್ದರೂ ವಾಹನ ಚಾಲನೆ, ಈಜುವುದು ಮತ್ತು ದೋಣಿ ನಡೆಸುವುದರಲ್ಲಿ ಹಿಂದೆಬಿದ್ದಿಲ್ಲ.

ರಕ್ತ ಸಂಚಾರದಲ್ಲಿ ಉಂಟಾಗುವ ತಡೆಯನ್ನು ತೆಗೆದುಹಾಕುವ ಶಸ್ತ್ರಕ್ರಿಯೆಗೆ ಕ್ಯಾರೊಟಿಡ್ ಎಂಡಾರ್‌ಟೆರೆಕ್ಟಮಿ ಎನ್ನುವರು. ರಕ್ತ ಸಂಚಾರದಲ್ಲಿ ಶೇಕಡ ೭೦ ರಿಂದ ೯೯ ರಷ್ಟು ತಡೆ ಇದ್ದರೂ ಈ ಶಸ್ತ್ರಕ್ರಿಯೆಯಿಂದ ಸರಿಪಡಿಸಬಹುದು. ಈಗ ಶೇಕಡ ೩೦ ರಿಂದ ೬೯ ರಷ್ಟು ತಡೆ ಇರುವವರಿಗೆ ಈ ಶಸ್ತ್ರಕ್ರಿಯೆಯನ್ನು ನಡೆಸಲಾಗುತ್ತದೆ. ಉತ್ತಮ ಫಲಕೊಡುವ, ತಡೆಗೆಡ್ಡೆಯನ್ನು ಪುಡಿಮಾಡುವ ಔಷಧವನ್ನು ಭಾರತದ ಪ್ರಮುಖ ಆಸ್ಪತ್ರೆಗಳಲ್ಲಿ ಪ್ರಾಯೋಗಿಕವಾಗಿ ಉಪಯೋಗಿಸುತ್ತಿದ್ದಾರೆ. ರಕ್ತಪರಿಚಲನಾ ಶಸ್ತ್ರತಜ್ಞರು ಮತ್ತು ನರತಜ್ಞರು 'ಏಂಜಿಯೊಪ್ಲಾಸ್ಟಿ' ಎಂಬ ವಿಧಾನದ ಶಸ್ತ್ರಕ್ರಿಯೆಯನ್ನು ಮಾಡುವರು. ಒಂದು ಪುಟ್ಟ ಬಲೂನನ್ನು ಧಮನಿಯೊಳಗೆ ತೂರಿಸಿ ಗೆಡ್ಡೆ ಇರುವ ಜಾಗದಲ್ಲಿ ಅದು ಉಬ್ಬುವಂತೆಮಾಡಿ ರಕ್ತ ಸಂಚಾರವನ್ನು ಸುಗಮಗೊಳಿಸುವರು.

—ಮುಂದುವರಿಯುವುದು

ಪುಸ್ತಕ ಪರಿಚಯ

ಪರಿಸರ ಪ್ರಜ್ಞೆ : ಕಥೆ–ವ್ಯಥೆ—ಲೇಖಕ : ಎಂ. ಮಹೇಶನ್ ; ಪರಿಸರ ಪ್ರಕಾಶನ, ನಂ. ೧೬೮೯, ೧೫ ನೇ ಮುಖ್ಯ ರಸ್ತೆ, ೩೧ ನೇ ಅಡ್ಡ ರಸ್ತೆ, ಬನಶಂಕರಿ, ೨ ನೇ ಹಂತ, ಬೆಂಗಳೂರು–೭೦, ಪುಟಗಳು–xvi+೧೮೮, ಬೆಲೆ ರೂ. ೧೫೦ (ಉತ್ತಮ) ೧೦೦ (ಸಾದಾ) ೧೯೯೮.

ಇದು ನಿವೃತ್ತ ಐ.ಎ.ಎಸ್. ಅಧಿಕಾರಿಯೊಬ್ಬರು ಬರೆದ ಪರಿಸರವನ್ನು ಕುರಿತ ಕೃತಿ. ಪರಿಸರ ಕಾಳಜಿ ಇಂದಿನ ಸಮಾಜದ ಬಹುಮುಖ್ಯ ದೃಷ್ಟಿಕೋನವಾಗುತ್ತಿದೆ. ೧೭, ೧೮ ಮತ್ತು ೧೯ನೆಯ ಶತಮಾನಗಳಲ್ಲಿ ಯುರೋಪಿನಲ್ಲಿ ಸಣ್ಣ ಧ್ವನಿಯಾಗಿ ಹುಟ್ಟಿದ ಕೈಗಾರಿಕಾ ವಿರೋಧಿ ಕೂಗು ತರುವಾಯದಲ್ಲಿ ಚಳವಳಿಯಾಗಿ ಪರಿವರ್ತಿತವಾಯಿತು—ಇದೇ ಪರಿಸರವಾದಿ ಪ್ರಜ್ಞೆಯಾಗಿ ಇಂದು ಬಹುಮುಖಿಯಾಗಿ ಚರ್ಚೆಗೊಳಗಾಗುತ್ತಿದೆ. ಈ ಚಳವಳಿಯ ಬಗ್ಗೆ ಒಂದು ಸಮಗ್ರ ನೋಟವನ್ನು, ವಾಸ್ತವಗಳನ್ನು ಓದುಗರ ಮುಂದಿಡುವುದು ಲೇಖಕರ ಪ್ರಯತ್ನದಲ್ಲಿದೆ.

ಕನ್ನಡದಲ್ಲಿ ಪರಿಸರ ಸಂಬಂಧಿಯಾದ ಚರ್ಚೆ ನಡೆಯುತ್ತಿರುವುದು ಒಂದೆರಡು ದಶಕಗಳಿಂದೀಚೆಗಷ್ಟೆ. ಕೃಷ್ಣಾನಂದ ಕಾಮತ್, ತೇಜಸ್ವಿ, ಎಚ್. ಆರ್. ಕೃಷ್ಣಮೂರ್ತಿ, ನಾಗೇಶ್ ಹೆಗಡೆ, ಮಾಧವ ಗಾಡ್ಗೀಳ್ ಮುಂತಾದವರು ಈ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಜನರಲ್ಲಿ ಪರಿಸರ ಪ್ರಜ್ಞೆ ಬೆಳೆಸುವಲ್ಲಿ ಲೇಖನ, ಭಾಷಣ, ಕಾರ್ಯಾಗಾರ, ಚಳವಳಿಗಳ ಮೂಲಕ ಯತ್ನಿಸುತ್ತಿದ್ದಾರೆ. ಅನೇಕ ಸಂಘ ಸಂಸ್ಥೆಗಳೂ ಈ ನಿಟ್ಟಿನಲ್ಲಿ ಕ್ರಿಯಾಶೀಲವಾಗಿವೆ. ಅಭಿನವ ಬಳಗ ಪರಿಸರ ಸಂಬಂಧಿಯಾದ ಗಂಭೀರ ಕೃತಿಯನ್ನು ಹೊರತಂದಿದೆ. (ಕದಳೀವನ ಕರ್ಪೂರ ೧೯೯೬, ಬೆಂಗಳೂರು.) ಇಷ್ಟಾದರೂ ಕನ್ನಡದಲ್ಲಿ ಪರಿಸರ ಸಾಹಿತ್ಯದ ಕೊರತೆಯೊಂದು ಇದ್ದೇ ಇತ್ತು. ಈ ಚಳವಳಿಯ ಸ್ವರೂಪ, ವ್ಯಾಪ್ತಿ, ಉದ್ದೇಶ, ಇತಿಹಾಸ, ಪ್ರಸ್ತುತ ಸವಾಲುಗಳು—ಇತ್ಯಾದಿ ವಿಷಯಗಳು ಒಂದೆಡೆ ಸಿಗುತ್ತಿರಲಿಲ್ಲ. ಇದರಿಂದ ಎಲ್ಲರೂ ಪರಿಸರದ ಬಗ್ಗೆ ಕೇಳಿದ್ದರೇ ಹೊರತೂ ಸ್ಪಷ್ಟವಾಗಿ 'ತಿಳಿದಿರ'ಲಿಲ್ಲ. ಪ್ರಸ್ತುತ ಕೃತಿ ಪರಿಸರವನ್ನು ಕುರಿತು ಅಧಿಕೃತ, ಶಾಸ್ತ್ರೀಯ ತಿಳಿವಳಿಕೆಯನ್ನು ನೀಡುತ್ತದೆ.

ಪ್ರಕೃತಿಯ ಸಹಜ ದನಿಯಾಗಿ ಅಮರರಾದ ಕುಸುಮಾ ಸೊರಬರಿಗೆ ಕೃತಿಯನ್ನು ಅರ್ಪಿಸಲಾಗಿದೆ. ಈ ಕೃತಿಯಲ್ಲಿ ಯುಗ ಮೌಲ್ಯ, ಅಧ್ಯಯನ ಕ್ರಮ, ಪರಿಸರ ಸಮಸ್ಯೆಯ ಚಾರಿತ್ರಿಕ, ಧಾರ್ಮಿಕ, ಆರ್ಥಿಕ

ಮತ್ತು ಸೈದ್ಧಾಂತಿಕ ಹಿನ್ನೆಲೆಗಳ ವಿಶ್ಲೇಷಣೆ, ಪರಿಸರ ಪ್ರಜ್ಞೆ ನಡೆದುಬಂದ ದಾರಿ, ಭಾರತದಲ್ಲಿನ ಪರಿಸರ ಪ್ರಜ್ಞೆ, ಈಚೆಗೆ ಜೈವಿಕ ವೈವಿಧ್ಯರಕ್ಷಣೆಯನ್ನು ಕುರಿತು ನಡೆಯುತ್ತಿರುವ ಒಡಂಬಡಿಕೆಗಳು, ಜಾಗತೀಕರಣದ ಒತ್ತಡ-ಪ್ರಭಾವ ಹಾಗೂ ಪರಿಸರ ರಕ್ಷಣೆಗೆ ಪೂರಕವಾಗಬಲ್ಲ ಸಾರ್ವತ್ರಿಕವಾಗಿ ಒಪ್ಪಬಲ್ಲ ಕಾನೂನಿನ ಮಾರ್ಗಗಳು ಹಾಗೂ ಪೂರಕ ಸಾಹಿತ್ಯ ಸಾಮಗ್ರಿಗಳನ್ನು ನೀಡಲಾಗಿದೆ. ಏಳು ಅಧ್ಯಾಯಗಳಲ್ಲಿ ಹರಡಿಕೊಂಡಿರುವ ಈ ಕೃತಿಗೆ ಯು. ಆರ್. ಅನಂತಮೂರ್ತಿ ಅವರು ಅನೇಕ ಒಳನೋಟಗಳುಳ್ಳ ಸಂಕ್ಷಿಪ್ತ, ಅರ್ಥಪೂರ್ಣ ಮುನ್ನುಡಿ ಬರೆದಿದ್ದಾರೆ. ಲ. ನರಸಿಂಹಯ್ಯ ಕೃತಿಯನ್ನು ಕುರಿತು ಬರೆದಿದ್ದಾರೆ. ಇವೆಲ್ಲ ಸೇರಿ ಕೃತಿಗೆ ಒಂದು ಗಂಭೀರ ಮುದ್ರೆ ಪ್ರಾಪ್ತವಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನಗಳ ಸಾಧನೆಗಳು ಕೇವಲ ಒಂದೆರಡು ಶತಮಾನಗಳ ಅಂತರದಲ್ಲಿ ಜಗತ್ತಿನ ಜೀವನ ವಿಧಾನವನ್ನು ಬದಲಾಯಿಸಿವೆ. ವ್ಯಾಪಾರ, ವಹಿವಾಟು, ಕೈಗಾರಿಕೆ ಮತ್ತು ಸಾಗಣೆಗಳು ಹುಟ್ಟಿದಾರಭ್ಯ ಸಾಯುವವರೆಗಿನ ಅಂದಾಜು ಅರವತ್ತು ವರ್ಷಗಳ ಅವಧಿಯಲ್ಲಿ ಒಮ್ಮೆಯೂ ಕತ್ತೆತ್ತಿ ಆಗಸವನ್ನು ನೋಡದೆ, ಅಕ್ಕಿ–ರಾಗಿ ಬೆಳೆಯುವ ಹೊಲವನ್ನು ನೋಡದೆ ತಿಂದುಂಡು 'ಸುಖಿ'ಯಾಗಿ ಬದುಕಬಹುದಾದ ಸಾಧ್ಯತೆಯನ್ನು ಕಲ್ಪಿಸಿವೆ. ಇಂಥ ಜೀವನವನ್ನು ಹೊಂದಬೇಕೆಂಬ ಆದಮ್ಯ ಚಪಲ ಆಧುನಿಕ ಬದುಕನ್ನು ಪಡೆಯಬೇಕೆಂಬ ಆಧುನಿಕ (ಅಂದರೆ ಪ್ರಸ್ತುತ ಬದುಕುತ್ತಿರುವ) ಮಾನವನದು. ಇದನ್ನು ಹಿಂಬಾಲಿಸುತ್ತಿರುವ ಮಾನವ ಕೇವಲ ಆರ್ಥಿಕ ಕ್ಷೇತ್ರದ ಗುಲಾಮನಾಗುತ್ತಿದ್ದಾನೆ 'ಎಲ್ಲರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂಬ ದಾಸವಾಣಿಯ ಅತ್ಯಂತಿಕ ಸತ್ಯ ಜನರಿಗೆ ಮರೆತೇ ಹೋಗಿ 'ಎಲ್ಲರು ಮಾಡುವುದು ಕಾರಿಗಾಗಿ, ಭವ್ಯ ಬಂಗ್ಲೆಗಾಗಿ' ಎಂಬಂತೆ ವರ್ತಿಸುತ್ತಿದ್ದಾರೆ, ಮನೋಧರ್ಮ ಕೂಡ ಹೀಗೇ ಆಗುತ್ತಿದೆ. ಎರಡು ವರ್ಷದ ಹಿಂದಿನ ಘಟನೆ ನೆನಪಾಗುತ್ತಿದೆ. ಬಂಗಾರದ ಚಮಚವನ್ನು ಬಾಯಲ್ಲಿಟ್ಟುಕೊಂಡು ಹುಟ್ಟಿದ ಕೂಸೊಂದು ತನ್ನ ಬ್ಯುಸಿ ಉದ್ಯಮಿ ಅಪ್ಪನನ್ನೊಮ್ಮೆ ಕೇಳಿತು. 'ಡಾಡಿ ಅಕ್ಕಿ ಎಲ್ಲಿಂದ ಬರುತ್ತೆ?' ಅಪ್ಪ ಹೇಳಿದ—'ಫ್ಯಾನು, ಫ್ರಿಜ್ಜುಗಳಿಲ್ಲ ಫ್ಯಾಕ್ಟರಿಯಿಂದ ಬಂದಂತೆ.' ಇದನ್ನು ಕೇಳಿದ ನನಗೆ ಆಘಾತವಾಯ್ತು. ಆತ ತಮಾಷೆಗೆ ಹಾಗೆ ಹೇಳಿರಬೇಕೆಂದುಕೊಂಡು ಕೆದಕಿದೆ. ಆ ಅಪ್ಪನಿಗೆ ಬತ್ತವನ್ನು ಉತ್ತಿ-ಬಿತ್ತುವ, ಒಕ್ಕುವ ಯಾವ ಪ್ರಕ್ರಿಯೆಗಳೂ ತಿಳಿದಿರಲಿಲ್ಲ. ಅದರ ಅಗತ್ಯವೂ ಇಲ್ಲವಂತೆ! ಆತನಿಗೆ ಗೊತ್ತಿದ್ದುದು ಪಾಲಿಥಿನ್ ಚೀಲದಲ್ಲಿ ದೊರಕುವ ಅಕ್ಕಿ ಮಾತ್ರ. ಹಾಗಾಗಿಯೇ ಆತ ಅಕ್ಕಿ ಫ್ಯಾಕ್ಟರಿ ಉತ್ಪನ್ನವೆಂದಿದ್ದ. ಮಹಾನಗರಗಳಲ್ಲಿ ಹುಟ್ಟಿ ಅಲ್ಲೇ ಬದುಕುವ ಬಹುಪಾಲು ಶ್ರೀಮಂತ ವರ್ಗದವರು ಈ 'ಡಾಡಿ'ಗಿಂತ ಭಿನ್ನರಲ್ಲ. ಇಂಥವರು ತಮ್ಮ ಬದುಕಿಗೇ ಕಡಿವಾಣ ಹಾಕಿಕೊಂಡವರು, ತಮ್ಮ ಚಪಲ, ಆಸೆಗಳಿಗಲ್ಲ. ನಿಜವಾಗಿ ಪರಿಸರ ಸಮಸ್ಯೆ ಇಂತಹ ಜನವರ್ಗದ ಉತ್ಪಾದನೆ. ಇಂಥವರಿಗೆ ಜೀವ ವೈವಿಧ್ಯದ

ಕಲ್ಪನೆ ಎಲ್ಲಿಯದು? ಈ ಜಗತ್ತಿನಲ್ಲಿ ತನ್ನ ಅಸ್ತಿತ್ವದ ಪ್ರಶ್ನೆಯನ್ನು ತನಗೇ ಕೇಳಿಕೊಳ್ಳದವನು ಪರಿಸರದ ಬಗ್ಗೆ ಯೋಚಿಸಲು ಸಾಧ್ಯವಿಲ್ಲ. ಇಂದು ಮಾನವ ಉಳಿದ ಜೀವಿಗಳ ಉಳಿವಿನ ಔಚಿತ್ಯವನ್ನು ಪ್ರಶ್ನಿಸುತ್ತಿದ್ದಾನೆ. ಕಾನೂನು ಕೂಡ ಮಾನವ ಪಕ್ಷಪಾತಿಯಾದುದು. ಜಾಗತಿಕವಾದ ಈ ಮನೋಧರ್ಮ ಎರಡು ಶತಮಾನಗಳ ಇತಿಹಾಸ ಉಳ್ಳದ್ದು. ಈ ಭೂಮಿಯ ಮೇಲೆ ಸಹಸ್ರಾರು ವರ್ಷಗಳಿಂದ ಜೀವಿಗಳು ಬದುಕುತ್ತಿದ್ದಾವೆಂದರೆ, ಅದಕ್ಕೆ ಜೈವಿಕ ವೈವಿಧ್ಯವೇ ಕಾರಣ. ಇದು ಕೃತಿಯಲ್ಲಿ ಮತ್ತೆ ಮತ್ತೆ ಪ್ರತಿಪಾದಿತವಾಗುತ್ತದೆ. ಇಡೀ ಬ್ರಹ್ಮಾಂಡ ಕೇವಲ ಮನುಷ್ಯನ ಸೊತ್ತು ಎಂದು ಮಾನವ ಭ್ರಮೆಗೊಳಗಾಗಿ ಕೇವಲ ಅರ್ಧಶತಮಾನ ಕಳೆದಿದೆ. ಈ ಅವಧಿಯ (೧೯೪೫ ರಿಂದ ಈಚೆಗೆ) ಇಂಥ ಧೋರಣೆ ಉಂಟುಮಾಡಿದ ಪರಿಣಾಮಗಳು ಜಗತ್ತನ್ನು ಅಳಿವಿನ ಅಂಚಿಗೆ ವೇಗವಾಗಿ ದೂಡುತ್ತಿವೆ. ಈ ಬಗ್ಗೆ ಎಳೆ ಎಳೆಯಾಗಿ ಅಂಕಿ–ಅಂಶಗಳ ಸಹಿತವಾದ ಸ್ಪಷ್ಟ ಚಿತ್ರವನ್ನು ಕೃತಿ ಒದಗಿಸುತ್ತದೆ. ಪ್ರಾಣಿ, ಪಕ್ಷಿ, ಗಿಡ–ಮರಗಳನ್ನು—ಸಕಲವನ್ನೂ ನಮ್ಮ ಪುರಾತನರು ಪೂಜಿಸುವ ಅಥವಾ ಪ್ರಾರ್ಥಿಸುವ ಕಾರಣಗಳಿಂದ ಕಾಪಿಟ್ಟಿದ್ದರು, ಅವುಗಳನ್ನು ಒಂದು ಮೌಲ್ಯವಾಗಿರೂಪಿಸಿ, ನಿಸರ್ಗಕ್ಕೆ ಮುಂದಿನ ಪೀಳಿಗೆ ಕೈಹಾಕದಂತೆ ಒಂದು ಅಂತರವನ್ನುಂಟುಮಾಡಿದ್ದರು. ಇದನ್ನು ಮೌಢ್ಯವೆಂದ ನಾವು ಆ ಮೌಲ್ಯಗಳ ಮೂಲವನ್ನೇ ಧೂಳೀಪಟಮಾಡಿದ್ದೇವೆ. ಪ್ರಾಚೀನರ ಗ್ರಹಿಕೆ ಮೌಢ್ಯವಿರಬಹುದು. ಆದರೆ ಅವುಗಳಿಗೆ ಪರ್ಯಾಯವಾಗಿ ನಾವು ಅನುಸರಿಸಿದ ವಿಧಾನ ಎಷ್ಟರಮಟ್ಟಿಗೆ ಮೌಲ್ಯವುಳ್ಳದ್ದೆಂಬ ಪ್ರಶ್ನೆ ತಡವಾಗಿ ನಮಗೆ ಕಾಡುತ್ತಿದೆ. 'ಈ ಮೌಲ್ಯ' ಅಪಾರವಾದುದು, ನಮ್ಮ ಕ್ರಮ ಇಡೀ ಜಗತ್ತನ್ನು ಬೇಡುತ್ತಿದೆ. ಪ್ರಾಚೀನರ ಮೌಢ್ಯ ನಮಗೆ ಕುಡಿಯುವ ಶುದ್ಧ ನೀರು, ಶುದ್ಧ ಹವೆ, ಬದುಕಬಹುದಾದ ಜಗತ್ತನ್ನು ಉಳಿಸಿತ್ತು. ಆದರೆ ನಾವು ನಮ್ಮ ಮುಂದಿನ ಪೀಳಿಗೆಗೆ ಶೂನ್ಯವನ್ನಷ್ಟೇ ಉಳಿಸುತ್ತಿದ್ದೇವೆ ನಮ್ಮ ಗ್ರಹಿಕೆ, ಜೀವನ ವಿಧಾನಗಳು ಮುಂದಿನ ಪೀಳಿಗೆಗೆ ಭವಿಷ್ಯವಿದೆ ಎಂದು ಹೇಳುವುದಿಲ್ಲ. ಈ ಸತ್ಯ ಕೃತಿಯಿಂದ ಅರಿವಾಗುತ್ತದೆ.

ಒಟ್ಟಾರೆಯಾಗಿ ಈ ಕಾಲಮಾನದಲ್ಲಿ, ಈ ಜಗತ್ತಿನಲ್ಲಿ ಉಸಿರಾಡಿಸುತ್ತಿರುವ, ಓದು ಬಲ್ಲ ಪ್ರತಿಯೊಬ್ಬರೂ ಈ ಕೃತಿಯನ್ನು ಗಮನಿಸಲೇಬೇಕಾಗಿದೆ. ಮುಖ್ಯವಾಗಿ ನಮ್ಮ ರಾಜಕಾರಣಿಗಳು, ಅಧ್ಯಾಪಕರು, ವಿದ್ಯಾರ್ಥಿಗಳು, ಅದಕ್ಕಿಂತಲೂ ಮುಖ್ಯವಾಗಿ ಉದ್ಯಮಿಗಳು, ವ್ಯಾಪಾರಿಗಳು, ಕಾರ್ಮಿಕರು ತಮ್ಮ ತಮ್ಮ ಇಂದಿನ ಕಾರ್ಯಗಳನ್ನು ಬದಿಗಿಟ್ಟು ಮೊದಲು ಇದನ್ನು ಓದಲಿ, ತಮ್ಮ ನಾಳೆಗಳ ಕನಸು ಹೊತ್ತು ಅವರವರ ಇಂದಿನ ಬದುಕಿನ ನಿಷ್ಠುರ, ಅಗೋಚರ ಸತ್ಯಗಳು ಅರಿವಾದರೆ, ತಮ್ಮ ಜೀವನ ಕ್ರಮವನ್ನು ಪುನರಾಲೋಚಿಸಿಕೊಂಡರೆ ಮಾತ್ರ ಅವರವರ ನಾಳೆಗಳಿಗೆ ಅರ್ಥವಿರಬಹುದೆಂಬುದು ಕೃತಿಯಿಂದ ಮನವರಿಕೆಯಾಗುತ್ತದೆ.

ಎಲ್ಲ ಕಥೆ, ಕಾದಂಬರಿಗಳನ್ನೋದಿದಂತೆ ಈ ಕೃತಿಯನ್ನು ಓದಲಾಗುವುದಿಲ್ಲ, ಇದಕ್ಕೆ ಕೆಲವು ಪೂರ್ವತಯಾರಿಗಳು ಅಗತ್ಯ. ಇದು

ಓದಿಸಿಕೊಳ್ಳುವುದಿಲ್ಲ; ಅಧ್ಯಯನಮಾಡಿಸಿಕೊಳ್ಳುತ್ತದೆ. ಸಾಮಾನ್ಯ ಓದಿಸಿಂದ ಮೇಲೆ ನಿಲ್ಲುವ ಈ ಕೃತಿ ಈ ನಿಟ್ಟನಲ್ಲಿ ಕೆಲವು ದೋಷಗಳಿಂದ ಕೂಡಿದೆ. ಅಸಂಖ್ಯಾತ ಕವಿ, ಸಾಹಿತಿ, ಕೃತಿಗಳನ್ನು ಉಲ್ಲೇಖಿಸುವಲ್ಲಿ ಗಂಭೀರ ಅಧ್ಯಯನ ಬಯಸುವ ಸ್ಪಷ್ಟವೂ ಖಚಿತವೂ ಆದ ಮೂಲಗಳನ್ನು ಕ್ರಮವತ್ತಾಗಿ ದಾಖಲಿಸಲಾಗಿಲ್ಲ. ಅಂತ್ಯದಲ್ಲಿ ನೀಡಲಾದ ಗ್ರಂಥಸೂಚಿ ಪರಿಪೂರ್ಣವಾಗಿಲ್ಲ, ಅಭ್ಯಾಸ ಯೋಗ್ಯವಾಗಿಲ್ಲ. 'ವೈವಿಧ್ಯತೆ', 'ನೈಸರ್ಗಿಕತೆ', 'ಸಾಮಂಜ್ಯಸತೆ', 'ವ್ಯಾಪಕತೆ' ಮೊದಲಾಗಿ ಮತ್ತೆ ಮತ್ತೆ ಬಳಕೆಯಾಗುವ 'ತೆ' ಪ್ರತ್ಯಯಾತ್ಮಕ ಪದಗಳು ಅಶುದ್ಧ ಮಾತ್ರವಾಗಿಲ್ಲ, ಓದುವಾಗ ಕಿರಿ ಕಿರಿ ಯುಂಟುಮಾಡುವಂತಹವಾಗಿವೆ. ಎರಡನೆಯ ಅಧ್ಯಾಯವಾದ 'ಅಧ್ಯಯನದ ಕ್ರಮ–ಎರಡು ಮಾತು'— ಇದು ಆರಂಭದಲ್ಲಿ ಪೀಠಿಕಾಸ್ವರೂಪದಲ್ಲೆ ಬರಬಹುದಾಗಿತ್ತೇನೋ. ಕಾವ್ಯ–ಸಾಹಿತ್ಯಗಳಿಂದ ಸಮ್ಮಿಳಿತವಾದ ಗಂಭೀರ ಸ್ವರೂಪದ ಈ ಕೃತಿ ಕಾವ್ಯದೊಲವಿನ ಶೈಲಿಯಿಂದ ಲವಲವಿಕೆಯನ್ನುಂಟುಮಾಡುತ್ತದೆ, ಗಾಬರಿ ಹುಟ್ಟಿಸುವ ನಿರೂಪಣೆ, ಅಂಕಿ–ಅಂಶಗಳು ಓದುಗರ ಮನದ ಆರೋಗ್ಯ ಕೆಡದಂತೆ ಮಾಡುತ್ತದೆ.

ಮುಂದೆಯೂ ಮಹೇಶನ್ ಅವರು ತಮ್ಮ ಅಧ್ಯಯನ ಪೂರ್ಣವಾದ ಚಿಂತನೆಯನ್ನು ಕೃತಿಗಳ ಮೂಲಕ ಸಮಾಜಕ್ಕೆ ತಲುಪಿಸಲಿ, ಮಾನವ ಪೀಳಿಗೆಯ ಬಗೆಗಿನ ಅವರ ಕಾಳಜಿ ಜನರಿಗೆ ತಟ್ಟಲಿ.

ಶ್ರೀಪಾದಭಟ್
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೬



ಓದುಗರ ಅನಿಸಿಕೆ

ಮಾನ್ಯರೆ,

ಕೃತಿ ವಿಮರ್ಶೆ ಮುಕ್ತವಾಗಿ, ವಸ್ತುನಿಷ್ಠವಾಗಿದ್ದಾಗ ಮಾತ್ರ ಅದಕ್ಕೆ ತನ್ನದೇ ಮೆರಗು, ನೈಜತೆ, ಮೌಲ್ಯ ಹಾಗೂ ಅರ್ಥ ದೊರೆಯುವುದು. ಕೃತಿಗೆ ಪೂರಕವಲ್ಲದ ಸುತ್ತಿ ಬಳಸಿದ ವಿಚಾರವೇ ವಿಮರ್ಶೆಯ ವಸ್ತು ಇಲ್ಲವೇ ವಿಮರ್ಶೆಯಾದರೆ ಅದು ನಿಷ್ಠ ವಿಮರ್ಶೆಯ ದನಿಗೆ ಅಥವಾ ನೆಲೆಗೆ ವಿಮರ್ಶಕ ನ್ಯಾಯ ಒದಗಿಸಿದಂತಾಗುವುದೇ? ಅಂತಹ ವಿಮರ್ಶೆ ಇಲ್ಲವೇ ಕೃತಿ ಪರಿಚಯದ ಮಾರ್ಗ ಸಾಧುವೇ?

೧೯೯೯ ರ ಮಾರ್ಚ್ ತಿಂಗಳ 'ಪುಸ್ತಕ ಪ್ರಪಂಚದಲ್ಲಿ' ಶ್ರೀಪಾದಭಟ್ ಅವರು ಪರಿಚಯಿಸಿರುವ ಶ್ರೀ ಜೀನಹಳ್ಳಿ ಸಿದ್ಧಲಿಂಗಪ್ಪ ಅವರ ಕಲ್ಲಂಗಡಿ ಹಣ್ಣಿನ ಕಂಕನರಿ (ಜನಪದ ಕಥೆಗಳ ಸಂಕಲನ) ಕೃತಿಯ ಪರಿಚಯ ವಿಮರ್ಶೆ ಅಂತಹದು. ಭಟ್ ಅವರು ಪ್ರಸ್ತುತ ಕೃತಿಯ ಕಥೆಗಳಲ್ಲಿನ ವರ್ಗೀಕರಣ, ಕಥಾವಸ್ತು, ಭಾಷೆ, ಕಥಾ ಸಂಗ್ರಹದಲ್ಲಿನ ವಿಚಾರ ಇತ್ಯಾದಿಯನ್ನು ಗಮನಿಸದೆ, ಸಾಮಾನ್ಯ ವಿಷಯದ ಹಿನ್ನೆಲೆಯಲ್ಲಿ ಅವನ್ನು ವಿವರಿಸಬೇಕಿತ್ತೆಂಬ ಆಶಯವನ್ನು ವ್ಯಕ್ತಪಡಿಸುತ್ತಾ, ಪ್ರಾಸಂಗಿಕವಾಗಿ ಒಂದೆರಡು ಮಾತುಗಳನ್ನು ಕೃತಿ ಬಗ್ಗೆ ಬರೆದಂತಿದೆ ಅವರ ಕೃತಿ ಪರಿಚಯ ಲೇಖನ. 'ಜನಪದ ಕಥೆಗಳ'—ಆಕರ ಹಿನ್ನೆಲೆ ಸಾಮಾಜಿಕ ನೆಲೆ, ಬದುಕಿನ ವಿನ್ಯಾಸ, ಪರಂಪರೆ ಕಥೆಯ ವಿನ್ಯಾಸ ಹಾಗೂ ಆಚರಣೆಯ ಮೌಲಿಕತೆಯನ್ನು ಆಧರಿಸಿಯೇ ಕಥೆಗಳು ರೂಪ ಪಡೆಯುತ್ತವಲ್ಲವೆ? ಸಂಗ್ರಾಹಕ ಅದೇ ನಾಡಿನ, ವಲಯದವನಾಗಿದ್ದಾಗ ಆತನ ಸಂಗ್ರಹಣೆಯಲ್ಲಿ ಅತಿ ವಾಸ್ತವಿಕತೆ ಮತ್ತು ನೈಜತೆಯನ್ನು ಉಳಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಅಲ್ಲದೇ ಸಂಗ್ರಹಿತ ಕಥೆಗೆ ತನ್ನ ನೆಲೆಯಲ್ಲೇ ಗುರುತರವಾದ ಸಾಂಸ್ಕೃತಿಕ ಸಾಮ್ಯ ಇರುವುದನ್ನು ಬಿಂಬಿಸುವುದು ಆತನ ಜವಾಬ್ದಾರಿ ಕೂಡ. ಆ ಮೂಲಕ ಇಲ್ಲಿನ ಕಥೆಗಳನ್ನು ಶ್ರೀ ಜೀನಹಳ್ಳಿ ಅವರು ವರ್ಗೀಕರಿಸಿರುವುದು ವೈಜ್ಞಾನಿಕವಲ್ಲವೇ? ಅವನ್ನು ಬಿಟ್ಟು ಪರಂಪರೆಯನ್ನೇ ಮುಂದುವರೆಸುವುದು ಸೂಕ್ತ ಎಂಬ ಶ್ರೀಪಾದಭಟ್ ಅವರ ಅಭಿಪ್ರಾಯ ಸಾಧುವೆ?

ಕಥೆಗಳ ಸಂಗ್ರಹ ಕಾರ್ಯ ವಿವರ ಈ ಕಥಾಸಂಗ್ರಹದ ವೈಶಿಷ್ಟ್ಯಕ್ಕೊಂದು ಸಾಕ್ಷಿ. ಅವರೇ ತಮ್ಮ ಸಂಗ್ರಹದ ಅನುಭವ ವಿವರವನ್ನು ನೀಡುವಲ್ಲಿ ಕೊಟ್ಟಿರುವ ನೈಜ ನಿರೂಪಣೆಗಳು ಕಥಾ ಸಂಗ್ರಹದ ಉದ್ದೇಶಕ್ಕೆ ಪೂರಕವಾಗಿದೆ. ಒಟ್ಟಿನಲ್ಲಿ ಕೃತಿಯಲ್ಲಿನ ಸಾಧಕ-ಬಾಧಕಗಳ ಬಗ್ಗೆ ವಿಮರ್ಶಿಸಬೇಕೆ ಹೊರತು ಉಚಿತವಲ್ಲದ ಕಾರಣಗಳ ಮುಖೇನ ಹೀಗಿರಬೇಕಿತ್ತು ? ಹಾಗಿದ್ದರೆ ಉತ್ತಮ ಎಂಬಭಿಪ್ರಾಯ ಸಲ್ಲದೆಂಬುದು ನಮ್ಮ ಅಭಿಮತ.

ಮೈಸೂರು ಜಯಂತಿರಾಮಚಂದ್ರ

ಮಾನ್ಯರೆ,

ಕಳೆದ ಏಪ್ರಿಲ್ ಸಂಚಿಕೆಯಲ್ಲಿ ಅಂತರರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯದ ಸಮಕಾಲೀನ ಸಮಸ್ಯೆಗಳ ಬಗ್ಗೆ ಪ್ರೊ|| ದೇಜಗೌ ಅವರು ತಮ್ಮ ಲೇಖನಗಳಲ್ಲಿ ಬೆಳಕು ಚೆಲ್ಲಿದ್ದಾರೆ. ಅದರಲ್ಲಿಯೂ 'ರಸ್ತೆ ರಾಜಕೀಯ' ಎಂಬ ಲೇಖನದಲ್ಲಿ ಮೈಸೂರು, ಬೆಂಗಳೂರು ನಡುವೆ ಹೊಸಮಾರ್ಗ ನಿರ್ಮಾಣದ ಬಗ್ಗೆ ನೀಡಿರುವ ಸೂಚನೆಯು ವಿಚಾರಾರ್ಹವಾಗಿದೆ. ಅನುಷ್ಠಾನ ಯೋಗ್ಯವಾಗಿದೆ. ಇಂಥ ಬೃಹತ್ ಯೋಜನೆಗಳನ್ನು ರೂಪಿಸುವುದಕ್ಕೆ ಮೊದಲು ಆಡಳಿತ ವ್ಯವಸ್ಥೆಯು ಅನುಭವಿಗಳೊಂದಿಗೆ ಚರ್ಚಿಸಿ, ಅವರ ಸಲಹೆ ಸೂಚನೆ ಅಳವಡಿಸಿಕೊಳ್ಳುವ ಮೂಲಕ ಸಾರ್ವಜನಿಕ ಹಣದ ಸದ್ವಿನಿಯೋಗವಾಗುವುದು ಒಳ್ಳೆಯದು.

ಬಿಡದಿ ಚಿನ್ನಪ್ಪಾಚಾರ್

ಸಂಪಾದಕರಿಗೆ,

ತಾವು ಕಳುಹಿಸುತ್ತಿರುವ ಪುಸ್ತಕ ಪ್ರಪಂಚ ಸಕಾಲಕ್ಕೆ ತಲಪುತ್ತಿದೆ. ಜೊತೆಗೆ ಜನಶಿಕ್ಷಣ ನಿಲಯಕ್ಕೆ ಬರುವ ನಮ್ಮ ಓದುಗರಿಗೆ ಈ ಪುಸ್ತಕವು ಉಪಯುಕ್ತವಾಗಿದೆ. ದಯವಿಟ್ಟು ಮುಂದೆಯೂ ಕಳುಹಿಸಿಕೊಡಿ.

ಕೆ. ಎಸ್. ಯತಿರಾಜ್
ಜನಶಿಕ್ಷಣ ನಿಲಯ ಪ್ರೇರಕ

ಬಾವಿಹಳ್ಳಿ,
ಹಡಗಲಿ ತಾಲ್ಲೂಕು

ಮಾನ್ಯರೆ,

ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ಚಿತ್ರಗಳನ್ನು ಒಳಗೊಂಡಂತೆ ಪ್ರಕಟವಾಗಿರುವ ಏಪ್ರಿಲ್ ಸಂಚಿಕೆಯ ಲೇಖನಗಳು ಸಮಯೋಚಿತವಾಗಿವೆ. ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಗೋಪಾಲ ಆಶ್ರಿತ ಅವರ "ಸರ್ವವ್ಯಾಪಿ ಪಟೇಲರುಗಳು" ಎಂಬ ಲೇಖನವು ಭಾರತದ ಪಟೇಲ ಸಮುದಾಯವು ಇಂಗ್ಲೆಂಡ್‌ನಲ್ಲಿ ಹೇಗೆ ಬೇರು ಬಿಡುತ್ತಿದೆ ಎಂಬುದನ್ನು ಸೋದಾಹರಣವಾಗಿ ಚಿತ್ರಿಸಿದೆ. ನೂರು ವರ್ಷಗಳ ಹಿಂದೆ ಬ್ರಿಟಿಷರ ಜೊತೆ ಪೂರ್ವಆಫ್ರಿಕಾಕ್ಕೆ ರೈಲುದಾರಿ ಕಾಮಗಾರಿಗಾಗಿ ಹೋದ ಭಾರತದ ಪಟೇಲ ಸಮುದಾಯ ಇಂದು ಇಂಗ್ಲೆಂಡ್‌ನ ವ್ಯಾಪಾರ ವಾಣಿಜ್ಯ ಕ್ಷೇತ್ರಗಳನ್ನು ಹೇಗೆ ಆವರಿಸಿದೆ ಎಂಬುದನ್ನು ಕುತೂಹಲಕಾರಿಯಾಗಿ ನಿರೂಪಿಸಿದೆ. ಪ್ರಾಮಾಣಿಕ ದುಡಿಮೆಗೆ ಎಲ್ಲಿದ್ದರೂ ಬೆಲೆ ಇದ್ದೇ ಇದೆ.

ಕಾರ್ಕಳ — ಎಸ್. ರುಕ್ಮಿಣಿ





ಶ್ರೀ ಪಿ. ಆರ್. ತಿಪ್ಪೇಸ್ವಾಮಿ ಅವರ ಕುಂಚದಿಂದ ಮೂಡಿಬಂದ
ದಿ. ಚದುರಂಗರ ಕಲ್ಲಹಳ್ಳಿಯ ಮನೆ

Reg. No. **KRNM-29 / WPP 6**

LICENCE No. 21
LICENCED TO POST WITH PAYMENT

ಸಮಿತಿಯ ವಿಶೇಷ ಪ್ರಕಟಣೆಗಳು

"ಜನಪ್ರಿಯ ವಾಲ್ಮೀಕಿ ರಾಮಾಯಣ"—ರಾಷ್ಟ್ರಕವಿ ಕುವೆಂಪು
—ಸರಳ ಗದ್ಯದ ಅಂದವಾದ ಮುದ್ರಣದ ೪೨೬ ಪುಟಗಳ ಸಮಗ್ರ ರಾಮಾಯಣದ ಬೆಲೆ .... ೫೪–೦೦ ರೂ.

"ಶರಣ ಚರಿತಾಮೃತ"—ಸಿದ್ದಯ್ಯ ಪುರಾಣಿಕ
—ಮಾದಾರ ಚೆನ್ನಯ್ಯನಿಂದ ಮೊದಲುಗೊಂಡು ೭೨ ಶಿವಶರಣರ ಜೀವನ ಚಿತ್ರಣ ಒಳಗೊಂಡ ೮೦೦ ಪುಟಗಳ ಕೃತಿಯ ಬೆಲೆ .... ೭೫–೦೦ ರೂ.

"ಯುದ್ಧ ಮತ್ತು ಶಾಂತಿ" (ಅನುವಾದ)—ಡಾ|| ದೇ. ಜವರೇಗೌಡ
—ಮೂರು ಬೃಹತ್ ಸಂಪುಟಗಳಲ್ಲಿ ; ಪ್ರತಿ ಸಂಪುಟದ ಬೆಲೆ .... ೫೦–೦೦ ರೂ.

"ಸಂಪಾದಕೀಯ ಸಂಕಲನ"
—ಪುಸ್ತಕ ಪ್ರಪಂಚ ಮಾಸಿಕಗಳಲ್ಲಿ ಪ್ರಕಟವಾದ ಡಾ|| ದೇಜಗೌ ಅವರ ಸಂಪಾದಕೀಯ ಲೇಖನಗಳ ಸಂಕಲನ.

"ನಕ್ಷತ್ರ ವೀಕ್ಷಣೆ"—ಜಿ. ಟಿ. ನಾರಾಯಣರಾವ್
—ನಕ್ಷತ್ರಗಳನ್ನು ಕುರಿತು ಕುತೂಹಲ ತಣಿಸುವ ೧೨೦ ಪುಟಗಳ ಕೃತಿಯ ಬೆಲೆ .... ೨೦–೦೦ ರೂ.

"ನನ್ನೂರು"—ಡಾ|| ಎಚ್. ಎಲ್. ನಾಗೇಗೌಡ
—೩೫೦ ಪುಟಗಳ ಈ ಕಾದಂಬರಿಯ ಬೆಲೆ .... ೦೮–೦೦ ರೂ.

. **"ಕಾರಂತ ದರ್ಶನ"**—ಡಾ|| ಶಿವರಾಮಕಾರಂತರ ಬದುಕು ಬರಹ ಕುರಿತು ನಾಡಿನ ಪ್ರಸಿದ್ಧ ಲೇಖಕರು ಬರೆದ ಸಂಕಲನ ಕೃತಿ. ಬೆಲೆ....೫೪–೦೦ ರೂ.

* ಅಂಚೆ ಮೂಲಕ ಬೇಕಾದಲ್ಲಿ ಅಂಚೆ ವೆಚ್ಚ ಪ್ರತ್ಯೇಕ.
* ೫೦೦ ರೂ.ಗಳಿಗೆ ಮೇಲ್ಪಟ್ಟು ಕೊಂಡಲ್ಲಿ ೩೩ ೧/೩ ಭಾಗ ರಿಯಾಯ್ತಿ.
* ಕೆಲವೇ ಪ್ರತಿಗಳು ಮಾತ್ರ ಲಭ್ಯ. ಹೆಚ್ಚಿನ ವಿವರಕ್ಕೆ ಸಂಪರ್ಕಿಸಿ :

ಪ್ರಧಾನ ಸಂಪಾದಕ
ಕ.ರಾ.ವ.ಶಿ. ಸಮಿತಿ, ೫/೧, ವಿನೋಬಾ ರಸ್ತೆ
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬
ದೂರವಾಣಿ : ೫೧೫೧೨೮

Edited by Chandrashekhararadhya Printed by Papanna
Printed & Published by Karnataka State Adult Education Council
5/1 Vinoba Road, Manasa Gangothri, Mysore-570 006-